ಈ ರೀತಿಯ ಜರ್ಮನಿಯ ಆಧೀನತೆಯ ಆರ್ಥಿಕ ಮತ್ತು ಸಾಂಪತ್ತಿಕ ಪರಿಣಾಮವು ಅನಾಹುತಕಾರಿಯಿರುವುದು. ಇಟೆಲಿಯು ಸಂಪೂರ್ಣವಾಗಿ ಜರ್ಮನ್ ಸಾಮ್ರಾಜ್ಯದ ಒಂದು ಅಂಗವಾಗಿ ಪರಿಣಮಿಸಿರುವುದು. ಅದು ಜರ್ಮನಿಯು ಸಾಲದಲ್ಲಿ ಮುಳುಗಿಹೋಗುವಂತಾಗಿದೆ. ತನ್ನ ವ್ಯಾಪಾರವಹಿವಾಟನ್ನೆಲ್ಲಾ ಅದು ಜರ್ಮನ್ ನಾಣ್ಯನಿಮಯದ ಮೂಲಕವೇ ನಡಿಸಬೇಕಾಗಿದೆ– ಈ ಯುದ್ಧದಲ್ಲಿ ಜರ್ಮನಿ ಇಟೆಲಿಗಳು ಗೆದ್ದರೆ, ಇಟೆಲಿಯು ಪಡೆಯುವ ಕೊಳ್ಳೆಯ ಪಾಲನ್ನದು ಜರ್ಮನಿಯ ಸಾಲತೀರಿಸುವುದಕ್ಕೇನೇ ಕೊಡಬೇಕಾಗುವುದು. ಅವು ಸೋತರೆ ಇಟೆಲಿಯ ಸಂಪೂರ್ಣ ನಾಶವಂತೂ ನಿಶ್ಚಯ. ಜರ್ಮನ್ ಗುಪ್ತಪೋಲೀಸರಿಂದಾಗಿ ಇಟೆಲಿಯಾನರು ಅಸಹಾಯಕರಾಗಿದ್ದಾರೆ. ಜನತೆಯು ಬಂದಾಯವೇಳುವುದೇ ಅಸಾಧ್ಯವಾಗಿದೆ. ಸ್ವಲ್ಪವೇನಾದರೂ ವಿರೋಧವನೆದ್ದಲ್ಲಿ ನಿಶ್ಚೈರಣವಾಗಿ ಅದನ್ನೆಣಿಸಲಾಗುತ್ತದೆ. ಗೆಸ್ಟೇಪೋ ಪೋಲೀಸರಿಗೆ ಸಹಾಯಕರಾಗಿ ಜರ್ಮನ್ ಸೈನಿಕರಿರುತ್ತಾರೆ. ಜರ್ಮನ್ ವಿಮಾನಗಳೂ ಇಟೆಲಿಯಲ್ಲಿ ಬಹಳವಿರುತ್ತವೆ. ಇತರ ಜರ್ಮನ್ ಆಕ್ರಮಿತರಾಜ್ಯಗಳಂತೆಯೇ ಇಟೆಲಿಗೆ ರಕ್ಷಣೆಯು ಹೊರಗಿಂದ ಬರಬೇಕಾಗಿದೆ.

ನಿಮ್ಮ ಮಾಡಲಿಕ್ಕಾಗಲೀ, ವಿಜ್ಞಿನ್ನ ಪಡೆಯಲಿಕ್ಕಾಗಲೀ
ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ
ಯಾವುದೆಂದು ನೀವು ಯೋಚಿಸುತ್ತಿರುವುದಾದರೆ ನನ್ನಿಂದಿನ ನಿಜಾಕಾರಿರಿ—
ಇ. ಎ. ಹ್ಯಾಸ್, ಬ್ರಾಂಚ್ ಸೆಕ್ರೆಟರಿ, ಮಂಗಳೂರು, ದ. ಕ.
ಕೆ. ಕೆ. ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ.
ಕೆ. ಕೆ. ಗಣಪಯ್ಯ ಕಟ್ಟೆ, ಡಿವಿಜನಲ್ ಆರ್ಗನೈಜರ್, ಕಟಪಾಡಿ, ದ. ಕ.
ದಿ ನ್ಯೂ ಗಾರ್ಡಿಯನ್ ಆಫ್ ಇಂಡಿಯಾ
ಲೈಫ್ ಇನ್ಶೂರೆನ್ಸ್ ಕೋ., ಲಿಮಿಟೆಡ್, ಮದ್ರಾಸು.
ಮಂಗಳೂರು ಬ್ರಾಂಚ್.

ನವಜೀವಾತು ಎಂಬ ಸೂತಿಕಾ ಸಾರಯನ

(ಇದು ರಾಜಸ್ಥರು ಪೇಟೆಂಟ್ ಮಾಡಿದ್ದು.)
ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಸ್ವಕೃತವ ವೀಹ ಸ್ಥಿತಿಯನ್ನು ನಿರ್ದೇಸಿ ಆಯುರ್ವೇದವ ಅಧಾರದಿಂದ ತಯಾರಿಸಲ್ಪಟ್ಟಿ **ಅಮೋಘವಾವ ಮಧುರ ದೈವ ರಸಾಯನ** ಉಲ್ಪ ಸಂಖ್ಯೆಯಿಂದ ಬಹುವಿಗೂ, ಭಾಗ್ಯಶಾಲಿಗಳಿಗೂ ಸುಲಭವಾಗಿರುವುದು.
೪ ಔನ್ಸಿನ ೨ ಬಟ್ಟಲಿಗಳು ಹೆಚ್ಚು ಕಡಿಮೆ ಆಯಿವೆಯಷ್ಟಕ್ಕೆ ಬೆಲುವು, ಆದರೆ ಕೇವಲ ಆಯಾಸ್ಥಾನಗಳೇ ಒಂದು ಬಾಣಂತಿಕೆಗೆ ಸಾಕಾಗುವವು ನೀವೆ ಮಾಡಿ ಬಳಸಿ ಒಳ್ಳೆಯ ವಿಧಾನಕ್ಕೆ ಬರೆಯಿರಿ.
ಎಂ. ವಿ. ಶಾಸ್ತ್ರಿ, ಆಯುರ್ವೇದ ಭೂಷಣ, ಸಂ.೨ **ಕೂಡಿಯಾಲಬೈಲು, ದ. ಕ.**

ನಾಝಿಗಳು ಇಟೆಲಿಯನ್ನು ಯಾವ ದೃಷ್ಟಿಯಿಂದ ನೋಡುತ್ತಿರುವರೆಂಬುದನ್ನು ಈ ಕೆಳಗಣ ವಿದ್ಯಮಾನವು ವಿದಿತಗೊಳಿಸುವುದು. ಇಟೆಲಿಯಾನ ಸ್ತ್ರೀಯನ್ನು ಮದುವೆಯಾಗಿದ್ದ ಜರ್ಮನ್ನೊಬ್ಬನು ಇಟೆಲಿಯ ರೇಡಿಯೋ ವಾರ್ತೆ ಕೇಳಿದುದಕ್ಕಾಗಿ ಖಟ್ಲೆಗೆ ಗುರುಮಾಡಲ್ಪಟ್ಟನು. ಆಗ ಆತನು ಇಟೆಲಿಯನ್ ಪತ್ರಿಕೆಗಳನ್ನು ತಾನು ಪ್ರತಿವಾರ ಪಡೆಯುತ್ತಿದ್ದೇನೆ. ಅದಕ್ಕೇನೂ ಈವರೆಗೆ ಆಕ್ಷೇಪವಿರಲ್ಲಿಲ್ಲವೆಂದು ಹೇಳಿದನು. ಅವನಿಗೆ ೬ತಿಂಗಳ ಶಿಕ್ಷೆ ವಿಧಿಸಲಾಯಿತು. ಆತನ ಹೆಂಡತಿ ಇಟೆಲಿಯಾನ ಸ್ತ್ರೀ ಇದ್ದುದರಿಂದಲೂ, ತಾನು ಕೇಳಿದ ವರ್ತಮಾನಗಳನ್ನವನು ಇತರರಿಗೆ ಹೇಳಿಲ್ಲವಾದುದರಿಂದಲೂ ಇನ್ನೂ ಕಠಿಣ ಶಿಕ್ಷೆಯು ಅವನಿಗೆ ಕೊಡಲ್ಪಡಲಿಲ್ಲ. ಈ ಜರ್ಮನನು ಕೇಳಿದ ರೇಡಿಯೋ ಸ್ಟೇಶನು ಪೋಪರ ನೆಟ್‌ಕನ್ ಪಟ್ಟಣದ್ದು ಕೂಡಾ ಅಲ್ಲ. ಅವನ್ನು ಮುಚ್ಚುವಂತೆ ಮಾಡಬೇಕೆಂದು ಹಿಟ್ಲರರು ಮುಸಲೋನಿಯವರನ್ನು ಒತ್ತಾಯಪಡಿಸಿರುವರೆಂದು ತಿಳಿದು ಬರುತ್ತದೆ. ಇಟೆಲಿಯು ರೇಡಿಯೋ ವಾರ್ತೆಯನ್ನು, ಇತರ ನೈರಿ ರಾಷ್ಟ್ರಗಳ ರೇಡಿಯೋ ವಾರ್ತೆಯಂತೆಯೇ ಜರ್ಮನ್ ಸರಕಾರವು ಸರಿಗಣಿಸಲು ಕಾರಣನೇನೆಂಬುದು ವಿಚಿತ್ರ ವಿಷಯವಲ್ಲವೇ? ಆಪ್ತ ರಾಷ್ಟ್ರವೆನಿಸುವ ಇಟೆಲಿಯನ್ನು ಜರ್ಮನರು ಕಾಣುವ ರೀತಿ ಹೀಗೆ. ಇದಕ್ಕಿಂತಲೂ ವೈನ್ಯಾವಸ್ಥೆಯು ಇಟೆಲಿಗಿನ್ನೇನು?

ನವಯುಗಕ್ಕೆ ಇಂದೇ ಚಂದಾದಾರರಾಗಿರಿ.

ವ್ಯಾಪಾರಿಗಳ ಸ್ವಾರ್ಥವು ಮಿತಿಮೀರುತ್ತಿದೆ.

ಸರಕಾರವು ವಿಪರೀತವಾದ ಅವರ ಲಾಭಕ್ಕೆ ಅಂಕುಶ ಹಾಕಬೇಕು.

ಪ್ರಸ್ತುತದ ವಿಶಿಷ್ಟ ಪರಿಸ್ಥಿತಿಯಲ್ಲಿ ಪ್ರತಿಯೊಂದು ವಸ್ತುವಿನ ಬೆಲೆಯನ್ನೂ ನಿಯತಗೊಳಿಸಬೇಕು.

ವೈಯಕ್ತಿಕ ಲಾಭ ಸಂಪಾದನೆಗೊಂದು ಮಿತಿಯೇ ಇಲ್ಲದಿರುವುದೇ ಪ್ರಾಯಶಃ ಇಂದಿನ ಭಂಡವಾಳಶಾಹಿ ಪದ್ಧತಿಯ ಆತಿ ದೊಡ್ಡ ದೋಷ ಆದುದರಿಂದಲೇ ಹಲವು ಭಿಕ್ಷ್ಣಕರ ನಡುವೆ ಕೆಲವೇ ಮಂದಿ ಲಕ್ಷಾಧೀಶರು ಮೆರೆಯುವ ವಿಪರ್ಯಾಸವು ಕಣ್ಣು ಕುಕ್ಕುತ್ತಿದೆ ಈ ಭಂಡವಾಳಶಾಹಿಯ ಕೈಗೊಂಬೆಯಾಗಿರುವ ಸರಕಾರವು ಇಂತಹ ವಿಪರ್ಯಾಸವನ್ನು ಕಡಿಗಣಿಸಿ ಸ್ವೇಚ್ಛಾನುಸಾರವಾಗಿ ನಡೆಯ ಬಿಡುತ್ತದೆ ಆದು ಸಮಾಜಕ್ಕೆ ಎಷ್ಟೊಂದು ಹಾನಿಕರವಾದರೂ ಆದನ್ನು ಕಡಿಗಣಿಸುತ್ತದೆ. ಆದುದರಿಂದಲೇ ಭಂಡವಾಳಶಾಹಿ ಪದ್ಧತಿಯೂ ಆದರ ಜತೆಯಾದ ಸಾಮ್ರಾಜ್ಯಶಾಹಿಯೂ ಇಂದು ಮುಗ್ಗುರಿಸುತ್ತಿವೆ. ಒಂದು ಜನಾಂಗದ ಸಮಷ್ಟಿ ಹಿತಕ್ಕಾಗಿ ವ್ಯಾದುರ್ಭಾವ ಕ್ಕಾಗಿಯೇ ವ್ಯಕ್ತಿಯು ಇರಬೇಕೆಂಬ ಫೆಸಿಸ್ಟ್ ಪದ್ಧತಿಯಲ್ಲಿ ವಿಪರೀತ ವೈಯಕ್ತಿಕ ಲಾಭವು ಅಸಾಧ್ಯವಾಗಿದೆ ಈ ದೃಷ್ಟಿಯಿಂದ ಸಾಮ್ರಾಜ್ಯಶಾಹಿಗಿಂತ ಆದು ಲೇಸೆಂದು ಹೇಳಬಹುದು ಈಗಣ ಯುದ್ಧವೆಂದರೆ ಹಳೆಯ ಭಂಡವಾಳಶಾಹಿ ಮತ್ತು ಆಧುನಿಕ ಫೆಸಿಸ್ಟ್ ಶಕ್ತಿಗಳೊಳಗಣ ಮಹತ್ತಾದ ಘರ್ಷಣ.

ಯುದ್ಧದ ಆವಶ್ಯಕತೆಯಿಂದ ಇಂಗ್ಲೆಂಡು, ಆಮೆರಿಕನೇ ಮೊದಲಾದ ಬಂಡವಾಳಶಾಹಿಯ ಮುಖ್ಯ ಆಶ್ರಯವಾಗಿದ್ದ ರಾಜ್ಯಗಳೇ ತಮ್ಮ ಹಳೆಯ ರೀತಿ ನೀತಿಗಳನ್ನೆಲ್ಲಾ ಬಿಟ್ಟು ಕೆಲಮಟ್ಟಿಗೆ ಫೆಸಿಸ್ಟ್ ಕ್ರಮಗಳನ್ನೂ ಇನ್ನು ಕೆಲಮಟ್ಟಿಗೆ ಸಮತಾವಾದಿ ರೀತಿ ನೀತಿಗಳನ್ನೂ ಅನುಸರಿಸಿರುತ್ತವೆ. ಇಂಗ್ಲೆಂಡಿನಲ್ಲಿ ಶಾಂತರೀತಿಯಿಂದ ಮಹತ್ತಾದೊಂದು ಕ್ರಾಂತಿಯೇ ಆಗಿದೆ ಖಾಸಗಿ ಸೊತ್ತು ಮತ್ತು ಮ್ಯಾಲ ಕತ್ತವು ಮಾಯವಾಗುತ್ತಿದೆ. ಸಮಾಜ ಹಿತವಿಘಾತುಕವಾಗಿ ವ್ಯಕ್ತಿಯು ಸ್ವಾರ್ಥ ಸಾಧಿಸುವುದೇ ಅಸಾಧ್ಯವಾಗಿದೆ ಯುನ್ಯಾಟೆಡ್ ಸ್ಟೇಟ್ಸ್‌ನಲ್ಲಿ ಕೂಡಾ ವೈಯಕ್ತಿಕ ಸ್ವಾರ್ಥ ಮತ್ತು ಇಚ್ಛಾನುಸಾರವಾದ ಲಾಭ ಸಂಪಾದನೆಗೆ ಕಠಿಣ ನಿರ್ಬಂಧ ಹಾಕ ಲಾಗಿದೆ ಯುದ್ಧದಿಂದಾಗಿರುವ ಮಹತ್ತಾದ ಸತ್ಪರಿಣಾಮವಿದು. ಆಸ್ಟ್ರೇಲಿಯ, ಕೆನೆಡ ಮೊದಲಾದ ಬ್ರಿಟಿಷ್ ಸಾಮಂತ ರಾಜ್ಯಗಳೂ ಕೂಡಾ, ಯುದ್ಧದ ಒತ್ತಾಟದಿಂದ ಖಾಸಗಿ ಸ್ವಾರ್ಥ ಮತ್ತು ವೈಯಕ್ತಿಕ ಲಾಭಾಭಿಲಾಷೆಗೆ ತಡೆಹಾಕಿವೆ.

ಹಿಂದುದೇಶದಲ್ಲಿ ಮಾತ್ರ ಅಂತಹ ಬದಲಾವಣೆಯೇನೂ ಆಗಿರುವಂತಿಲ್ಲ ಯುದ್ಧ ಪ್ರಕೇಂದ್ರ ಅಧವಾ ಪ್ರಾಂತಿಕ ಸರಕಾರಗಳ ಮನೋನೃತ್ತಿಯಲ್ಲಿ ಹೆಚ್ಚಿನ ಬದಲಾವಣೆಯನ್ನೇನೂ ಮಾಡಿರುವುದಿಲ್ಲ ಯುದ್ಧ ಫಂಡಿಗೆ ಒಂದಷ್ಟು ಹಣಕೊಟ್ಟು ಬಿಟ್ಟಲ್ಲಿ ಖಾಸಗಿ ಸ್ವಾರ್ಥವನ್ನು ಎಷ್ಟಬೇಕಾದರೂ ಸಾಧಿಸಲು ಸರಕಾರವೇ ಅಭಯ ಕೊಡುತ್ತದೆ. ರಾಜ ಮಹಾರಾಜರು, ಜಮಿನ್ದಾರರು ಮತ್ತು ಭಂಡವಾಳದಾರರಿಂದಲೇ ಆದು ಯುದ್ಧ ಫಂಡಿಗೆ ಹಣವನ್ನು ಪಡೆಯುತ್ತಿದೆ. ಭಯಂಕರ ನಿರುದ್ಯೋಗದ ನಿಮಿತ್ತ ಸೈನ್ಯಕ್ಕೆ ಸೇರಲು ಬೇಕಷ್ಟು ಹಿಂದೀ ತರುಣರು ಮೇಲಾಡಿಕೊಂಡು ಬರುತ್ತಿದ್ದಾರೆ ಅಂದ ಮೇಲೆ ಸರಕಾರವು ಹಿಂದುದೇಶದಲ್ಲಿ ಹಳೆಯ ಭಂಡವಾಳಶಾಹಿ ಪದ್ಧತಿಗೆ ಮತ್ತಷ್ಟು ಇಂಬನ್ನು ಕೊಡುತ್ತಿರುವುದೇ ಹೊರತು ಸಮಷ್ಟಿ ಹಿತದ ಕಡೆಗೆ ಲಕ್ಷ್ಯಕೊಡುವಂತೆ ತೋರುವುದಿಲ್ಲ ದೇಶದ ಏಕಮಾತ್ರ ರಾಷ್ಟ್ರೀಯ ಮತ್ತು ಜನತೆಯ ನಿಜವಾದ ಹಿತಸಾಧಕ ಸಂಸ್ಥೆಯಾದ ಕಾಂಗ್ರೆಸು ಗಾಂಧಿಜಿಯವರ ನಾಯಕತ್ವದಲ್ಲಿ ಸನ್ಯಾಸ ಸ್ವೀಕರಿಸಿರುವುದರಿಂದ, ಸರಕಾರವು ಯಾವ ತೊಂದರೆಯೂ ಇಲ್ಲದೆ ಅಡಳಿತವನ್ನು ಸಸೂತ್ರವಾಗಿ ನಡಿಸುತ್ತಿದೆ.

ಯುದ್ಧದ ವಿಶಿಷ್ಟ ಪರಿಸ್ಥಿತಿಯನ್ನು ದುರುಪಯೋಗಗೊಳಿಸಿ ವ್ಯಾಪಾರಿಗಳೇ ಮೊದಲಾದವರು ಜನ ಸಾಮಾನ್ಯರನ್ನು ಪಂಚಿಸಿ ತಮ್ಮ ವೈಯಕ್ತಿಕ ಲಾಭದ ಚೀಲವನ್ನು ವಿಪರೀತವಾಗಿ ತುಂಬುತ್ತಿದ್ದಾರೆ. ಅವರ ಸ್ವಾರ್ಥ ಮತ್ತು ಲೋಭಕ್ಕೊಂದು ಮಿತಿಯೇ ಇರುವಂತಿಲ್ಲ. ಆಹಾರ ಸಾಮಾಗ್ರಿಗಳ ಬೆಲೆಯು ಸುಮಾರು ಶೇಕಡ ರೂ 10-೨-೦ ರಷ್ಟು ಅಧಿಕವಾಗಿರುತ್ತದೆ. ಕಬ್ಬಿಣ ಮೊದಲಾದ ಲೋಹ ಮತ್ತು ಲೋಹ ಸಾಮಾಗ್ರಿಗಳ ಬೆಲೆಯು ಎರಡು ಮೂರು ಪಾಲಷ್ಟು ಹಬ್ಬಿದೆ. ವಸ್ತ್ರದ ಬೆಲೆಯೂ ವಿಶೇಷವಾಗಿ ಏರಿದೆ ಜಾಪಂಸಿನಿಂದ ವಸ್ತುಗಳು ಬರುವುದು ನಿಲ್ಲಸಲ್ಪಟ್ಟ ಮೇಲಂತೂ ಸಾಮಾನುಗಳ ಬೆಲೆಯು ಒಮ್ಮೆಯೇ ಬಹಳವಾಗಿ ಏರಿಸಲ್ಪಟ್ಟಿವೆ ವ್ಯಾಪಾರಿಗಳು ಒಂದಲ್ಲೊಂದು ನೆವನವನ್ನೊಡ್ಡಿ ಸಾಮಾನುಗಳ ಬೆಲೆಯನ್ನು ದಿನೇ ದಿನೇ ಏರಿಸುತ್ತಲೇ ಇದ್ದಾರೆ. ಜನತೆಯು ಸಾಂತ್ವಿಕ ಸ್ಥಿತಿಯ ಗೊಡವೆಯೇ ಅವರಿಗಿರುವುದಿಲ್ಲ. ಯಾವ ರೀತಿಯಿಂದಾದರೂ ತಮ್ಮ ಕಿಸೆ-ತುಂಬಿಸುವುದೊಂದೇ ದೃಷ್ಟಿ ಅವರಿಗೆ ಆದಕ್ಕಾಗಿ ಅವರು ಎಂತಹ ಸೂತ್ರಚಾಲನೆಗಾದರೂ ತಯಾರಿರುತ್ತಾರೆ.

ಇಂತಹ ಜನ ಹಿತಘಾತುಕ ಮನೋನೃತ್ತಿ ಮತ್ತು ವರ್ತನೆಯನ್ನು ನಿಗ್ರಹಿಸುವುದು ಸರಕಾರದ ಆವ್ಯಕರ್ತವ್ಯವಿರುತ್ತದೆ. ಇಲ್ಲವಾದರೆ ಜನತೆಯಲ್ಲಿ ತೀವ್ರ ಅತೃಪ್ತಿಯೆದ್ದು ಗಲಾಟೆಗಳೆದ್ದು ಶಾಂತಿ ಭಂಗಕ್ಕೆ ಕಾರಣವಾಗಬಹುದು. ಹಲವು ಮಂದಿ ವ್ಯಾಪಾರಿಗಳು ಇಷ್ಟರಲ್ಲೇ ಲಕ್ಷಗಟ್ಟಿ ಲಾಭಹೊಡೆದಿರುವರು ಯುದ್ಧವು ಇನ್ನೂ ಎರಡು ಮೂರು ವರ್ಷ ನಡೆದಲ್ಲಿ ಈ ಜನರಿಗೆ ಜನತೆಯನ್ನು ಸುಲಿಯಲು ಮತ್ತಷ್ಟು ಅನುಕೂಲವಾಗುವುದು. ವ್ಯಾಪಾರಿಗಳು ತಮ್ಮಲ್ಲಿ ಮೊದಲಿದ್ದ ಸ್ಟೋಕನ್ನೇ ಯುದ್ಧದ ನೆವನದಿಂದ ಎರಡು ಮೂರುಪಾಲು ಹೆಚ್ಚಿನ ಬೆಲೆಗೆ ಮಾರುತ್ತಿರುವರು ಇನ್ನೂ ಬೆಲೆ ಏಚ್ಚು ಸಿಗಬೇಕೆಂಬ ಆಮೆ ವ್ಯಾಪಾರಿಗಳು ಕೆಲವು ಮ್ಯಾಲುಗಳನ್ನು ಹೊರಯಾಕುವುದೇ ಇಲ್ಲ ಸಮಾಜ ಘಾತಕರಾದ ಇಂತಹ ವರ್ತನೆಯನ್ನು ಸರಕಾರವು ನಿರ್ದಾಕ್ಷಿಣ್ಯವಾಗಿ ಅಣಗಿಸುವ ಬವಲಿಗೆ ಅಸಹ್ಯಕ್ಷ ಪ್ರೋತ್ಸಾಹವಿತ್ತರೆ ಮುಂಬ ಎಪ್ಪೋಂದು ವಿಷಮ ಪರಿಸ್ಥಿತಿಯುಂಟಾಗುವುದೆಂದು ಹೇಳಬರುವುದಿಲ್ಲ.

ಯುದ್ಧದ ಪರಿಸ್ಥಿತಿಯಲ್ಲಿ ಜನತೆಯಲ್ಲಿ ಅತೃಪ್ತಿ ಮತ್ತು ಕ್ಷೋಭೆಯುಂಟಾಗದಂತೆ ನೋಡುವುದು ಸರಕಾರದ ಪ್ರಥಮ ಕರ್ತವ್ಯವಿರುತ್ತದೆ ತಮ್ಮ ಜೀವನದ ಆತ್ಯಾವಶ್ಯಕ ವಸ್ತುಗಳ ಬೆಲೆಗಳು, ಬೇಕೆಂದು ವಿಪರೀತವಾಗಿ ಏರಿಸಲ್ಪಟ್ಟು ಜನಸಾಮಾನ್ಯರಿಗೆ ಆದನ್ನು ಕೊಂಡುಕೊಳ್ಳಲು ಅಸಾಧ್ಯವಾದರೆ ಕ್ಷೋಭೆಯೇಳದೆ ಮತ್ತೇನಾಗುವುದು? ಆದುದರಿಂದ ಸರಕಾರವು ವ್ಯಾಪಾರಿಗಳ ವಿಪರೀತವಾದ ಸ್ವಾರ್ಥ ಸಾಧನೆಗೆ ಕೊಡಲೇ ಅಂಕೆ ಹಾಕಬೇಕು ಜನತೆಯ ಸಾಂಪತ್ತಿಕ ಪರಿಸ್ಥಿತಿಯನ್ನು ಪರಿಗಣಿಸಿ ಪ್ರತಿಯೊಂದು ವಸ್ತುವಿನ ಬೆಲೆಯನ್ನು ನಿಯತ ಗೊಳಿಸುವ ವಿಚಾರ ಮಾಡಬೇಕು ಈ ಕುರಿತು ಪ್ರಾಂತಿಕ ಹಾಗೂ ಕೇಂದ್ರ ಸರಕಾರಗಳು ಇನ್ನೂ ನಿದ್ದೆಯಲ್ಲಿರುವುದು ಸಹೃದಯಾಶ್ಚರ್ಯಕರವಿದೆ.

PETROL RATIONING.

You are not getting all the petrol you want because it is required elsewhere to help win the War. You can help still further by contributing the money you save thereby to the Governor's War Fund

ಪ್ರಕಟಣೆ

ಊರ್ಜ್ ತಾಲ್ಲ ನಂಬ್ರ 52ನೇ ಹೆಗ್ಗೂರು ಗ್ರಾಮದವ್ವಿರ್ ದೊಡ್ಡಮನೆ ರಿಜಿಸ್ಟ್ರಿಯ ಸೆಟ್ಟ ಆಳಿಯ ರಾಜೀವ ಸೆಟ್ಟ ಈ ತಾಲೂಕ ಕರ್ಣ ಇವರಿಗೆ ತಿಳಿಯಪಡಿಸುವದೇನಂದ್ರೆ—ನಮ್ಮ ಈ ಕೆಡೆಂಬದ ಹಿಕ್ಕಿನ ಬಾಬ್ತು ಈ ಹೇಟರು ಗ್ರಾಮದ ನಂಬ್ರ 81ನೇ ಪಟ್ಟಾ ಅಸ್ತಿಯ ಕಿಡ್ತಕೆಯು ನನ್ನ ತಾಯಿ ಕಾವೇರಿ ಸದ್ರಿಯು ಈಗ ಕಕ್ಷ ಆಸಿ ಲೆಯಲ್ಲಿ ಇದ್ದಾಳೆ ಮತ್ತು ಇವಳ ಇನ್ನೊಬ್ಬ ಮಗನಾದ ನನ್ನ ಅಣ್ಣ ಸೀನಪ್ಪಸೆಟ್ಟಿಯ ಅನ ಮತ ಪ ಹೇಳಿಕೆ ಅನುಸರಿಯಿರ ತ್ತಾರೆ. ಸದ್ರಿ ಭೂವಿಯ ವಕ್ಕಸಗಳಿಂದ ಹೇರಳ ಗೇಣಿ ಬರುವಿಂತಾಯ್ತು ಬಾಕಿ ಉಂಟು. ಅದನ್ನು ವಸೂಲು ಮಾಡಿ ತಿಂದು ಹಾಗೂ ಬೇಕೆಂಬ ವಿಚಾರಣೆ ಯಂದಲೂ, ವಳ್ಳುಗಳಲ್ಲಾ ಸದ್ರಿ ಕೀನಪ್ಪಸೆಟ್ಟಿ ವಕ್ಕ ಇರುವುದರಿಂದಾ ಸಹ ಸದ್ರಿ ಕಾವೇರಿ ಸದ್ರಿಯು ಭಕ್ಕಳಿಸೆ ಮೃತವಾದರೆ ಗೇಣಿ ವಸೂಲಿಗೆ ಅವಳ ರಜಿಬಿಯಲ್ಲದೆ ಗೇಣಿ ವಸೂಲಿಗೆ ತೆಕಂಡ್ರೆ, ಅಗುತ್ತದೆಂತ ಸುಳ್ಳೆ ರಜಿಬಿದಿಗನ್ನು ಮುಂದಾಗಿ ವಾಪಿಯ ದುರ ಬಗ್ಗೆ ಸದ್ರಿ ಕೀನಪ್ಪಸೆಟ್ಟಿಯವ ಸದ್ರಿ ಕಾವೇರಿ ಸದ್ರಿಯಂದ ಕೆಲವು ಕಾಗ್ದಗಳಿಗೆ ಕೈಮೋಹ್ ತೆಗಿಸಿಟ್ಟುಕೊಂಡಿರುತ್ತಾನೆ ಎಂತ ತಿಳಿದು ಬರುತ್ತದೆ ಮಾತ್ರವಲ್ಲ, ಸದ್ರಿ ಕಾವೇರಿ ಸದ್ರಿ ಹೆಸರಲ್ಲಿ ಸದರಿ ಬರುವ ನಂಬ್ರ 81ನೆ ಪಟ್ಟಾ ಅಸ್ತಿಯು ನಮ್ಮೆಲ್ಲರ ತುಡುಂಬ ಹಕ್ಕಿನ ದೀರೂ ತುಡುಂಬದ ಮಂಬರಾಗಿದ್ದಲ್ಲಾ ಅವಳ ಮರಣ ನಂತ್ರ ನಮ್ಮ ಸ್ವತ್ತಕ್ಕೆ ಗುರಿಪಡಿಸೋಕೆಂಬ ವಿಚಾರಣೆಯಂವ ಸದ್ರಿ ಕಾವೇರಿ ಸದ್ರಿಯ ತಾಯಿಲೆ ಕರ್ಚಿಗೆಂತ ನೆವನ ಮಾಡಿ ಸದ್ರಿ ಕೀನಪ್ಪಸೆಟ್ಟಿಯು ಅವನಿಗೆ ಬೇಕಾದವರ ಮೇರಿಗೆ ಸದ್ರಿ ಅಂತೇಂಸೆದ್ದಿಯುಂ ಸಕ್ಕ ಡಿಮಾಂಡ್ ನೋಟುಗಳು ವಗ್ಗೈರೆ ರಿಕಾರ್ಡು ವಡವ ಆಕೋಚನೆ ಮೇಲೆ ಸದ್ರಿ ಕೀನಪ್ಪಸೆಟ್ಟಿಯು ಇವ್ವಾನಾಗಿ ವಗ್ಗೈರೆ ವರ್ತಮಾನ ಕೇಳುತ್ತೇನೆ. ಈ ರೀತಿ ಆಲೋಚನೆ ಮಾಡಿದಲ್ಲಾದಾವ ಎಲ್ಲಾ ಡಿಸಾಂಡ್ ನೋಟುಗಳು ವ ಗೇಣಿ ರಜಿಬಿದಿಗಳು ವಗ್ಗೈರೆ ರಿಕಾರ್ಡುಗಳು ನಾನು ಮುಂತಾದ ತುಡುಂಬದವರ ಮೇಟಾ, ಸದ್ರಿ ಆಸ್ತಿಯ ಮೇಲೂ, ಸಿಂಧಾಗಕಳ್ಳವುಗಳಲ್ಲ. ಬಾಧೀತಕ್ಕವಗಳಾ ಅಲ್ಲ ಆದರೆ ಅಂತಹ ರಿಕಾರ್ಡುಗಳಿಂದ ನಾನು ಮುಂತಾದ ತುಡುಂಬದವರು ನಕ್ಷತ್ರಕ್ಕೆ ಬೀಳದೆ ಹಾಗೆ ಸದ್ರಿ ಕೀನಪ್ಪ ತೆದ್ದೆ ಪ್ರೀಲಿಜಿಸಿಗೆ ಒಳಪಡ್ಸು ಯಾರಾದರೂ ಅಂತಹ ರಿಕಾರ್ಡಿಂಗೆ ಹೀರ ಬಾರದಾಗಿ ಈ ವ ಖಲಿಕ ಕರ್ಣ ಇವರಿಗೆ ತಿಳಿಸುತ್ತೇನೆ.

ಎಚ್. ರಾಜೀವ ಸೆಟ್ಟಿ ರುಜು
ತಾ. 9-9-41

ತಿದ್ದು ಪಡಿ

ಳಳದನ ೦ ಪ್ರಕಟವಾದ ತುಕ್ಕೆಳಟ್ಟಿ ಬಾಲಶಾಪಾರವಾಯೆ ಸೀತಮ್ಮನವ್ವಿ ಸೆಕೆಂಡ್ರಿ ಗ್ರೇಡ್ ತರ ಬೇತಾದ ಉಪಾಧ್ಯಾಯನ ಬೇಕಾಗಿದೆ ಎಂದಿರುವದನ್ನು ಉಪಾಧ್ಯಾಯಿನಿ ಅಥವಾ ಉಪಾಧ್ಯಾಯ ನೆಂದು ಸರಿಪಡಿಸಿಕೊಳ್ಳಬೇಕಾಗಿ ಮೆನೇಜರ್ ಶ್ರೀ ಕೆ. ಗಿರಿಯಪ್ಪ ಶೆಟ್ಟರು ತಿಳಿಸುತ್ತಾರೆ.

BHUVANENDRA PRODUCTS LTD.,

Head Office and Factory:
Katapadi, S. Kanara

Depots:
1 Maharatha Galli, Hubli
2. 57 Big street, Triplicane Madras

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Useful in Pyorrhoea. Alveolaris. Removes tartar. Prevents caries of the teeth.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"
ದಂತದಾವನ ಚೂರ್ಣ
ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ವ ಕೀವು ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.
ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,
ಕಟಪಾಡಿ, ದ. ಕನ್ನಡ

ಉಡುಪಿ ಸ್ಟಾಕಿಸ್ಟರು:—(1) **ಡಾಕ್ಟರ್ ನಾಯಕ್ಸ್ ಕನ್ಸಲ್ಟಿಂಗ್ ರೂಮ್ಸ್ ಎಂಡ್ ಫಾರ್ಮಸಿ**, (2) **ಶ್ರೀ. ಆರ್. ಎಸ್. ಕಿಣಿ, ರಥಬೀದಿ.**
(3) **ಡಾಕ್ಟರ್ ಪಿ. ಜಿ ಆಚಾರ್ಯ ಫಾರ್ಮಸಿ, ಡಾಕ್ಟರ್ ಕೆ. ಕೇಶವಗಿರಿ ಸೈ L. I. M.**

ಗನೋರಿಯಾ ಪರನಾರೋಗ ಉಷ್ಣರೋಗದ ಮೇಲೆ

— ಔಷಧ —

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೇವು ಬರುತ್ತಿದ್ದರೆ, ಧೂತರಕ್ಕೆ ಹೆಚ್ಚಿದೀ ಜಾಗು ಹತ್ತುತ್ತಿದ್ದರೆ, ಶರೀರದಿಂದ ಬಾವ, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, : ಚಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇದ್ದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೇಂದ್ರ, ಗಂದುಮಾಲಿ, ಕೈಕಾಲು ಪೊಲಿ, ಅರ್ಧಾಂಗ ವಾಯು ಸಡುಸೋಯುವದು ಸ್ತ್ರೀಯರಬಿಲಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿ ಕುಟು ಗರ್ಮಿಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸಂಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಬೇನೆಗಳಿಗೆ ಈ ನಮ್ಮ ಔಷಧವು ಇರುವದು. ಮೊದಲ ದಿವಸ ಬೆಳಿಗ್ಗೆ ೧ ಗುಂಜಿ ಸ್ವಪುಣ ಔಷದ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ಪ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರೆ ೨ ದಿವಸ ಸೇವಿಸಬೇಕು. ಈ ಔಷಧವನ್ನು ಬೇಸಿಗೆಯಲ್ಲಿ ತುಪ್ಪದಲ್ಲಿ, ಛಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಿರಬೇಕು.

ಪತ್ರೆ: ಹಸೀಮಾರ, ಕುಂಬಳಕಾಯಿ, ಬಳ್ಳಿಣ್ಣ ಬಿಡಬೇಕು.

ಬಾಟ್ಲಿಗೆ ೪ ರೂ. ಪೋಸ್ಟ ಚಾರ್ಜ ೪ ಆಣೆ.

ರೇವಣಸಿದ್ಧಪ್ಪ ಹಾಲಪ್ಪ ಡಾವಣಗೇರಿ,
ಆಯುರ್ವೇದ ಔಸಧಗಳ ಮಾಮಿನೆ, ಗದಗ.

ಮಲೇರಿಯಾ ನಿವಾರಿಣಿ

ಚಳ್ಳುರ ದಿನ ಬಿಟ್ಟು ಬರುವ ಜ್ವರ, ಗೆಡ್ಡೆ ಬಂದ ಜ್ವರ, ಇನ್ಫ್ಲುಯೆಂಜಾ, ವಾಲಬತ್ತೆ, ಮೋಡಾಮುಗಳಿಗೆ ಪ್ರಸಿದ್ಧ ಔಷಧಿ ಬಾಟ್ಲಿ 1ಕ್ಕೆ ರೂ. 1—8—0 ಸಣ್ಣ ಬಾಟ್ಲಿ 0—13—0

ಮೇಹ ಕುಠಾರ

ಪ್ರಮೇಹ, ಮೂತ್ರ ಕೃಚ್ಛ, ಮೂತ್ರ ಹೋಗದಿರುವಿಕೆ, ಮೂತ್ರನಾಳದಲ್ಲಿ ಹುಣ್ಣು, ಮೂತ್ರ ನಾಡುವಾಗ ಉರಿ, ಮೂತ್ರದ್ವಾರದಿಂದ ಕೀವು ಬರುವದು, ವೀರ್ಯದಲ್ಲಿ ಧಾತು ಹೋಗುವುದು, ಸೊಂಟನೋವು, ಮೂತ್ರ ಆಗಾಗ ಬಂದು ಶರೆಯಲಿಕ್ಕೆ ಸಾಧ್ಯವಿಲ್ಲದಿರುವುದು ಇವಗಳ ಮೇಲ ದಿವ್ಯ ಔಷಧಿ. ಡಬ್ಬಿ 1ಕ್ಕೆ ರೂ. 2—8—0

ಕಸ್ತೂರಿ ಮಿಶ್ರಣ ದಶಮೂಲ

ಇದು ಪ್ರಸವಾನಂತರ ಬಾಣಂತಿಯರಿಗೆ ಉಪಯೋಗಿಸಲಿಕ್ಕೆ ಅತ್ಯದ್ಭುತಕರವಾದ ರಕ್ತವರ್ಧಕ ರಸಾಯನ. ಇದರ ಸೇವನೆಯಿಂದ ರಕ್ತ ಶುದ್ಧವಾಗಿ ಆಧಿವ್ಯಾಧಿಯಾಗಿ ಬಾಣಂತಿಯರು ಪುಷ್ಟಿಹೊಂದುವರಲ್ಲದೆ ಶಿರುವಿಗೂ ಬೇಕಾದಷ್ಟು ಹಾಲು ಸಿಕ್ಕುವಂತೆ ಮಾಡುವದು. ಬಾಟ್ಲಿಗೆ ರೂ. 1—8—0

ಧಾತುಪುಷ್ಟಿ ಲೇಹ (ಸುವರ್ಣ, ಕಲ್ಪವ, ಸಾಲಾಮಿಶ್ರಿ ಮಿಶ್ರ)

ಇದು ಬಲಹೀನರಿಗೆ ಅತ್ಯದ್ಭುತವಾದ ರಕ್ತವರ್ಧಕ ರಸಾಯನ. ಪ್ರಪ್ಲಾವಸ್ಥ ಶರೀರದ ಉಷ್ಣತೆ, ಧಾತು ಮೂತ್ರದೊದನೆ ಹೊರಹೋಗುವಿಕೆ, ಸೊಂಟನೋವು, ಕೈಕಾಲು ಉಚ್ಚುವುದು, ಮಲಬದ್ಧತೆ, ಒಳಜ್ವರ, ಅರಿಕ್ತತೆ ಇವುಗಳನ್ನೆಲ್ಲಾ ಹೋಗಲಾಡಿಸಿ, ಹಸಿವನ್ನೂ, ಜೀರ್ಣಶಕ್ತಿಯನ್ನೂ ಹೆಚ್ಚಿಸುವುದು ವೀರ್ಯವೃದ್ಧಿಯನ್ನುಂಟು ಮಾಡುವುದು. ಬಾಟ್ಲಿ ಒಂದರ ರೂ. 2—8—0.

ಎಂ. ಗಣಪಯ್ಯ ಎಂಡ್ ಸನ್ಸ್,
ಆಯುರ್ವೇದಿಕ್ ಫಿಜಿಸಿಯನ್ಸ್, **ರಥಬೀದಿ, ಪೊಂಬ ೫೨ ಮಂಗಳೂರು.**

ಔಷಧಿ ಸಿಕ್ಕುವ ಸ್ಥಳಗಳು:— (1) ಪೂರ್ಣಿಂಡಿಯ ಸ್ಟೋರ್ಸ್, ಕೆಮಿಸ್ಟ್ ಅಂಡ್ ಜನರಲ್ ಮರ್ಚೆಂಟ್ಸ್, 183 ಸುಬ್ರಹ್ಮಣ್ಯ ರೋಡ್, ಸರೇಲ, ಬೊಂಬಾಯಿ ನಂಬ್ರ 12. (2) ಜನರಲ್ ಸ್ಟೋರ್ಸ್, ಜಿ. ಐ. ಪಿ. ಮಾಟುಂಗಾ. (3) ಎ ಲ್ಲರ ಪೆಟೆಂಟ್ ಪ್ರಡಕ್ಟ್ಸ್, 91 ಚಿಕ್ಕಪೇಟೆ, ಬೆಂಗಳೂರು ಸಿಟಿ.

ಈ ವಾರದ ಭವಿಷ್ಯ

(ಏನೇ ಪುಟದಿಂದ)

ಭಾಗವಹಿಸಿ ಜನಾನುರಾಗಕ್ಕೆ ಪಾತ್ರರಾಗುವಿರಿ. ತಾ. ೧೫. ೧೫. ೧೪. ೧೫ ಆರೋಗ್ಯ ಮತ್ತು ಉಪಜೀವಿಕಾರಿಗಳಾಗಿನೆ

ವೃಷ್ಟಿಕ:—ಸದ್ಯದ ನಿಮ್ಮ ಆದೃಷ್ಟವು ಅಸದೃಶವಿದುವುದು. ರವಿ ಗುರು ಬುಧ ಶುಕ್ರರು ಸರ್ವಾತ್ಮನಾ ನಿಮಗನುಕೂಲರಿರುವುದರಿಂದ ನಿಮಗಾವ ಭಾಗದಲ್ಲೂ ಕೊರತೆ ಕಾಣದು. ಬುದ್ಧಿಬಲ ಕಾರ್ಯದಕ್ಷತೆ ಇವುಗಳಿಂದ ಬಹುಜನ ಮಾನಿತರಾಗುವಿರಿ. ಸಂಪದ್ಯೋಗವು ಅತ್ಯುತ್ತಮ ಗೊಳ್ಳುವದು. ಸಂಕಲ್ಪಗಳು ಶೀಘ್ರೇಣ ಕಾರ್ಯರೂಪಕ್ಕೆ ಬರಲಿವೆ. ತಾ. 14ರಿಂದ 18ರ ವರೆಗಣ ದಿನಗಳಲ್ಲಿ ಶತ್ರು ಭಯ, ಅರ್ಥವ್ಯಯ, ಅಪಮೃತ್ಯುಕೃತದೋಷಗಳಿಗೆಡೆಯಿವೆ.

ಧನುಃ— ಮನೋರೋಗದಿಂದಾಗಿ ನಿಮ್ಮ ಆರೋಗ್ಯವು ಕೆಡಲಿಬೆಯಾದ ಕಾರಣ ಈ ಭಾಗದಲ್ಲಿ ಹೆಚ್ಚಿನ ಜಾಗ್ರತೆ ವಹಿಸಿರಿ. ಕೃತ್ರಿಮ ಮಿತ್ರರಿಂದ ವಿನಾಕಾರಣ ಹಾನಿಯಿವೆ ಸ್ವಾಭಿಮಾನ ಜಾಗದಲ್ಲಿ ಎನ್ನೋಂದು ಜಾಗೂಕರಿದ್ದಲ್ಲಿ ಕಲಹವಾಗುವ ಸಂಭವವಿವೆ ನೌಕರಿ ವ್ಯಾಪಾರಿ ಮತ್ತು ಸೇನಾಕ ವರ್ಗದವರು ವಿಶೇಷ ಜಾಗ್ರತೆ ವಹಿಸಿರಿ. ತಾ. ೧೫. ೧೫. ೧೪. ೧೫ ಅಪಾರೋಗ್ಯ ಮತ್ತು ಅಪಜಯಕಾರಿಗಳಾಗಿನೆ

ನೃಷ್ಟಿಕ:—ಸದ್ಯದ ನಿಮ್ಮ ಆದೃಷ್ಟವು ಅಸದೃಶವಿದುವುದು. ರವಿ ಗುರು ಬುಧ ಶುಕ್ರರು ಸರ್ವಾತ್ಮನಾ ನಿಮಗನುಕೂಲರಿರುವುದರಿಂದ ನಿಮಗಾವ ಭಾಗದಲ್ಲೂ ಕೊರತೆ ಕಾಣದು. ಬುದ್ಧಿಬಲ ಕಾರ್ಯದಕ್ಷತೆ ಇವುಗಳಿಂದ ಬಹುಜನ ಮಾನಿತರಾಗುವಿರಿ. ಸಂಪದ್ಯೋಗವು ಅತ್ಯುತ್ತಮ ಗೊಳ್ಳುವದು. ಸಂಕಲ್ಪಗಳು ಶೀಘ್ರೇಣ ಕಾರ್ಯರೂಪಕ್ಕೆ ಬರಲಿವೆ. ತಾ. 14ರಿಂದ 18ರ ವರೆಗಣ ದಿನಗಳಲ್ಲಿ ಶತ್ರು ಭಯ, ಅರ್ಥವ್ಯಯ, ಅಪಮೃತ್ಯುಕೃತದೋಷಗಳಿಗೆಡೆಯಿವೆ.

ಧನುಃ— ಮನೋರೋಗದಿಂದಾಗಿ ನಿಮ್ಮ ಆರೋಗ್ಯವು ಕೆಡಲಿಬೆಯಾದ ಕಾರಣ ಈ ಭಾಗದಲ್ಲಿ ಹೆಚ್ಚಿನ ಜಾಗ್ರತೆ ವಹಿಸಿರಿ. ಕೃತ್ರಿಮ ಮಿತ್ರರಿಂದ ವಿನಾಕಾರಣ ಹಾನಿಯಿವೆ ಸ್ವಾಭಿಮಾನ ಜಾಗದಲ್ಲಿ ಎನ್ನೋಂದು ಜಾಗೂಕರಿದ್ದಲ್ಲಿ ಕಲಹವಾಗುವ ಸಂಭವವಿವೆ ನೌಕರಿ ವ್ಯಾಪಾರಿ ಮತ್ತು ಸೇನಾಕ ವರ್ಗದವರು ವಿಶೇಷ ಜಾಗ್ರತೆ ವಹಿಸಿರಿ. ತಾ. ೧೫. ೧೫. ೧೪. ೧೫ ಅಪಾರೋಗ್ಯ ಮತ್ತು ಅಪಜಯಕಾರಿಗಳಾಗಿನೆ

ಮಕರಃ—ಈ ದ್ಯ ಮ ಶೀ ಲ ರಾ ದ ನಿಮ್ಮ ಶ್ರಮಕ್ಕೆ ತಕ್ಕ ಫಲ ಸಿಗದೀವಾರದಲ್ಲಿ. ಮನೆಯವರಲ್ಲಿ ಪರಸ್ಪರ ಕಲಹವಾಗಲಿದೆ. ಮಾತಿನಲ್ಲಿ ನಿಮ್ಮಕ ವಂಚನೆಗಳು ಕೆಚ್ಚುವುದರಿಂದ ಮಿತಭಾಷಿಯಾಗಿದ್ದಷ್ಟು ಉತ್ತಮ. ನೀಚ ಜನರಿಂದಲೂ ಪುಕ್ಕರಿಂದಲೂ ಅಕಸ್ಮಿಕ ಧನಪ್ರಾಪ್ತಿಯು ಯೋಗವಿದೆ. ಶತ್ರು ಪಕ್ಷವು ವೃದ್ಧಿಯನ್ನೈದುವುದು. ಉದ್ಯೋಗದಲ್ಲಿ ನಿರಾಶೆ ಹೆಚ್ಚೀತು. ವ್ಯಾಪಾರದಲ್ಲಿ ಶೈಥಿಲ್ಯವಿರದು. ತಾ. ೧೫ರಿಂದ ವಿಜಯಾಂತ್ಯದ ವರೆಗಿನ ದಿನಗಳಲ್ಲಿ ಇಷ್ಟಸಿದ್ಧಿ ಶತ್ರುನಾಶ, ಧನ ಲಾಭವಾಗಲಿದೆ.

ಕುಂಭಃ—ದಿನೇ ದಿನೇ ವೃದ್ಧಿಹೊಂದುತ್ತಿರುವ ನಿಮ್ಮ ಪ್ರತಿಕಕ್ಷಿ ವರ್ಗದವರ ಕುತಂತ್ರಕ್ಕೆಯಿಂದ ನಿಮಗೆ ಮುಂದೇನು ವಾಗಬಹುದೆಂಬ ವಿಚಾರ ಹೊಳೆಯದಾಗುವುದು. ಮನಸ್ಸನ್ನು ಬಿಗಿಹಿಡಿಯಲಾಗದೆ ವಿಷಯಾಭಿಲಾಷೆಗೆ ಸಿಲುಕಿ ಕಷ್ಟ ನಷ್ಟಗಳನ್ನು ಹೊಂದುವಿರಿ. ಆದರೂ ನೌಕರಿ ವರ್ಗದವರು ಮೈಮರೆಯದೆ ತಮ್ಮ ಶ್ರಮಕ್ಕಿಂತ ಅಧಿಕ ಫಲವನ್ನು ಹೊಂದಲಿರುವರು. ಹಣದ ಆಪತ್ತಿನಿಂದ ಪಾರಾಗುವಿರಿ. ತಾ. ೧೫. ೧೬. ೧೭. ೧೮. ಈ ದಿನಗಳಲ್ಲಿ ಸ್ತ್ರೀಸುಖ, ವಿಜಯ ಧನಲಾಭವಾಗಲಿದೆ.

ಮೀನಃ—ಈ ವಾರವು ನಿಮಗೆ ಬಹು ಮಟ್ಟಿಗೆ ಸುಖದಾಯಿಯಾಗಲಿದೆ ದೈಹಿಕ ಶ್ರಮವನ್ನಷ್ಟೆಯೆ ಕಾರ್ಯಕಶ್ಚರಾದ ನಿಮಗೆ ಲಕ್ಷ್ಮಿಯ ಕೃಪೆಯೂ ದೊರೆಯುವದು. ವಿರೋಧಿಗಳನ್ನು ಸಾಹಸದಿಂದ ನಿಗ್ರಹಿಸುವಿರಿ. ಸಾಂಸಾರಿಕ ತಾಪತ್ರಯಗಳು ದೂರ ತೊಲಗುವವು. ಆದರೆ ಅನಾರೋಗ್ಯ ಪೀಡಿತರಾದ ನಿಮಗೆ ಕೋಪಾದಿಕವಾಗಿ ಕೆಲವರಲ್ಲಿ ಕಲಹವಾಗುವ ಸಂಭವವಿವೆ ಪ್ರಯಾಣವು ಅವಾಯಕರವಿರುವುದು. ತಾ. ೧೫. ೧೬ ಮಾತ್ರ ಸಫಲದಾಯಿಗಳಾಗಿನೆ.

ನೋಟೀಸು

ಉಡುಪಿ ಪಿ. ಮು. ಕೋರ್ಟಿನಲ್ಲಿ

O. P. No. 40/41

1. ರಾಜ ಮೋಹನ 2 ರಾಮು ನೋಹನ— K. ರುಕ್ಮಿಣಿ ಬಾಯಿಯ ವ್ಯಾನರ್ ಮಕ್ಕಳು— ಇವರ ಕೈಮಚಿಂತಕ—ಕಾಪು ಮಿಲ್ಲ ಪಟ್ಟಿ— ಅಷ್ಟಪ್ಪ ಶೆಟ್ಟಿ ವಗ—ಉಡುಪಿ ತಾಲೂಕು ಬಂಗಳೂರು ಗ್ರಾಮ —ಅರ್ಜಿದಾರರು

ಮ್ಯಾನರ್ ಅರ್ಜಿದಾರರ ತಾಯಿ. ಮೃತ K. ರುಕ್ಮಿಣಿ ಬಾಯಿಯ ಹಕ್ಕಿನ, ಮೇಲ್ಕಂಡ ಅರ್ಜಿಯಲ್ಲಿ ವಿವರ್ಸಿದ ಸ್ಥಾಗಳನ್ನು ವಸೂಲುಮಾಡುವರೆ ಮೃತರ ವ್ಯಾನ್ಸಿದಾರರಾದ ಅರ್ಜಿದಾರರು ಬಗ್ಗೆ ಅವರ ಕೈನ ಮಿಂತಕ ಸದ್ರಿ ಮೇಲ್ಕಂಡ ಶೆಟ್ಟಿ ಹೆಸರಲ್ಲಿ ಸಕ್ಷಿ ಕಾನ ಸರ್ಟಿಫಿಕೇಟು ಕೊಡಿಸಬೇಕಾಗಿ ಅರ್ಜಿದಾರರು ಈ ಅರ್ಜಿಕಟ್ಟಾಜ್ಞೆಯಿಂದ, ಹಾಗೆ ಸಕ್ಷಿ ಕಾನ್ ಸರ್ಟಿಫಿಕೇಟು. ಕೊಡುವಲ್ಲಿ ಯಾವಾಗಾದರಿತಿ ಆಕ್ಷೇಪಿಯರು ನಿಮಿತ್ಯರು ತಾ. 1-10-41ನೇ ವಳಗ್ಯೆ 10ಗಂಟೆಗೆ ಈ ಕೋರ್ಟು ಮುಂದೆ ಹಾಜರಾಗಿ ತಮ್ಮ ಆಕ್ಷೇಪವನ್ನು ಜಾಹೀರುಮಾಡಿಕೊಳ್ಳತಕ್ಕದ್ದೆಂತ ಸರ್ವರಿಗೂ ಈ ಮೂಲಕ ಕೀಸೋ ಜಾಗುತ್ತದೆ.

By order of the Court,
ಉಡುಪಿ
ತಾ. 4-9-41. | K. J. Ballal
ಅರ್ಜಿದಾರರ ಕಡೆ ವಕೀಲ್

ದಿನದ ಹೆಚ್ಚಿನ ಭಾಗವನ್ನು ಸುಖದಿಂದ ಕಳೆಯಲಿರುವರು. ತಾ. ೧೫ರಿಂದ ೧೫ರ ವರೆಗೆ ಸ್ತ್ರೀಧನ ಪ್ರಾಪ್ತಿಸಮ್ಮಾನ ಕಾರ್ಯಸಿದ್ಧಿ, ಧನಲಾಭ.

ಮಿಥುನಃ—ಈ ವಾರವು ನಿಮಗೆ ಬಹಳ ಶ್ರಮಕ್ಕೆ ತಕ್ಕ ಫಲ ಸಿಗದೀವಾರದಲ್ಲಿ. ಮನೆಯವರಲ್ಲಿ ಪರಸ್ಪರ ಕಲಹವಾಗಲಿದೆ. ಮಾತಿನಲ್ಲಿ ನಿಮ್ಮಕ ವಂಚನೆಗಳು ಕೆಚ್ಚುವುದರಿಂದ ಮಿತಭಾಷಿಯಾಗಿದ್ದಷ್ಟು ಉತ್ತಮ. ನೀಚ ಜನರಿಂದಲೂ ಪುಕ್ಕರಿಂದಲೂ ಅಕಸ್ಮಿಕ ಧನಪ್ರಾಪ್ತಿಯು ಯೋಗವಿದೆ. ಶತ್ರು ಪಕ್ಷವು ವೃದ್ಧಿಯನ್ನೈದುವುದು. ಉದ್ಯೋಗದಲ್ಲಿ ನಿರಾಶೆ ಹೆಚ್ಚೀತು. ವ್ಯಾಪಾರದಲ್ಲಿ ಶೈಥಿಲ್ಯವಿರದು. ತಾ. ೧೫ರಿಂದ ವಿಜಯಾಂತ್ಯದ ವರೆಗಿನ ದಿನಗಳಲ್ಲಿ ಇಷ್ಟಸಿದ್ಧಿ ಶತ್ರುನಾಶ, ಧನ ಲಾಭವಾಗಲಿದೆ.

ಕುಂಭಃ—ದಿನೇ ದಿನೇ ವೃದ್ಧಿಹೊಂದುತ್ತಿರುವ ನಿಮ್ಮ ಪ್ರತಿಕಕ್ಷಿ ವರ್ಗದವರ ಕುತಂತ್ರಕ್ಕೆಯಿಂದ ನಿಮಗೆ ಮುಂದೇನು ವಾಗಬಹುದೆಂಬ ವಿಚಾರ ಹೊಳೆಯದಾಗುವುದು. ಮನಸ್ಸನ್ನು ಬಿಗಿಹಿಡಿಯಲಾಗದೆ ವಿಷಯಾಭಿಲಾಷೆಗೆ ಸಿಲುಕಿ ಕಷ್ಟ ನಷ್ಟಗಳನ್ನು ಹೊಂದುವಿರಿ. ಆದರೂ ನೌಕರಿ ವರ್ಗದವರು ಮೈಮರೆಯದೆ ತಮ್ಮ ಶ್ರಮಕ್ಕಿಂತ ಅಧಿಕ ಫಲವನ್ನು ಹೊಂದಲಿರುವರು. ಹಣದ ಆಪತ್ತಿನಿಂದ ಪಾರಾಗುವಿರಿ. ತಾ. ೧೫. ೧೬. ೧೭. ೧೮. ಈ ದಿನಗಳಲ್ಲಿ ಸ್ತ್ರೀಸುಖ, ವಿಜಯ ಧನಲಾಭವಾಗಲಿದೆ.

ಮೀನಃ—ಈ ವಾರವು ನಿಮಗೆ ಬಹು ಮಟ್ಟಿಗೆ ಸುಖದಾಯಿಯಾಗಲಿದೆ ದೈಹಿಕ ಶ್ರಮವನ್ನಷ್ಟೆಯೆ ಕಾರ್ಯಕಶ್ಚರಾದ ನಿಮಗೆ ಲಕ್ಷ್ಮಿಯ ಕೃಪೆಯೂ ದೊರೆಯುವದು. ವಿರೋಧಿಗಳನ್ನು ಸಾಹಸದಿಂದ ನಿಗ್ರಹಿಸುವಿರಿ. ಸಾಂಸಾರಿಕ ತಾಪತ್ರಯಗಳು ದೂರ ತೊಲಗುವವು. ಆದರೆ ಅನಾರೋಗ್ಯ ಪೀಡಿತರಾದ ನಿಮಗೆ ಕೋಪಾದಿಕವಾಗಿ ಕೆಲವರಲ್ಲಿ ಕಲಹವಾಗುವ ಸಂಭವವಿವೆ ಪ್ರಯಾಣವು ಅವಾಯಕರವಿರುವುದು. ತಾ. ೧೫. ೧೬ ಮಾತ್ರ ಸಫಲದಾಯಿಗಳಾಗಿನೆ.

Advertise In
Navayuga
And
THE WORLD BUYS WITH YOU

ಸ್ವಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಫೋವಿನ ರಿಂಗ್‌ವರ್ಮ ಮುಲಾಮು. —

ಇಪ್ಪರೆವರಿಗಂ ನಮ್ಮ

ವಿಲಿಯಮ್ ಎಂಡ್ ಕೋ-ರವರ

ರಾಜ ಮತ್ತು ರಾಣಿಯ ಟ್ರೇಡ್‌ಮಾರ್ಕುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಿನಂತೆ ವ್ಯತ್ಯಾಸಮಾದಲಾಗಿದೆ

ಅಮೃತಾಂಜನ ಡಿಫೋವಿನ ತ್ರಿವರ್ಣದ "ರೈಸಿಂಗ್ ಸನ್"
ಈ ಮೇಲಿನ ಸ್ವಾಮುಖ್ಯ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾತಿದಾರ
ರೆಲ್ಲರೂ ಗಮನಿಸಿಕೊಳ್ಳತಕ್ಕದ್ದು.

ನಮ್ಮ ಟ್ರೇಡ್‌ಮಾರ್ಕಿನ ಮೋಸಾದಿಂದ ನಮ್ಮ ವಿವಿಧ ಔಷಧಿಯಲ್ಲಿ ಯಾವ ವ್ಯತ್ಯಾಸವೂ
ಆಗಿಲ್ಲೆಂಬ ಖಂಡಿತ ನಾವು ಈ ಮೂಲಕ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, ಬೊಂಬಾಯಿ, ಮದ್ರಾಸು, ಕಲ್ಕತ್ತ.

ಉಡುಪಿಗೆ ಬಂದಾಗ

ನಿಮಗೆ ಬೇಕಾಗುವ ಯಾವತ್ತೂ ವಿಧದ ಬೆಳ್ಳಿ, ತಾಮ್ರ, ಹಿತ್ತಾಳೆ, ಕೆಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ನಿಗಬೇಕಾದರೆ

ರಘುವೀರಿಯ

ಕಲ್ಯಾಣಿ: ವ್ಯಾಸಾಚಾರ್ಯ ಇವರಲ್ಲಿಗೆ ಬನ್ನಿರಿ.
ಅಲ್ಲಿ ನೋಡಲೂ ಕೊಳ್ಳಲೂ ಬೇಕಷ್ಟು ಸಾಮಾನುಗಳಿವೆ.

The Moolky Bank, Ltd.,

MOOLKY, S.K.

ದಿ ಮೂಲ್ಕಿ ಬ್ಯಾಂಕ್, ಲಿಮಿಟೆಡ್,

ಮೂಲ್ಕಿ, ದ. ಕ.

ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ
1929ರಲ್ಲಿ ಸ್ಥಾಪಿತವಾದದ್ದು.

ನ್ಯಾಯವಾದ ಒಡ್ಡಿಯಿಂದ ಶೇವಣಾತಿ ಪಡೆದು ಸಾಲದ ಬಡ್ಡಿಯನ್ನು ಅದಷ್ಟು ಇಳಿಸಿ, ಗ್ರಾಮದ ಏಳಿಗೆಯನ್ನು ಈ ಸಂಸ್ಥೆಯು ಸಾಧಿಸುತ್ತಿರುವುದು.

M. R. Punja,
President & Manager.

ಯಂ. ಆರ್. ಪೂಂಜ,
ಪ್ರೆಸಿಡೆಂಟ್ ಮತ್ತು ಮೆನೆಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ದೊರೆಯಬೇಕೋ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ಶುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಪಾನ,
ವಿದ್ಯುದ್ದೀಪಾಲಂಕೃತ ಕೋಣೆ.

ಇನ್ನೆಲ್ಲಿವರಗೂ ಕಡಿಮೆ ದರದಲ್ಲಿ ದೊರೆಯುವದೆಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ. ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯವಿದೆ.
ತಾಲೂಕು ಕಚೇರಿಯ ಬಳಿಯಲ್ಲಿರುವ "ಸುಖನಿವಾಸ"ವನ್ನು ಒಮ್ಮೆ ಸಂದರ್ಶಿಸಿರಿ.

ಶುಚಿ ರುಚಿಯಾದ ದಿನವಹಿ ಸ್ಪೆಷಲ್ ತಿಂಡಿಗಳು!
ಬೇಸಿಗೆ ಕಾಲದ ತಂಪಾದ ಪಾನೀಯಗಳು!!
ತಿನಿಗೆ ಇಂಪಾದ ಗಾಯನ! ವಿಶಾಲವಾದ ಆವರಣ!!!

ಸತ್ಯನಾರಾಯಣ ರೆಸ್ಟೋರೆಂಟ್

(ನಂ. 233.)

ಹಳೇ ಕಾನಕಾನ ಹಳ್ಳಿ ರಸ್ತೆ. ಲಾಲಬಾಗ್

ಹಿಂದಿನ ಗೇಟಿನ ಎದುರು

ವಿಶ್ವೇಶ್ವರಪುರಂ. **ಬೆಂಗಳೂರು ಸಿಟಿ.**

ಪ್ರೊಪ್ರೈಟರ್— ಎ. ಪಿ. ಶ್ರೀನಿವಾಸ ಕಾರಂತ.

CONFIDENCE

is a great asset in building Business.

The Bombay Life Assurance Company Limited.

has created Public Confidence

by its

Fair Dealings
Prompt Settlement of Claims
Liberal Terms
Long Experience &
Sound Investments.

To Insure or to represent, it pays you to consult us:

KOCHIKAR BROTHERS, LTD.,

Chief Agents for South India,
Including Indian States.

Udipi, Mangalore, Calicut,
Madras, Trivandrum, Bangalore City,
and Bombay 4.

ಸಾಕೆಂ ಪಳಾಕೆ!

ಮೂರು ವರ್ಷಗಳ ಹಿಂದಿನ ಮಾತು. ಶ್ರೀಮಾನ್ ಶ್ರೀನಿವಾಸರಾಯರು 1,000 ರೂಪಾಯಿ ಬೆಲೆಬಾಳುವ ವಿಮಾ ಪತ್ರಕ್ಕೆ ಸಹಿ ಹಾಕಿದ್ದರು. ಅದೇನು? ಅದು ಅವಶ್ಯಕತೆಯಿಂದ ಮಾಡಿದ ವಿಮೆಯಲ್ಲ. ಮಿತ್ರ ಏಜಂಟರ ದಾಕ್ಷಿಣ್ಯಕ್ಕಾಗಿ ಹಾಕಿದ ಒತ್ತಾಯದ ಸಹಿ! ಅದು ಪ್ರಾಣಾಗಲಿಕ್ಕೆ ಕಾರಣವಿತ್ತು. ರಾಯರಿಗೆ ಕೈ ತುಂಬಾ ವೇತನ ದೊರಕುತ್ತಿತ್ತು; ಸಾಲದುದಕ್ಕೆ ಅವರು ಒಂದು ವರ್ಷದ ಹಿಂದೆ ಪ್ರಾವಿಡೆಂಟ್ ಫಂಡಿಗೂ ಸೇರಿದ್ದರು. ಅವರ ಮಿತ್ರರಾದ ಏಜಂಟರು ರಾಯರೊಡನೆ ಇಷ್ಟೆಷ್ಟು ವಿಮಾ ಪತ್ರವನ್ನು ಕೊಂಡುಕೊಳ್ಳಲು ಸೂಚಿಸಿದರು. ರಾಯರಂತಹ ಸ್ಥಿತಿವಂತರಿಗೆ 1000/- ರೂಪಾಯಿಯ ವಿಮೆಯೆಂದರೇನು! ಏಜಂಟರು ವಾದಿಸುವಾಗ ರಾಯರ ಹೆಂಡತಿಯೂ ಕಿವಿಗೊಟ್ಟು ಕೇಳುತ್ತಿದ್ದರು. ಮಾತಿನ ಮಧ್ಯದಲ್ಲೇ ರಾಯರ ಪತ್ನಿ—"ಈಗಷ್ಟು ಸಾಕು" ಎಂದು ಹೇಳಿ ವಾದವನ್ನು ಕೊನೆಗೊಳಿಸಿದರು. ರಾಯರ ಪತ್ನಿಯ ಮನೆಯೆಂದರೆ ಆನಂದದ ನೆಲೆವೀಡು ಬೇಕಷ್ಟು ಮಿತ್ರರೂ ಸಂಬಂಧಿಕರೂ ಆಪರ ಮನೆಯಲ್ಲಿಲ್ಲದ ದಿನವಿಲ್ಲ. ಅಷ್ಟೆಲ್ಲಾ ಖರ್ಚು ಸಾಲದುದಕ್ಕೆ ವಿಮಾ ಕಂತೇ? ಬೇಡವ ಖರ್ಚು! ಶ್ರೀಮತಿಯರಿಗೆ ತಾನು ಹೇಳಿದ ಮಾತಿನ ಅರ್ಥವೇ ಆಗ ತಿಳಿದಿರಲಿಲ್ಲ.

ಇಂದಿಗೆ ಇಪ್ಪತ್ತು ದಿನಗಳಾದುವು. ಶ್ರೀನಿವಾಸರಾಯರ ಅಗಲುವಿಕೆಯಿಂದಾಗಿ ಅವರ ಪತ್ನಿ ಈಗ ವಿಧವೆ! ವಿಮಾ ಹಣವನ್ನು ಕೊಡುವ ಕಾಗದ ಪತ್ರಗಳೊಂದಿಗೆ ಏಜಂಟರು ದಿವಂಗತ ಶ್ರೀನಿವಾಸರಾಯರ ಮನೆಗೆ ಬಂದಿದ್ದಾರೆ. ರಾಯರ ಪತ್ನಿ ತನ್ನ ಗಂಡನ ಹೆಸರಲ್ಲಿದ್ದ 1000/- ರೂಪಾಯಿಯ ವಿಮಾಪತ್ರವನ್ನು ಅವರಿಗೆ ಕೊಡುತ್ತಿದ್ದಾರೆ. ಅವರ ಪತಿಯ ಹೆಸರಲ್ಲಿದ್ದ ವಿಮೆಯೆಂದರೆ ಕೇವಲ 1,000 - ಮಾತ್ರ! ವಿಮಾ ಪತ್ರವನ್ನು ಏಜೆಂಟರಿಗೆ ಕೊಡುವಾಗ ಮೂರು ವರ್ಷಗಳ ಹಿಂದೆ ತಾನು ಯೋಚಿಸದೆ ಹೇಳಿದ "ಅಷ್ಟು ಸಾಕು" ಎಂಬ ಮಾತು ರಾಯರ ಪತ್ನಿಗೆ ನೆನಪಾಗುತ್ತದೆ. ನಿಜವಾಗಿಯೂ ಅಷ್ಟು ಸಾಕೆ? ಮಗಳ ವರದಕ್ಷಿಣೆಗೆ, ಮನೆವಾರ್ತೆಯ ಖರ್ಚಿಗೆ—ಅಷ್ಟು ಸಾಕೆ? ಹಣಕ್ಕಾಗಿ ತನ್ನ ಏಕ ಮಾತ್ರ ಸಹೋದರನನ್ನೆವರು ನೀಡಿಸುವುದೆ? ಈ ಅಸಂತೋಷಕರ ಭಾವನೆಗಳು ರಾಯರ ಪತ್ನಿಯನ್ನು ದುಃಖೀಕ್ತಗೊಳಿಸಿದುವು.

ನೀವು ಈಗಾಗಲೆ ವಿಮೆಯನ್ನು ಕೊಂಡುಕೊಂಡಿದ್ದರೆ 'ಅಷ್ಟು ಸಾಕು' ಎಂದು ಧ್ಯಾನಿಸಬೇಡಿ. ನಿಜವಾಗಿಯೂ ಅಷ್ಟು ಸಾಕೋ ಎಂದು ಯೋಚಿಸಿರಿ.

ಕನರಾ ಮ್ಯೂಚುವಲ್ ಎಶ್ಯೂರೆನ್ಸ್ ಕಂಪೆನಿ.
ಲಿಮಿಟೆಡ್, ಉಡುಪಿ.

EDITED BY K. K. SHETTY PRINTED & PUBLISHED BY K. H. SHETTY AT THE NAVAYUGA PRESS, UDIPI.

Regd No. M. 3618

Estd. 1921 ಸ್ಥಾಪನೆ.

ಸಾಹುಕಾರರಿಗೂ ಸರ್ಕಾರದವರಿಗೂ ಜೀತಸ್ಥರಿಗೂ ತರ ತರದ ವರ್ಗ, ಊರಿಗೆ ಪುಸ್ತಕಗಳೂ ಲೆಕ್ಕ ಪುಸ್ತಕಗಳೂ ಸುಲಭ ದರದಲ್ಲಿ ನಾಜೂಕಾಗಿ ಮಾಡಿ ಕೊಡಲ್ಪಡುತ್ತವೆ
ನವಯುಗ ಪ್ರೆಸ್,
ಉಡುಪಿ.

ನವಯುಗ

ಲೈಬ್ರರಿ ಪುಸ್ತಕಗಳು
ನಮೂನೆವಾರು
ವಿಷಯವಾರು
ಸೀಲಾ ಸಾಮಗ್ರಿಗಳು
ದೊರೆಯುತ್ತವೆ.
ನವಭಾರತ
ಪುಸ್ತಕ ಭಂಡಾರ,
ಉಡುಪಿ.

ಸಂಪುಟ ೨೧ | Vol. 21 | ಸಂಸ್ಥಾಪಕರು:—ಶ್ರೀ. ಎ. ಬಿ. ಶೆಟ್ಟಿರು, ಎಂ. ಎಲ್. ಎ. | ಸಂಚಿಕೆ ೩ | No. 3

NAVAYUGA WEEKLY

18-9-1941

ತ್ವರೆ ಮಾಡಿರಿ.

ನಿಮ್ಮ ಹೆಮ್ಮಕ್ಕಳಿಗೂ ಗಂಡುಮಕ್ಕಳಿಗೂ ಸಂಗೀತದಲ್ಲಿ ಸಿಜವಾಗಿಯೂ ಅಭಿರುಚಿ ಇದೆ—ಆ ಅಭಿರುಚಿಯನ್ನು ಬೆಳೆಸಿರಿ.! ತಬ್ಲಾ,ಹಾರ್ಮೋನಿಯಂ, ಫಿಡ್ಲು, ಬಿಲ್ಲುಭಜ, ಜಲತರಂಗ, ನರ್ತನ, ಅಭಿನಯ ಮೊದಲಾದ ಕಲೆಗಳನ್ನು ದಕ್ಷಿಣಾದಿ, ಹಿಂದುಸ್ಥಾನಿ ಮತ್ತು ಪಾಶ್ಚಾತ್ಯ ಕ್ರಮದಲ್ಲಿ ಶಾಸ್ತ್ರೋಕ್ತ ರೀತಿಯಿಂದ ಕಲಿಸಿಕೊಡುವ ಸಂಸ್ಥೆ ಮಂಗಳೂರಿನಲ್ಲಿ ಇದೊಂದೇ! ಸರಗಳು ಬಹಳ ಸುಲಭದಲ್ಲಿವೆ. ಪಾಲಾ ವಿದ್ಯಾರ್ಥಿಗಳಿಗೆ ಹೆಚ್ಚಿನ ಸೌಲಭ್ಯಗಳಿವೆ. ಆರ್ಜಿ ಫಾರ್ಮುಗಳನ್ನು ನಮ್ಮ ಆಫೀಸಿನಲ್ಲಿ ಪಡೆಯಿರಿ.

ದಿ ಕರ್ನಾಟಕ ಥಿಯೇಟರ್ಸ್,
ಪ್ರೊಪ್ರೈಟರರು,
ದಿ ಬಡವರಬಂಧು
ಪ್ರಿಂಟಿಂಗ್ ಪ್ರೆಸ್, ಲಿಮಿಟೆಡ್
ಮಹಾತ್ಮಾ ಗಾಂಧಿರೋಡು, ಪೆಂಟಗೊಂಪೇಟೆ,
ಮಂಗಳೂರು.

ಶ್ರೀ ರಾಮಾ ರೆಸ್ಟೋರೆಂಟ್,

ಶ್ರೀ ಕಾಣಿಯೂರು ಮಠದ ಕಟ್ಟೋಣ,
ಉಡುಪಿ.

ಮೇಲ್ದರ್ಜೆಯ, ಉಪಹಾರ ಮತ್ತು ಭೋಜನಗೃಹ. ಪ್ರಯಾಣಿಕರಿಗೆ ವಿಶೇಷ ಅನುಕೂಲತೆಗಳಿವೆ. ವಿದ್ಯಾರ್ಥಿಗಳಿಗೆ ರಿಯಾಯಿತಿ ದರಗಳಿವೆ.

ಎಸ್. ರಾಮಚಂದ್ರ ನಾಯಕ್,
ಮ್ಯಾನೇಜರ್.

ಸೀರೆಗಳು

ಸ್ವದೇಶೀ ಕೈಮಗ್ಗಗಳಿಂದ ನಮ್ಮ ಜನರಿಂದಲೇ ತಯಾರಾಗುವ ಈಗಿನ ಆಭಿರುಚಿಗೆ ಒಪ್ಪುವ ಎಲ್ಲಾತರದ ಸೀರೆಗಳು ಬಗೆ ಬಗೆಯ ಬಣ್ಣವಲ್ಲಿ ಅಂಚಿನಲ್ಲಿ ನಮೂನೆಯಲ್ಲಿ ದೊರೆಯುತ್ತವೆ. ಶುದ್ಧಖಾದಿ ಮತ್ತು ಮಿಲ್ ಬಟ್ಟೆಗಳೂ ಮಾರಲ್ಪಡುತ್ತವೆ.

ಪಿ. ಎ. ಪೈ. ಬ್ರದರ್ಸ್,
ಅಪ್ಪಕ್ಕಿ ಬಳಿ, ಉಡುಪಿ.

ಈಗ ತಾನೆ ಪ್ರಕಟವಾದ
ನಿನೋದ ಪ್ರಧಾನ ನಾಟಕ.

ಜನರಲ್ಲಿ ಒಂದು ಹೊಸ ಹುರುಪು ಹುಟ್ಟಿ ಅದು ವೈಯಕ್ತಿಕ ಜಯೋಗ್ಯತೆಯಿಂದಾಗಿ ಫಲಕಾರಿಯಾಗಬೆ ನಿಸಾರಕ್ಕೆ ಪಾತ್ರವಾಗುವುದು. ಇನು ಜನತೆಯ ಸಹಜವಾದ ದೌರ್ಬಲ್ಯ ಅದರಿಂದಾಗಿ ಹಲವು ಸಂಸ್ಥೆಗಳು ಗಳಿಗೆಗೊಂದರಂತೆ ಅವಿರ್ಭವಿಸಿ ಅಂತೆಯೇ ಅಂತರ್ಧಾನವಾಗುತ್ತಿರುವುವು. ಈ ತತ್ವದ ಸೂಕ್ಷ್ಮ ಪರಿಚಯವನ್ನೇ '**ರಂಗಭೂಮಿ**'

ಎಸ್. ಪಂಚಪಾತ್ರ.

ಕರ್ನಾಟಕದ ಹೆಸರಾಂತ ಸಾಹಿತಿಗಳಲ್ಲೊಬ್ಬರಾದ
ಶ್ರೀ. ಎಸ್. ವೆಂಕಟರಾಜರಿಂದ
ಬರೆಯಲ್ಪಟ್ಟು ಇದೀಗ 'ಕರಿಯರ ಪ್ರಪಂಚ' ದವರಿಂದ ಪ್ರಕಟಿಸಲ್ಪಟ್ಟ ಹೊಸ ನಾಟಕ.

ಬೆಲೆ ಬರೇ ೦ ಲ ೦ ಮಾತ್ರ.

೦ ೯ ೦ ಸ್ಟಾಂಪು ಕಳಿಸಿದವರಿಗೆ ಒಂದು ಪ್ರತಿಯನ್ನು ಬುಕ್ ಪೋಸ್ಟು ನೂಡಿ ಕಳಿಸಲಾಗುವುದು. ಪ್ರತಿಗಳಿಗೆ ಬರೆಯಿರಿ.

ಕಾರ್ಯದರ್ಶಿ.
ಕರಿಯರ ಪ್ರಪಂಚ, ಉಡುಪಿ.

WANTED

Applications are invited upto 30 9-41 from young & energetic candidates who have passed atleast S. S. L. C. for the post of a Manager in the Anantanga' Office. Preference will be given to those who know commercial subjects. The selected candidate will have to put in six months probationary service. Applicants must state their previous experience if anv and state whether they are prepared to give cashsecurity.

The Managing Editor,
"Antaranga" Udipi.

ಉತ್ತಮ ತರದ ಮುದ್ರಣಕ್ಕೆ
ಇತ್ತೀಚೆಗೆ ಇತನಿಯಿಂದಲೂ
ಪ್ರಸಿದ್ಧವಾದ

ಕೆನರಾ ಫಾಪಖಾನೆ

ಮಂಗಳೂರು.

WANTED.

An experienced Compounder preferably one knowing Indian Medicines too. Apply stating previous service

Dr. Kordcal Venkat Rao, L. I. M.
Physician & Surgeon.
UDIPI.

ಜೀರ್ಣೋದ್ಧಾರ

ಉಡುಪಿ ಕಾಡಬೆಟ್ಟು ಶಿವಳ್ಳಿ ಗ್ರಾಮದ ಬಂದಳ್ಳು ಶ್ರೀ ದುರ್ಗಾ ಪರಮೇಶ್ವರಿ ಎಲಿಮೆಂಟರಿ ಶಾಲೆಗೆ ಕಾಮಗಾರಿ ಪ್ರೈವೇಟ್ ಲಿಮಿಟೆಡ್ ಎಂಬ ಸಂಸ್ಥೆಯವರಿಗೆ ಕೊಟ್ಟಿರುವುದಾಗಿ ತಿಳಿಸಲು ವಿಷಾದಿಸುತ್ತೇವೆ. ಕಂಬಳ ಎಸ್ಟಿಮೇಟ್ ಗ್ರಾಂಟಿನ 85% ಕೊಡಲಾಗುವುದು. ಅರ್ಜಿಗಳ ಆಖೈರು ತಾ. 30-9-41 ದೊಳಗೆ ಈ ಕೆಳಗಿನವರೆಗೆ ಮುಚ್ಚಿದ ಮತ್ತು ಕವರಿಂಗ್ ಲೆಟರ್ ಸಮೇತ ಬರಬಹುದು. ಅರ್ಜಿಯಲ್ಲಿ ಈ ಕಾಮಗಾರಿಯ ಮುಕ್ತಾಯ ತಾ. 1-10-41ಕ್ಕೆ ಕೆಲಸಕ್ಕೆ ಸೇರಬೇಕಾಗಿದೆ.

ಕಾರ್ಯಾಯಣ ಆಚಾರ್ಯ.
ಮೇನೇಜರ್,
ಬಂಟಕಲ್ ಶ್ರೀ ದುರ್ಗಾ ಪರಮೇಶ್ವರಿ ಎಲಿಮೆಂಟರಿ ಶಾಲೆ. ಪೋಸ್ಟು ಶಿವಳ್ಳಿ.

THE VIJAYA BANK Ltd.

ಭದ್ರತೆ ಮತ್ತು ಅನುಕೂಲತೆ

ಸಾರ್ವಜನಿಕರು ತಮ್ಮ ಹಣವನ್ನು ಭದ್ರತೆಯಾಗಿ ಯಾವ ಬೇಕಿನಲ್ಲಾದರೂ ಇಟ್ಟು ಸುಖನಿದ್ರೆಯನ್ನು ಪಡೆಯ ಬೇಕೆಂದು ಇಚ್ಛಿಸುವಿರಾದರೆ—ಸರಿ, ಬನ್ನಿ ನಮ್ಮಲ್ಲಿಗೆ ಅತ್ಯುತ್ತಮ ಜವಾಬ್ದಾರಿಕೆಯನ್ನೊಳಗೊಂಡ ವೈವಾಟುಗಳಲ್ಲಿ ನಾವು ನಿಮಗೆ ಸಹಾಯ ಮಾಡಲು ಕೈಹಾಕುತ್ತಿರುವೆವು.

ಬಡಬಗ್ಗರಿಂದ ಆಮಂತ ಶ್ರೀಮಂತರ ವರೆಗೂ ಆವರವರ ಅನುಕೂಲತೆಗನುಗುಣವಾಗಿ ಅತ್ಯಂತ ಚಟುವಟಿಕೆಯಿಂದ ಎಲ್ಲಾ ತರನ ಬೇಂಕು ವೈಸಾಟುಗಳು ನಮ್ಮಲ್ಲಿ ಭರದಿಂದ ಸಾಗುತ್ತಿರುವವು.

ದಿ ವಿಜಯಾ ಬೇಂಕ್ ಲಿಮಿಟೆಡ್,

ಮಂಗಳೂರು, ಉಡುಪಿ, ಕುಂದಾಪುರ, ಕಾರ್ಕಳ ಮತ್ತು ಕಾಪು.

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ನಾವೀನ್ಯತೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳು ಚರಿತ್ರೆಗಳು, ವಾರಮಾಧ್ಯಿಕ ಮತ್ತು ಧಾರ್ಮಿಕ ಗ್ರಂಥಗಳು ನೂರಾರು ಬಗೆಯಲ್ಲಿ ಪ್ರಟವಾಗಿ ಕನ್ನಡಿಗರ ಮನೆಯನ್ನಲಂಕರಿಸಿವೆ; ಮನಪಸ್ಸು ನೆಳೆದಿವೆ

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಬೆಲೆ ೧ ೮ ೦	ಭಯಂಕರ ಸೇಡು	ಬೆಲೆ ೧ ೮ ೦
ಭೀಷಣ ಸಾಹಸ	ಬೆಲೆ ೦ ೧೪ ೦	ಮೋಹಿನಿ	ಬೆಲೆ ೧ ೮ ೦
ಕರಿನೀರು	ಬೆಲೆ ೨ ೦ ೦	ಅಸೂತ್ಯನಂದಿನಿ	ಬೆಲೆ ೧ ೮ ೦
ಭಗವಾನ್‌ದಾಸ	ಬೆಲೆ ೧ ೦ ೦	ಸ್ಕೂಲ ಮಿಸ್ಟ್ರೆಸ್	ಬೆಲೆ ೧ ೪ ೦
ಅವಿವಾಹಿತರ ಸಮಸ್ಯೆ	೧ ೦ ೦	ವೀರರಾಜ ವಿಜಯ	೦ ೧೨ ೦
ನಿಷ್ಕ ಗತಿ	೦ ೪ ೦	ಪಾಣಿಗ್ರಹಣ	೦ ೩ ೦

ಹೆಚ್ಚಿನದಕ್ಕಾಗಿ ಬರೆಯಿರಿ:—

ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಆನಂದವನ, ಹಾವೇರಿ
ಉಡುಪಿ ವಿಜಂಟರು—ನವಭಾರತ ಪುಸ್ತಕ ಭಂಡಾರ, ಉಡುಪಿ.

ಬಾಲಾರ್ಕ ಮದ್ದು

ಚಿಕ್ಕ ಮಕ್ಕಳ ಶಕ್ತಿವರ್ಧಕ ಔಷಧಿ.

ಅಸಂಖ್ಯಾತ ಮಕ್ಕಳ ಪ್ರಾಣವುಳಿಸಿದೆ. ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ. ಗೂಡು ಕಟ್ಟಿ ತೊಂದರೆಯ ಎದೆಯ ಎಲುಬುಗಳ ಮಧ್ಯೆ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ, ತೂಕ ಹೆಚ್ಚುವುದು. ಇದು ಮದ್ದುವಾರಗಿದೆ

ಆಡಿ ಬಿಟ್ಟುವ ನಿಮ್ಮ ಮಕ್ಕಳು
ತಿರುಗಿ ನಿಮ್ಮ ಕೈ ಸೇರುವುವು.

ಸೀಸೆ ೧೪೪ ೧೨ ಆಣೆ;
೪. ಖ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ, ಶಿವಮೊಗ್ಗ
ಉಡುಪಿ ಸ್ಟಾಕಿಸ್ಟರು:— ನವಭಾರತ ಬುಕ್ ಡಿಪೋ, ಉಡುಪಿ.

THE PANGAL NAYAK BANK LTD.

ದಿ ಪಾಂಗಾಳ್ ನಾಯಕ್ ಬೇಂಕ್ ಲಿಮಿಟೆಡ್

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿತು)

ಮುಖ್ಯಕಾರ್ಯಾಲಯ: ಕೋರ್ಟ್ ಬಳಿ, ಉಡುಪಿ, ದ. ಕನ್ನಡ.

ಶಾಖೆಗಳು ಉಡುಪಿ, ಮಂಗಳೂರು, ಕಟಪಾಡಿ, ಕಾಂಜಂಗಾಡ್ ಮತ್ತು ತಿನ್ನಿಗೋಳಿ.

ತೆತ್ತ ಮೂಲಧನ: ೧,೪೭,೧೦೦. ಕ್ಷೇಮ ನಿಧಿಗಳು: ೧,೯೭,೦೦೦.

ಚಿನ್ನಾಭರಣಗಳ ಮಾನಾದಿಕ್ಕೆ ಅನುಕೂಲವಾಗಬಹುದಾದ ಬಾಳುವ ದವಸಗಳ್ಳ, ಸದಾ ಧಾನಗಳಾದ ವ್ಯಾಪಾರದ ಬೀಲುಹುಂದಿ ಇತ್ಯಾದಿಗಳ ಛಿದ್ರತೆಯ ಬೀಳಿ ಸುಲಭದರಗಳಲ್ಲಿ ಸಾಲ ವ ದೊಡ್ಡ ಸಾಲಗಳು ಮತ್ತು ಓವರ್ ಡ್ರಾಫ್ಟ್‌ಗಳು ಸದಾ ಕೊಡಲ್ಪಡುತ್ತವೆ.

ದೀರ್ಘ ವ ಅಲ್ಪ ಅವಧಿಯ ಸಠಿಯ ವೀವಾಹಿತರಿಗೆ ಶ್ರೇಷ ಬಂಡಿಗೂ ಇವರಿಗೂ ಏಕರೀತಿ ಕೃಪಿಕರವಾದ ರೀತಿಗಳಲ್ಲಿ ಅಂಗೀಕರಿಸಲ್ಪಡುತ್ತವೆ.

ಬೇಂಕಿನ ಅತ್ಯಾಧುನಿಕ ವಿಧದ ಸಮಸ್ತ ವೆಹವಾಟುಗಳೂ ನಡೆಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ದಯವಿಟ್ಟು ನೊಕ್ಕಾ ಪತ್ರದ್ವಾರಾ ವಿಚಾರಿಸಿರಿ.

ಈ ವಾರದ ಭವಿಷ್ಯ

ತಾರೀಕು ೧೬—೯—೭೧ರಿಂದ ತಾರೀಕು ೨೨—೯—೭೧ರ ವರೆಗೆ

ಮೇಷ:— "ಪಾಸ್ಯೈದ್ಯಮಸನೋ ಬಂಧುಃ" ಎಂದು ಪ್ರಾಜ್ಞರನ್ನು ವಂತೆ ಉದ್ಯೋಗಕ್ಕೆ ಸದೃಢವಾದ ಬಂಧುವು ಬೇರೊಂದಿಲ್ಲವು. ಆದಕಾರಣ ನೀವು ದೃಢ ಮನಸ್ಸಿನಿಂದ ಉದ್ಯೋಗದಲ್ಲಿ ಕೈಯಿಕ್ಕಿರಿ. ನಿಮ್ಮ ಪ್ರಯತ್ನವು ಪೂರ್ಣ ಫಲಕಾರಿಯಾಗುವದು. ಇದರಿಂದ ನಿಮ್ಮ ಆರ್ಥಿಕತೊಂದರೆಯು ಮಾಯವಾಗುವುದಲ್ಲದೆ ಮನಸ್ಸಿಗೂ ನೆಮ್ಮದಿ ದೊರೆತೀತು. ಪಿತೃ ಸ್ರಕೋಪದಿಂದ ದುಃಸ್ವಪ್ನಗಳು ಬೀಳಬಹುದು. ಸ್ತ್ರೀಯರಿಂದ ಕಲಹವಾಗಲಿದೆ. ತಾ. 21ರಿಂದ 24ರ ವರೆಗಿನ ದಿನಗಳಲ್ಲಿ ಚಿಂತಾಗ್ರಸ್ತರಾಗಿ ಸುಖದಿಂದಿರುವಿರಿ.

ವೃಷಭ:— ಸದ್ಯ ನಿಮಗೆ ಎಲ್ಲಾ ಗ್ರಹರೂ ವಿಮುಖರಿದ್ದರೂ ಮಿತ್ರ ಕ್ಷೇತ್ರಗ ತನಾದ ಲಾಭಸ್ಥಾನವನ್ನು ಹೊಂದಿರ ತಕ್ಕ ಅಂಗಾರಕನ ಅನುಗ್ರಹವು ಚೆನ್ನಾಗಿರುವುದರಿಂದ ಮಹಮಾಪತ್ತುಗಳನ್ನೂ ಕೊಡ ಸುಖದಿಂದ ಕಳೆವಿರಿ. ಮಾನಸಿಕ ರಾದ ನೀವು ನಾನಾ ವಿಧವಾದ ಉದ್ಯಮ ಗಳಿಂದ ಅನಾದಿನದ ಖರ್ಚನ್ನು ಪೂರೈಸಿ ಕೊಳ್ಳುತ್ತಿರುವಿರಿ. ಗೃಹಕಲಹ, ಪ್ರಿಯ ಜನವಿರಹ, ಶತ್ರುಪೀಡೆ ಇತ್ಯಾದ್ಯನಿಷ್ಟಪ್ರ ದಂಸರೆಗಳಿಗೆ ಸಿಲುಕಿದ ನಿಮಗೆ ತಾ 18 23. 24. 25 ಈ ದಿನಗಳಲ್ಲಿ ಕಾರ್ಯ ಜಯ ಸ್ತ್ರೀಮೂಲಕ ಧನಾಪ್ತಿ ಸುಖವೂ ಕಾದ ನಿಗಲಿದೆ.

ಮಿಥುನ:—ದೈವಿಕ ನಿಮಿತ್ತದ ಎದುರಿ ಬೀಳುವುದು ನಿಶ್ಚಯ ನಿಮ್ಮ ಜವೈಷ್ಟವು ಬಹಳ ಹೀನಸ್ಥಿತಿಯಲ್ಲಿದೆ. ಆದ ಕಾರಣ ಜಾಗರೂಕರಾಗಿದ್ದಷ್ಟೂ ಉತ್ತಮ. ಅನಿರೀಕ್ಷಿತ ಘಟನೆಗಳಿಂದ ಕಾಂಚನ ಲಾಭವಿಲ್ಲದಿದ್ದರೂ ಸ್ವಲ್ಪಕಾಲವಾದರೂ ಕಾಲಿಗೆ ವಿಶ್ರಾಂತಿ ಸಿಗದಂತಹ ಚಿನ್ನೆ ಪ್ರಸಂಗಗಳಿಂದ ಗುರಿ ಅನಾಯಾಸ್ತಿಂತ ಖರ್ಚು ನಿಮಿತ್ತವಾಗಲಿದೆ. ಏಮಾಧಿಜನರಿಂದಾಗಿ ಮನಸ್ಸಿಗೆ ಸಮಾಧಿಯೆಷ್ಟಾದರೂ ಆಪ್ತೇಷ್ಟರ ಸಹಾನುಭೂತಿಯು ತೃಪ್ತಿಕರವಾಗಿರುವ ದೆರಿಂದ ತಾ. 1. 20 25 ಈ ದಿನಗಳಲ್ಲಿ ಕಿಂಚಿದ್ಧನ ವ ಮಿಲಾಭವಿದೆ.

ಕರ್ಕಾಟಕ:— ಆರೋಗ್ಯಾವಸ್ಥೆಯು ನಿಮ್ಮಮಟ್ಟಿಗೆ ನ್ನಲ್ಪ ದುರ್ಬಲವಾದರೂ ಇತರ ಭಾಗಗಳಲ್ಲಿ ನಿಮ್ಮ ಯತ್ನಸ್ವಿಗಳಾಗುವಿರಿ. ನಿಮ್ಮ ಉದ್ಯಮವು ನಿರಾಂತಕವಾಗಿ ಮುಂದರಿಯುವದು. ಗುರುಹಿರಿಯರ ಕೃಪಾಕಟಾಕ್ಷವು ನಿಮ್ಮನ್ನು ಮೇಲೆ ಪರಿಪೂರ್ಣವಿರುವುದರಿಂದ ನಿಮಗಾವ ತೆರನಾದ ಭಯವಿರದು. ಸಾಂಸಾರಿಕ ತಾಪತ್ರಯ ಗಳಿಂದ ಮುಕ್ತರಾದ ನಿಮ್ಮ ಆರ್ಥಿಕ ಭಾಗವು ಉತ್ತಮವಾಗಿರುವುದಾದರೂ ತಾ. 19. 20. 23 21. ಈ ದಿನಗಳಲ್ಲಿ ಮಿತ್ರರಲ್ಲಿ ಕಲಹ, ವ್ಯರ್ಥಖರ್ಚು ಪ್ರಾಪ್ತವಾಗಲಿದೆ.

ಸಿಂಹ:— "ಮನಃಪೂತಂ ಸಮಾಚರೇತ್" ಎಂಬ ನ್ಯಾಯದಂತೆ ಮನಸ್ಸಿಗೆ ತೃಪ್ತಿಕರವಾದುದನ್ನು ಮಾಡಬೇಕೆಂದಿರುವದಾದರೂ ಈಗಿನ ಪರಿಸ್ಥಿತಿಯಲ್ಲಿ ನಿಮ್ಮ ಮನಸ್ಸಿಗೆ ಒಪ್ಪಿದ್ದು ಹೆರವರಿಗೆ ನಿಸರ್ಗವಾಗಿ ಕಾಣಬಹುದು. ಆದಕಾರಣ ಯಾವುದು ನೋಡನ ಕಾರ್ಯವನ್ನೂ ಕೂಡ ನೀವೀಗ ಆರಂಭಿಸುವದುಚಿತವಲ್ಲ. ವಣಿಗ್ ಜನರಿಗೂ ವಿದ್ಯೋಪಜೀವಿಗಳಿಗೂ ಪ್ರಯತ್ನಕ್ಕೆ ತಕ್ಕುದಾದ ಫಲವು ದೊರೆತೀತು. ಶತ್ರುಬಾಧೆಗಳಿಂದ ಬಿಡುಗಡೆಯಾಗುವಿದೆ. ತಾ 18.21.22.25ರಲ್ಲಿ ಆರ್ಥಿಕ ಬಿಕ್ಕಟ್ಟು, ಅನಾರೋಗ್ಯವು ಕಂಡು ಬಂದೀತು

ಕನ್ಯಾ:— ಸಾಕಷ್ಟು ವೈರಿಕೆಯು ನಿಮ್ಮಲ್ಲಿಲ್ಲದ ಕಾರಣ ಹಲವು ಜನರೊಡನೆ ಕಲಹಗ್ಯೆವಿರಿ. ಆದರೂ ಒಳ್ಳೇ ಜಾಣರಾದ ನೀವು ಪ್ರಯತ್ನಕ್ಕಿಂತ ಅಧಿಕವಾದ ಫಲವನ್ನು ಹೊಂದುವಿರಿ. ಅತರಿವಿ ಆರ್ಥಿಕ ತೊಡಕೆಯು ನಿಮಗಿಲ್ಲ. ರಾಜಕೀಯರಂಗದಲ್ಲಿ ಪ್ರತಿಕೂಲ ಪರಿಸ್ಥಿತಿಯು ಕಂಡುಬರುವುದು. ನೇತ್ರೋದರ ವ್ಯಾಧಿ, ವಿನಾಕಾರಣ ಹೆಂಡತಿ ಮಕ್ಕಳಲ್ಲಿ ಕಲಹ, ಇವುಗಳಿಂದ ನೀವು ಅಸಂತೃಪ್ತರಿಯದಾದರೂ ತಾ. 18. 21. 22. 25ರಲ್ಲಿ ನೆಮ್ಮದಿ ಮತ್ತು ಸುಖದಿಂದಿರುವಿರಿ.

ತುಲಾ:— ಉತ್ಸಾಹಿಗಳೂ ಕಾರ್ಯದಕ್ಷರೂ ಆದ ನಿಮಗೆ ದುಃಸಾಧ್ಯವಾದ ಕಾರ್ಯವಾವುದೂ ಇರದು. ಆದರೆ ದೈವವ ಮಾತ್ರ ನಿಮಗೆ ವಿಶೇಷ ಪ್ರತಿಕೂಲವಿರುವುದರಿಂದ ಫಲಪ್ರಾಪ್ತಿಗಿಂತಲೂ ಬರ್ಚೇ ಅಧಿಕವಾದೀತು. ಶತ್ರುಕೃತ ಉಪ

(ಉಳಿದ ಭಾಗ ನೋಡಿರಿ.)

— ಮಕ್ಕಳನ್ನು ಹಡೆಯುವದು ಸಾಕು—

★ ಬರ್ಥ ಕಂಟ್ರೋಲ ★

ಏಳು ದಿವಸದ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳ ಸರಿಯಾಗಿ ಮುಟ್ಟಾಗುತ್ತಾರೆ. ಅಲ್ಲದೆ ಸ್ತ್ರೀಯರ ಬಿಳಿಕೆರಗು, ಪ್ರಜ್ಞಾಹೀನ, ಹೊಲಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ೧ ಗುಳಿಗೆ, ಮಧ್ಯಾಹ್ನಕ್ಕೆ ೧ ಗುಳಿಗೆ, ಸಂಜೆಗೆ ೧ ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳಬೇಕು ಏಳು ದಿವಸ ಈ ಔಷಧವನ್ನು ಬಿಸಿಸೀರಿನಲ್ಲಿ ಸೇವಿಸಬೇಕು.

ಪತ್ಯ:— ಕರವೀಪಲ್ಲಿ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ತಿಮ್ಮತ್ತು ರೂಪಾಯಿ ೪—೮—೦ ಪೋಷ್ಟ ಚಾರ್ಜು ೮ ಆಣೆ.

ವಿಜೆಂಟರು:—ಗದಗ-ಗದಗ ಫಾರ್ಮಸಿ, ಹುಬ್ಬಳ್ಳಿ-ಹುಬ್ಬಳ್ಳಿ ಫಾರ್ಮಸಿ, ಬಾಗಲಕೋಟೆ-ಬಾಗಲಕೋಟೆ ಫಾರ್ಮಸಿ, ಧಾರವಾಡ-ಧಾರವಾಡ ಫಾರ್ಮಸಿ, ಧಾವಣಗೆರೆ-ಧಾವಣಗೆರಿಫೈಸ್ ಪತ್ರವ್ಯವಹಾರ ಮಾಲಕರೊಡನೆ

ಮ್ಯಾನೇಜರ ವಿಳಾಸ.— **ಹಾಲಪ್ಪಾ ಡಾವಣಗೇರಿ,**
ರಿಜಿಸ್ಟರ್ ನಂಬ್ರ 971 ಗದಗ.

★ಟೀಕೆ-ಟಿಪ್ಪಣಿ★

ಚೀನೀ ಸ್ವಾತಂತ್ರ್ಯ ಸಮರ.

ಇಂದೀಗ ಜೈನವು ಜಾಪಾನಿನ ಮೇಲೆ ಧಾಳಿನಡಿಸುವ ಆಕಾಷಾಯಕ ಸ್ವರೂಪ ತಾಳಿದೆ ಈ ಯುದ್ಧ. ಇತ್ತಲಾಗಿ ಜಾಪಾನಿಗಿಂತಲೂ ಜೈನದ ಧಾಳಿಯೇ ಅಧಿಕವಾಗ ಹತ್ತಿದೆ. 300 ಡಿವಿಜನುಗಳಿಗಾಗಿ ವಿಭಾಗಿಸಲ್ಪಟ್ಟಿರುವ ೫ಮಿಲ್ಯ ಚೀನೀ ಸೈನಿಕರೀಗ ಬೇರೆಬೇರೆ ರಣರಂಗಗಳಲ್ಲಿ ಹೋರಾಟ ನಡಿಸುತ್ತಿದ್ದಾರೆ 10ಮಿಲ್ಯದಷ್ಟರ ಸೈನಿಕರು ಇವರ ಹಿಂಬಲವಾಗಿ ತರಬೇತಿ ಹೊಂದುತ್ತಿದ್ದಾರೆ. 8ಲಕ್ಷಕ್ಕುಂತಲೂ ಮಿಕ್ಕಿದ ಗೊರಿಲ್ಲರು, ಸಿಕ್ಕಸಿಕ್ಕಲ್ಲೆಲ್ಲಾ ವೈರಿಗಳಿಗೆ ಹಾವಳಿ ಮಾಡುತ್ತಿದ್ದಾರೆ ೦ಲಕ್ಷ ಮಂದಿ ಸುಸಂಘಟಿತ ಸೈನಿಕರು ಉಳ್ಳವ್ಲಿ ಅವಿತು ಸಂದರ್ಭ ಸಾಧಿಸಿ ಹಿಂಬದಿಯಿಂದ ವೈರಿ ಸೈನಿಕರ ಮೇಲೆ ಬಿದ್ದು ಸೀಡಿಕೊಡುತ್ತಿದ್ದಾರೆ. ದೈನವೂ ಜೈನದ ಕುರಿತು ಈಗ ವಿವರಗಳಿಂದ ಸುಸ್ಪನ್ನವಾಗಿರುವಂತಿಪೆಯುದ್ಧಾರಂಭವಾದಂದಿನಿಂದ ಭಯಂಕರ ನೆರೆ, ಒರಗಾಲಗಳ ಜೊತೆಯಲ್ಲಿಯೂ ಇಲ್ಲದೆ ಜೆಳೆಗಳು ಉತ್ಪಮನಾಗಿವೆ. ಜೈನದ ಸಾಂಪತ್ತಿಕ ಸ್ಥಿತಿಯ ಕುರಿತು ಚಿಂತೆಯೇ ಪಡಬೇಕೆಂದಿಲ್ಲ ಅವಿ೦ಕನ ಪೈಮಾನಿಕರ ಮತ್ತು ವಿಮಾನಗಳ ಸಹಾಯದಿಂದ ಚೀನೀ ವಿಮಾನಸಡೆಯು ಈಗ ಸಂಘಟಿತವಾಗಿ ಚುಂಕಿಂಗ್ ಮೊದಲಾದ ಸಟ್ಟಣಗಳನ್ನು ರಕ್ಷಿಸಹತ್ತಿದ ಅಂತರ ರಾಷ್ಟ್ರೀಯ ಪರಿಸ್ಥಿತಿಯೂ ಇಂದೀಗ ಜೈನಕ್ಕೆ ಅನುಕೂಲವಾಗಿದ ಚೀನೀಯುದ್ಧವು ಕುರಿತು ಜಾಪಾನರಲ್ಲಿ ಜುಗುಪ್ಸೆಯುಂಟಾಗಿದೆ ಈ ಎಲ್ಲಾ ಕಾರಣಗಳಿಂದ ಜೈನವು ಪುನಹ ತನ್ನ ಸ್ವಾತಂತ್ರ್ಯವನ್ನು ಸಾಧಿಸಿಕೊಳ್ಳುವುದು ನಿಶ್ಚಯವೆಂದೇ ಹೇಳಬಹುದು.

ಪ್ರೆಸಿಡೆಂಟ್ ರುಸವೆಲ್ಟರ ದೃಢ ನಿರ್ಧಾರ.

ಇದೇ ತಾ. 12ರಲ್ಲು ಪ್ರೆಸಿಡಂಟ್ ರುಸವೆಲ್ಟರಿತ್ತ ಮಹತ್ವದ ಭಾಷಣವು, ಅಮೆರಿಕ ರಾಷ್ಟ್ರಗಳೊಡನೆ ಯುದ್ಧ ಕ್ಕಾದರೂ ಯುನೈಟೆಡ್ ಸ್ಟೇಟ್ಸು ತಯಾರಿರುವುದೆಂಬ ದೃಢನಿರ್ಧಾರವನ್ನು ವ್ಯಕ್ತಗೊಳಿಸುವುದು. ಯುದ್ಧ ಹೊರತು ಇತರ ಎಲ್ಲಾ ಸಹಾಯವನ್ನು ಅಮೇರಿಕವು ಬ್ರಿಟನ್ ಮೊದಲಾದ ರಾಷ್ಟ್ರಗಳಿಗೀಯಲಾಗುವುದೆಂಬ ನೊದಲಿನ ಘೋರಣೆಯು ಈಗ ಬದಲಾಗಿರುವುದು. ಇದಕ್ಕೆ ಅತ್ಲಾಂತಿಕ ಸಾಗರದಲ್ಲಿ ಜರ್ಮನ್ ಸಬ್ ಮೆರೀನ್, ಯುದ್ಧ ಹಡಗ ಮತ್ತು ಜಲಮಾನಗಳ ಸ್ವೇಚ್ಛಾಪಹರಣ ಮತ್ತು ದಕ್ಷಿಣ ಅಮೇರಿಕದಲ್ಲಿನಾಝಿಗಳು ನಡಿಸುತ್ತಿರುವ ಒಳಸಂಚುಗಳೇ ಕಾರಣವೆಂದು ಪ್ರೆಸಿಡೆಂಟರು ಉದಾಹರಣೆಗಳನ್ನಿತ್ತು ಸಿದ್ಧಗೊಳಿಸಿರುತ್ತಾರೆ. ಇನ್ನು ಮುಂದೆ ಅತ್ಲಾಂತಿಕ ಮತ್ತು ಶಾಂತಸಾಗರದ ಮೂಲಕ ಬ್ರಿಟನ್ ಮೊದಲಾದ ರಾಷ್ಟ್ರಗಳಿಗೆ ಸಾಮಾನುಗಳನ್ನೊಯ್ಯುವ ಅಮೇರಿಕನ ಹಡಗುಗಳಿಗೆ ಮಾತ್ರವಲ್ಲದೆ, ಇತರ ರಾಷ್ಟ್ರಗಳ ಹಡಗುಗಳಿಗೂ, ಅದೊಂದು ನಿಶ್ಚಿತ ಸಮುದ್ರ ಭಾಗದಲ್ಲಿ ಯುನೈಟೆಡ್ ಸ್ಟೇಟ್ಸಿನ ಯುದ್ಧ ಹಡಗಗಳು ರಕ್ಷಣೆಯನ್ನಿತ್ತಯುವವು ಜರ್ಮನ್ ಸಬ್ ಮೆರೀನ್ ಅಥವಾ ಯುದ್ಧ ಹಡಗಗಳು ಆ ಒಂಕ ಮಾಡಿದಲ್ಲಿ ಅವುಗಳ ಮೇಲೆ ಧಾಳಿಯಿಡಿಸಿ ಮುಳುಗಿಸಲಾಗುವುದು. ಧಾಳಿಕಾರಕ ಜರ್ಮನ್ ನಾವೆಗಳನ್ನು ಕಂಡೊಡನೆಯೇ ಅಮೆರಿಕಾನ ಹಡಗಗಳು ತವಕ್ಕೆ ಎಂಜಿನುಹೊಡೆದು ಮುಳುಗಿಸುವವು. ಸಮುದ್ರದಲ್ಲಿ ಜರ್ಮನಿಯು ಸ್ವೇಚ್ಛಾಪಹಾರ ನಡಿಸುವ ಲೂಟಿಯನ್ನು ಯುನೈಟೆಡ್ ಸ್ಟೇಟ್ಸು ನಿಲ್ಲಿಸಲು ಸೊಂಟಕಟ್ಟಿದುವುದು. ಒಟ್ಟಿನಲ್ಲಿ ಸದ್ಯ ಜೊಡೆದು ಕೆಣಕಿದರೆ ಅದಿನ್ನು ತಣ್ಣಗಿದೆ ಆವರ ಮೇಲೆ ಯುದ್ಧ ಪ್ರಸ್ತೇ ಹೂಡವುದೆಂಬುದು ರುಸವೆಲ್ಟರ ಭಾಷಣದಿಂದ ಸ್ಪಷ್ಟವಾಗಿದೆ ಇಂಗ್ಲೆಂಡಿಗೆ ಇದರಿಂದ ಹೆಚ್ಚಿನ ಉತ್ತೇಜನಾರ್ಹವಾಗಿದೆ ಅತ್ಲಾಂತಿಕ ಸಾಗರದಧಿಪತ್ಯ ಸಹರೆಯ ಅದರ ಜನಾಬ್ದಾರಿಯೇ ತಪ್ಪಿದಂತಾಗುವುದು ರುಸವೆಲ್ಟರ ಗಂಭೀರ ಹಾಗೂ ಕರಿಣ ನಿರ್ಧಾರದಿಂದ ಏಕ್ಸಿಸ್ ರಾಷ್ಟ್ರಗಳ ಎದೆ ಕಂಪಿಸದಿರಲಾರದು. ಯುನೈಟೆಡ್ ಸ್ಟೇಟ್ಸು ತೀಕ್ಷ್ಣವಾಗಿ ಯುದ್ಧ ಕ್ಕೆಳಿಯುವುದೂ ಇಳಿಯದಿರುವುದೂ ಅವುಗಳ ಮುಂದಿನ ಘೋರಣೆಯನ್ನವಲಂಬಿಸಿದೆ.

ರಷ್ಶೋ ಜರ್ಮನ್ ಯುದ್ಧವು.

ಇಂದೀಗ ಸಂಧಿಗ್ಧ ಪರಿಸ್ಥಿತಿಗೆ ಮುಟ್ಟಿರುವುದು. ಜಳಗಾಲ ಆರಂಭವಾಗುವುದರೊಳಗೆ,ಅಂದರೆ ಆಕ್ಟೋಬರ ಅಂತ್ಯದೊಳಗೆ, ರಷ್ಯದಯುದ್ಧವನ್ನು ಒಂದುರೀತಿಯ ನಿರ್ಧಾರಕ್ಕೆ ಮುಟ್ಟಿಸಬೇಕೆಂದು ಜರ್ಮನರು ಅವಸರಪಡುತ್ತಿರುವಂತಿದೆ. ಅಂತಹ ನಿರ್ಧಾರಕ್ಕೆ ಮುಟ್ಟಿಸಬೇಡಬಾರದೆಂದೇ ರಷ್ಯನರ ಭೀಷ್ಮ ನಿರ್ಧಾರ. ಹೀಗೆ ಒದರಿಂದು ಬಗೆಯ ತೀವ್ರ ಪ್ರತಿಸ್ಪರ್ಧೆ ಯಿಂದ ಇಂದಿಗಿಂತಲೂ ಉಗ್ರ ಹೋರಾಟ ಪ್ರಜಂಘ ಕದನವು ನಡೆಯುತ್ತಿದೆ. ಎಂತಹ ತ್ಯಾಗಮಾಡಿಯಾದರೂ ಲೆನಿನ್ ಗ್ರಾದನ್ನು ಹಿಡಿದೇ ತೀರಬೇಕೆಂದು ಜರ್ಮನರ ಛಲ. ತಮ್ಮ ಮಧ್ಯ ಭಾಗದಲ್ಲಿ ಮಾರ್ಶಲ್ ಟಿಮೊಶೆಂಕೊರವರು ಪುಣ್ಯಕ್ಷೇತ್ರದಂತಿರುವ ಇದನ್ನು ವೈರಿಗಳು ಆಕ್ರಮಿಸಿ ಕಳಂಕಿತಗೊಳಿಸಲು ತಾವು ಎಸ್ಟಕ್ಕೂ ಬಿಡಲಾರೆನೆಂದು ಸ್ಕೋಪಿಯೆಟ್ ಸೈನಿಕರು ಮತ್ತು ಪ್ರಜೆಗಳ ದೀಕ್ಷೆ ಜರ್ಮನರು ಲೆನಿನ್‌ಗ್ರಾಡ್ ಪ್ರಬೇಧಪಲ್ಲ ಶತ್ರುತ್ವವು ಮತ್ತು ಅತಿ ಹೆಚ್ಚಿನ ಸೇನೆಯನ್ನು ಹಾಕಿ, ಭೀಕರ ನಷ್ಟವಾದರೂ ಗಣ್ಯಮಾಡದ ಹೆಚ್ಚೆಹೆಚ್ಚಿಗೂ ತೀವ್ರ ಹೋರಾಟ ನಡಿಸಿ ಮುಂದೊತ್ತುತ್ತಿದ್ದಾರೆ. ಆದರೆ ಈ ವರೆಗೂ ಅವರು ಲೆನಿನ್ ಗ್ರಾಡನ್ನು ಸಂಪೂರ್ಣವಾಗಿ ಆವರಿಸುವುದಾಗ್ಲಿ ಜಯಶೀಲವಾಗಿರುವುದಿಲ್ಲ ಸ್ಕೋಪಿಂಡ ವಿಮಾನಧಾಳಿ ನಡಿಸಿ ಅದನ್ನು ಪ್ರತಿಹಾರಿಸಿಬಿಡುವ ಜರ್ಮನ್ ವಿಮಾನ ಸಡೆಯ ಎಚ್ಚರಿದವ ಸ್ಪಯಂತ್ಯವೂ ನಿಸ್ಸಹಾಯವಾಗಿದೆ. ಸೋವಿಯೆಟ್ ವಿಮಾನಪಡೆಯು ಅಸಾಧಾರಣ ಸಾಹಸ ಮತ್ತು ಚಾತುರ್ಯದಿಂದ ಅದನ್ನು ಪ್ರತಿಭಟಿಸುತ್ತಿದೆ ಮಾರ್ಶಲ್ ವರೊಶಿಲೊವರು, ದೊಡ್ಡ ಸೇನೆಯೊಂದಿಗೆ ದಕ್ಷಿಣದಿಂದ ಜರ್ಮನ್ ಸೇನೆಯಮೇಲೆ ಪ್ರತಿ ಧಾಳಿ ನಡಿಸಿರುವರೆಂದು ಸುದ್ದಿಯುಂಟಾಗಿದೆ ಇತ್ಯಾದಿ ಪಿಸ್ಸರು ಹೆಚ್ಚೇನೂ ಮುಂದುವರಿದಂತೆ ತೋರುವುದಿಲ್ಲ ಆದರೆ ನೋರ್ವೆಯ ಉತ್ತರ ಮಾರ್ಗವಾಗಿ ಬ್ರಿಟಿಷರಲ್ಲಿಬರ್ಮಾ ಬಂದು ರಷ್ಯದ ಉತ್ತರ ಸಮುದ್ರದ ಸ್ಯಾಮುರ್ಮಾ ಬಂದರಾದ ಮರ್ಮಾಂಕ್ಸ್‌ನೊಡನೆ ಸಂಬಂಧ ಜೆಳೆಬಿದುವರೋ ಎಂಬ ಬೆವರಿಕೆಯಿಂದ ಆ ಬಂದರಿನ ಮೇಲೆ ಜರ್ಮನರು ಪುನಹ ಪ್ರಬಲ ಧಾಳಿಮಾಡತೊಡಗಿ ತೀವ್ರ ಹೋರಾಟ ನಡೆದಿದೆ. ಮಧ್ಯ ಭಾಗದಲ್ಲಿ ಮಾರ್ಶಲ್ ಟಿಮೊಶೆಂಕೋರವರು ಮುಂದೊತ್ತುತ್ತಲೇ ಇದು ಸ್ಮೊಲೆಂಸ್ಕ್‌ನ್ನು ವಶಪಡಿಸಿಕೊಳ್ಳುವಷ್ಟು ಮುಂದುವರಿದಿರುವರೆಂದು ತಿಳಿದುಬಂದಿದೆ. ಜರ್ಮನರ ಗೊಮೆಲಿನ ಧಾಳಿಯು ತಡೆಗಟ್ಟಲ್ಪಟ್ಟಿರುವುದಾದರೂ ಜರ್ಮನ್ ಸೇನೆಯು ಕೀವ್ ಪಟ್ಟಣವನ್ನು ಹಿಂದಿನಿಂದ ಆವರಿಸುವ ಉದ್ದೇಶದಿಂದ ಅದಕ್ಕಿಂತ 80 ಮೈಲು ವಾಯುವ್ಯಕ್ಕಿರುವ ಚೆರ್ನಿಗೊವ್ ಎಂಬ ಸಂದುಕಟ್ಟಿನ ಪಟ್ಟಣವನ್ನು ವಶಪಡಿಸಿಕೊಂಡಿರುತ್ತಾರೆ. ಈ ಭಾಗದಲ್ಲಿ ಜರ್ಮನರು ಹೆಚ್ಚಿನ ವಿಜಯ ಪಡೆದರೆ ಕೀವ್ ಪಟ್ಟಣಕ್ಕೆ ಅಪಾಯವಿದೆ. ಕೀವ್ ಪಟ್ಟಣದ ಬಳಿ ಈಗ ಹಲವು ನದಿಗಳಲ್ಲಿ ತೀವ್ರ ಕದನ ನಡೆದಿರುವುದಾದರೂ ಜರ್ಮನರಿಗೆ ಮುಂದೊತ್ತಲು ಸಾಧ್ಯವಾಗಿರುವುದಿಲ್ಲ. ನೀಪರ್ ನದಿಯ ತಿಳಭಾಗದಲ್ಲಿ ಜರ್ಮನರು ಅದನ್ನು ದಾಟಿ ಪೂರ್ವ ದಡಕ್ಕೆ ಹೋಗಿ ಮುಂದೊತ್ತುವುದರಲ್ಲಿದ್ದಾರೆ. ಇದರಿಂದ ಕೈಮಿಯಕ್ಕೆ ಅವಕಾಶವಿದೆ. ಮಾರ್ಶಲ್ ಬುಡೇನಿಯವರ ಸೇನೆಯು ನೀಪರ್ ನದಿಪ್ರದೇಶದಲ್ಲಿ ಕದಿ ಜರ್ಮನರ ಮೇಲೆ ಪ್ರತಿಧಾಳಿ ನಡಿಸಿ ನದಿಯ ಪಶ್ಚಿಮ ದಡಕ್ಕೆ ಹೋಗಿ 2 ಹಳ್ಳಿಗಳನ್ನು ಗೆದ್ದಿರುತ್ತಾರೆಂದು ಸುದ್ದಿ ಬಂದಿದೆ. ಒಟ್ಟಿನಲ್ಲಿ ಪರಿಸ್ಥಿತಿಯು ಯಥಾ ಪ್ರಕಾರವಿದೆ. ಜರ್ಮನರು ಒಬ್ಲೇರಿಯದ ವಿರ್ನಾ ನಿತ್ತು ಬರ್ಗಾಸ್ ಬಂದರುಗಳನ್ನು ಸರಿಪಡಿಸುತ್ತಿದ್ದು ಆ ಭಾಗದಲ್ಲಿ ಚೆಚ್ಚಿನ ಸೈನಾಸಂಗ್ರಹ ಮಾಡುತ್ತಿದ್ದಾರೆ ಕೈಮಿಯ ಮತ್ತು ಕೊಕಸಿನ ಮೇಲೆ ಧಾಳಿ ನಡಿಸುವ ಉದ್ದೇಶದಿಂದ ಈ ಸಿದ್ಧತೆ ನಡೆಯುತ್ತಿದೆಯೆಂದೂ, ಅದಕ್ಕೆ ಬ್ಲ್ಯೂರಿಯವು ಇಂಬುಕೊಟ್ಟುದರಿಂದ ರಷ್ಯದ ಮತ್ತು ಅದರ ಮೈತ್ರಿಗೆ ವಿಘಾತಮಾಡಿದಂತಾಗಿದೆಯೆಂದೂ ಸೋವಿಯೆಟ್ ವಿದೇಶ ಮಂತ್ರಿಯು ಒಬ್ಲೇರಿಯ ಸರಕಾರಕ್ಕೆ ಎಚ್ಚರವಿತ್ತಿರುವರು. ರಷ್ಯಾಸರು ಚಲಿಸಾಲದ ವರೆಗೆ ಜರ್ಮನರನ್ನು ಜಯಶೀಲವಾಗಿ ಪ್ರತಿಭಟಿಸಿದರೆ ಆ ಮೇಲೆ ಹಿಟ್ಲರರ ಆದೃಷ್ಟ ತಿರುಗಿದಂತೆಯೇ ಸರಿ.

PAYING YOUR INSURANCE PREMIUMS:

Non-payment of an Insurance Premium on the due date may cause the Policy to lapse and it is rather troublesome to revive a lapsed policy. Yet, how easy it is to forget a date. To save yourself all this worry and trouble entrust the payment of your Insurance Premiums to your bank. Ask for the business rules regarding our Insurance Premia Payment Service.

RESOURCES OF A CRORE: ESTD. 1910. CANARA BANK LIMITED.

DIAMONDS! DIAMONDS!

K. R. K. SHET

Opposite Govt. College, Hampankatta, MANGALORE.

SHOW-ROOM & WORK SHOP

SUPERFINE UP TO DATE CUTTING! ವಜ್ರಗಳು BEST BRILLIANCY!!

ಉತ್ಕೃಷ್ಟ ತರಗತಿಯ ಜಾನ್ಯಾರ್(first quality, selected) ಎಮ್ಸ್ಟ್ ದಮ್ಮಿನಿಂದ ಒರಟು ವಜ್ರಗಳು ಯಾವಾಗಲೂ ವಿಕ್ರಯಸಲ್ಪಡುತ್ತವೆ ಕೊಂಡುಕೊಳ್ಳುವವರಿಗೆ ಜಾರಿ ಧಾರಣೆಗಿಂತ ೨ ಪರ್ಸೆಂಟಿಗೆ ಕಡಿಮೆಯಾಗದಂತೆ ನಮ್ಮಲ್ಲಿ ವಿಕ್ರಯಿಸಲ್ಪಡುತ್ತವೆ. ಇವನ್ನು ಒಮ್ಮೆ ಸ್ವತಃ ಒಂದು ತಿಳಿಯಿರಿ. ಇದರ ಕಾಪಿ ಯೊಂದನ್ನು ಗವರ್ನ್‌ಮೆಂಟ್ ಕೊಲೇಜಿನ ಎದುರುಗಡೆ ತೆರೆಯಲಾಗಿದೆ.

ಕೆ. ಆರ್. ಕೆ. ಶೇಟ್ಸ್, ಗವರ್ನ್‌ಮೆಂಟ್ ಕೊಲೇಜಿನ ಎದುರು ಹಂಪನಕಟ್ಟೆ, ಮಂಗಳೂರು.

ನೋಟೀಸು.

ಕಾರ್ಕಳ ದಿ. ಮು. ಕೋರ್ಟಿನಲ್ಲಿ

R E. P 130/1941

(O S. 636/1938)

ಪಿರ್ಯಾದಿ ಸಬ್ಬ —ಅಜಿಲಾರ ವಿಠ್ಠ

ಟೊಗ್ಗು ಸಬ್ಬ ಸಪಾ—ಎದ್ರಿಂ

ಳನೇ ಎದ್ರಿ ವೀರಯ್ಯ ಸಬ್ಬ—ಟೊಗ್ಗು ಸಬ್ಬ ಅಳಿಯ—ಕಾರ್ಕಳ ತಾಲೂಕು ವರಂಗ ಗ್ರಾಮದ ವಾಸಿಯಿಟ್ಟಿನವರಿರುವವ—

ಸದ್ರಿ ವಿರುದ್ಧಿಗೆ ಕೋರ್ಟು ಮುಖಾಂ ಪ್ರಕಾರ ತೀರುವವೇನೆಂದ್ರೆ—

ಅರ್ಜಿದಾರನು ಮೃದ್ರಿನ ಸ್ವಾಧೀನ್ಯಗಳನ್ನು ಮೂಲಂಗೆ ಆದೇಶ್ಸಿನ ಬರಕೊಂಡ ಶ್ರೀಕ್ಷ ಇತ್ಯಾದಿನ ಕರ್ತವ್ಯಗಳನ್ನು ನಿರ್ವಹಿಸುವರೆಬಗ್ಗೆ ಮತ್ತೆ ಮೇ ೦೦ ಕಾಲದಲ್ಲಿ ವಿಠ್ ನಾಮಾದ ೨ set off ಪರಿಣಾಮ ಕೊಡಾ ಈಗ ಕೊಟ್ಟ ಅರ್ಜಿಯು ತಾರೀಖು ಸಾ. 7-10-41ಕ್ಕೆ ಚಿತ್ತುಮಾಡಿರಿಂದ ಸದ್ರಿ ದಿನ ಸಣ್ಣ ಸದ್ರಿ ಕೋರ್ಟಿಗೆ ಮಾಜೆ ಹಾಗು 10ರವರೆಗೆ ಹಾಜ್ರಾಗಿ ನಿಮ್ಮ ಆಕ್ಷೇಪಣೆಯ ಅರ್ಜಿನ್ನ ಕೋರ್ಟಿಗೆ ಒಕ್ಕಿಸ್ಬು. ನೀವು ಹಾಜ್ರಾಗದಿದ್ದರೆ ನಿಮ್ಮ ಗೈರು ಹಾಜ್ರಿಯ ಬಗ್ಗೆ ಅವುಗಳನ್ನು ಕೇವಾ ನಿಸ್ಪಾದ ಬೆವು ಎಂಬ ಸಂಗ್ತಿ ಈ ನೋಟೀಸು ಕೋರ್ಟಿಗೆ ಕೊಡಲಾಗಿ ಕೊಡಲಾಗಿದೆ

ತಾ 9-9-41 ಕಾರ್ಕಳ } K MAHABALA HEGDE. ಅಜಿಲಾರ ವಕೀಲ

ಱ ರಸ್ಯವನ್ನೇ ನಾಝಿಗಳ ಸ್ಮಶಾನವಾಗಿ ಮಾಡುವ ಪ್ರಯತ್ನ. ಱ

ಮೋಸ್ಕೋದಲ್ಲಿ ಯುನ್ಯಾಟೆಡ್ ಸ್ಟೇಟ್ಸ್, ಬ್ರಿಟನ್ ಮತ್ತು ರಸ್ಯದ ಪ್ರತಿನಿಧಿಗಳ ಸಭೆ.

ಈ ತ್ರಿರಾಷ್ಟ್ರಗಳ ಹಿಂದಿರುವ ಸುಹೆತ್ತಾದ ಸಂಪತ್ತು ಮತ್ತು ಬಲ.

ಯುನ್ಯಾಟೆಡ್ ಸ್ಟೇಟ್ಸ್, ಬ್ರಿಟನು ಮತ್ತು ಸೋವಿಯೆಟ್ ರಸ್ಯಗಳ ಸಂಯುಕ್ತ ಸಂಪತ್ತು, ಒಲಿದೆದುರಲ್ಲಿ ನಾಝಿಗಳದು ಅಲ್ಪವೆಂದೇ ಹೇಳಬಹುದು ಮಹತ್ವಾಪೇಕ್ಷೆ ಈ ಮೂರು ರಾಷ್ಟ್ರ ಕೂಟಗಳ ಒಟ್ಟು ೪೧೦ ಮಿಲ್ಯ, ಅಂದರೆ ಲೋಕದ ಸುಮಾರು ಅರೆವಾಸಿಯಷ್ಟು ಜನರಿರುವರು. ಜರ್ಮನಿಯ ಜನ ಸಂಖ್ಯೆಗಿಂತ ಇದು 10 ಪಾಲು ಹೆಚ್ಚು ಮೊತ್ತವಲ್ಲದೆ ಸುಮಾರು 500 ಮಿಲ್ಯ ಜನ ಸಂಖ್ಯೆ ಇಗುವ ಚೈನ ಪೂ ಫೆಸಿಸ್ಟರ ವಿರೋಧವಾಗಿ ಹೋರಾಟ ನಡಿಸುತ್ತಿದೆ. ದಕ್ಷಿಣ ಅಮೆರಿಕದ ರಾಷ್ಟ್ರ ಗಳೂ, ಅರಬಸ್ಥಾನದ ರಾಜ್ಯಗಳೂ ಯುನ್ಯಾಟೆಡ್ ಸ್ಟೇಟ್ಸ್ ಮತ್ತು ಬ್ರಿಟನಿನ ಪಕ್ಷ ಪಾತಿಗಳಾಗಿವೆ. ರಸ್ಯವೊಂದರಲ್ಲೇ ಸುಮಾರು 15 ಮಿಲ್ಯದಷ್ಟು ಸೇನೆ ಇರುತ್ತದೆ. ಇದು ದರಿಂದ ನಾಝಿಗಳನ್ನು ಪ್ರತಿಭಟಿಸುವ ರಲ್ಲದಕ್ಕೆ ಸೈನಿಕರ ತೀವ್ರ ಅಭಾವವೇನೂ ಆಗಲಾರದು. ಯುದ್ಧೋಪಕರಣ ಮತ್ತು ಇತರ ಸಾಮಾಗ್ರಿಗಳ ಕೊರತೆಯುಂಟಾಗಬಹುದು. ಆನಿನ್ನು ಪೂರೈಸಲೀಗ ಬ್ರಿಟನು ಮತ್ತು ಯುನ್ಯಾಟೆಡ್ ಸ್ಟೇಟ್ಸುಗಳು ಸಿದ್ಧವಾಗಿವೆ. ಆದಕ್ಕಾಗಿಯೇ ಇರಾನಿನ ಮೂಲಕ ನುರಕ್ಷಿತ ಮತ್ತು ಸವಿಸ್ತಾರ ದಾರಿಯನ್ನು ಮಾಡಿಕೊಂಡಿರುತ್ತವೆ. ಆ ಮುಖೇನ ರಸ್ಯ ಯುದ್ಧೋಪಕರಣ ಮತ್ತು ಇತರ ಸಾಮಾಗ್ರಿಗಳನ್ನು ಅತಿ ಶೀಘ್ರಕಾಲ ಎದುರಿಸಲು ಸಾಧ್ಯವಾಗುತ್ತದೆ. ದೇಶಾದ್ಯಂತರಲ್ಲಿ ಸಂವೇಹನೆಯೇ ಇಲ್ಲ. ಆಗತ್ಯ ವಿದ್ದಲ್ಲಿ ಬ್ರಿಟನು ಸೇನಾಸಹಾಯವನ್ನು ಕಗಡಾ ಇರಾನಿನ ಮಾರ್ಗವಾಗಿ ಮಾಡಬಹುದು. ಆಂದ ಮೇಲೆ ರಸ್ಯದ ಹೋರಾಟವೇ ಒಟ್ಟಿಗರ ಕೊನೆಯ ಹೋರಾಟವಾಗಿ ಅವರ ಪತನದಲ್ಲಿ ಪರಿಣಮಿಸುವುದೆಂಬ ಅಭಿಪ್ರಾಯಕ್ಕೀಗ ಆಸ್ಪದವಾಗಿಪುದು.

ಲೋಕದ ಸೇಕಡ 6½ರಷ್ಟರ ಕಬ್ಬಿಣ ಪದುರು, ನೆಕರಷ್ಟ ಉಕ್ಕು, 61ರಷ್ಟರ ಇದ್ದಲು, ಮತ್ತು ನಿಕರಷ್ಟ ತಾಮ್ರವು ಯುನ್ಯಾಟೆಡ್ ಸ್ಟೇಟ್ಸ್, ಬ್ರಿಟಿಷ್ ಸಾಮ್ರಾಜ್ಯ ಮತ್ತು ಸೋವಿಯೆಟ್ ರಿಪಬ್ಲಿಕುಗಳ ಗಸಿಗಳಲ್ಲಿ ದೊರೆಯುತ್ತವೆ. ಇದಕ್ಕೆ ಮಧ್ಯ ಮತ್ತು ದಕ್ಷಿಣ ಏಸಿಯಿಕಗಳಲ್ಲಿ ಸಿಗುವ ಸೇಕಡ 17ರಷ್ಟನ್ನು ಸೇರಿಸಬೇಕು. ಲೋಕದ ಸುಮಾರು ಅರೆವಾಸಿ ತವರವು ಸಿಗುವುದು ಬ್ರಿಟನ್ ಸಾಮ್ರಾಜ್ಯದಲ್ಲಿ; ವಿಶೇಷವಾಗಿ ಸುಲಯದಲ್ಲಿ. ಉಳಿದಂತದಲ್ಲಿ ಹೆಚ್ಚು ದೂರೆಯುವುದು ಡಚ್ ಈಸ್ಟ್ ಇಂಡೀಸ್ ಮತ್ತು ಜೋರೀಪಯದಲ್ಲಿ. ಹೆಚ್ಚಿನ ರಬ್ಬರು ಬೆಳಸಬ್ಬಡುವುದು ಬ್ರಿಟಿಷ್ ಸಾಮ್ರಾಜ್ಯದೊಳಗೆ ಮತ್ತು ಡಚ್ ಈಸ್ಟ್ ಇಂಡೀಸಿನಲ್ಲಿ. ಕೇವಲ ಸೇಕಡ 25ರಷ್ಟರ ಪೆಟ್ರೋಲು ಸಾಮ್ರಾಜ್ಯ ಸಾಮ್ರಾಜ್ಯ, ಸೋವಿಯಟ್ ರಿಪಬ್ಲಿಕ್ ಮತ್ತು ಯುನ್ಯಾಟೆಡ್ ಸ್ಟೇಟ್ಸಿನ ಹೊರಗೆ ದೊರೆಯುತ್ತವೆ. ಯುದ್ಧ ಕ್ಕೆ ಅತ್ಯಾವಶ್ಯಕವಾದ ಈ ಸಾಮಾಗ್ರಿಗಳಲ್ಲದೆ ಹೆಚ್ಚಿನ ಆಹಾರ ಪದಾರ್ಥಗಳೂ ಈ ಮೂರು ರಾಷ್ಟ್ರಗಳಲ್ಲೇ ಉತ್ಪತ್ತಿಯಾಗುತ್ತವೆ. ಆಂದಮೇಲೆ ದೀರ್ಘಯುದ್ಧದಲ್ಲಿ ಒಟ್ಟಿಗರಿಗೆ ಜಯವಾಗಲು ಸಾಧ್ಯವೇ ಇಲ್ಲ.

ಆಯಾರ ಸಾಮಾಗ್ರಿಗಳ ವಿಷಯದಲ್ಲಿ ಬ್ರಿಟಿಷ್ ಸಾಮ್ರಾಜ್ಯ, ಯುನ್ಯಾಟೆಡ್ ಸ್ಟೇಟ್ಸ್ ಮತ್ತು ಸೋವಿಯೆಟ್ ರಸ್ಯದ ಮಹದಾಶಯವೆದುರಲ್ಲಿ ಯು ರೋ ಪ್ ಮತ್ತು ಜಾಪಾನಿನದು ಅತ್ಯಲ್ಪವೇ ಸರಿ. ಕಬ್ಬಿಣ ಸಕ್ಕರೆ ಮತ್ತು ಬಟಾಟೆಗಳು ಯುರೋಪ್ ಮತ್ತು ಜಾಪಾನುಗಳಲ್ಲಿ ದೊರೆಯುವುದೇ ಕಡಿಮೆ. ಸೋವಿಯೆಟ್ ರಸ್ಯ, ಯುನ್ಯಾಟೆಡ್ ಸ್ಟೇಟ್ಸ್, ಕೆನಡ, ಇಂಡಿಯ ಮತ್ತು ಆಸ್ಟ್ರೇಲಿಯಗಳಲ್ಲೇ ಲೋಕದ ಆ ಹೆಚ್ಚಿನ ಗೋದಿ ಬೆಳೆಯುವುದು. ಕಬ್ಬು ಅಧಿಕವಾಗಿ ಬೆಳೆಯುವುದು ಹಿಂದುಪೆರ, ಫಿಲಿಪ್ಪೀನ್ ದ್ವೀಪ ಮತ್ತು ಆಸ್ಟ್ರೇಲಿಯಗಳಲ್ಲಿ. ಜೋಳವು ವಿಶೇಷವಾಗಿ ಬೆಳೆಯುವುದು ಯುನ್ಯಾಟೆಡ್ ಸ್ಟೇಟ್ಸ್ ಮತ್ತು ರಸ್ಯಗಳಲ್ಲಿ. ಹಿಂದುದೇರ ಮತ್ತು ಚೈನಗಳಲ್ಲೇ ಹೆಚ್ಚಾಗಿ ಭತ್ತ ಬೆಳೆಯುವುದು.

ಖಾಸಿಜ ಸಂಪತ್ತು, ಮತ್ತು ಕೈಗಾರಿಕೋದ್ಯಮಗಳಲ್ಲಿ ಇಂದು ಇಡೀ ಲೋಕದಲ್ಲಿ ಯುನ್ಯಾಟೆಡ್ ಸ್ಟೇಟ್ಸು ಪ್ರಥಮ ಸ್ಥಾನ ಪಡೆದಿದೆ. ಸಹಸ್ರಗಟ್ಟಲೆಯಲ್ಲಿರುವ ಸಾಮಾಗ್ರಿಗಳನ್ನು ಒಂದೇ ಸಲನೆ ತಯಾರಿಸಿ ಒದಗಿಸಿಕೊಡಬಲ್ಲುದು. ಯುದ್ಧದ ದಿಗಿಲು, ಅಮಾನಥಿಳಿ ಹಾವಳಿಯು ಭೀತಿಯೇನೂ ಅವಕ್ಕಿರುವುದಿಲ್ಲ. ಕಚ್ಚಾ ವ್ಯಾಪಾರಗಳ ವಿಷಯದಲ್ಲಿಯೂ ಅಮೆರಿಕವು ಸ್ವಾವಲಂಬಿಯಾಗಿದೆ. ಸಮ್ಮಿಯಕ್ಷರ ರಸ್ಯರು ಮತ್ತು ತವರ ಮಾತ್ರ ಅದು ಕೊರತೆ. ಅವನ್ನು ಶಾಂತ ಸಾಗರದ ಬ್ರಿಟಿಷ್ ಮತ್ತು ಡಚ್ ರಾಜ್ಯಗಳು ಒದಗಿಸಬಲ್ಲುವು. ತನ್ನು ಜೀವನಾವಶ್ಯಕತೆಗಳ ಸ್ವಾದೇಶ ಬದಿಗೊತ್ತಿ ಯುನ್ಯಾಟೆಡ್ ಸ್ಟೇಟ್ಸು ಭರದಿಂದ ಯುದ್ಧೋಪಕರಣ ತಯಾರಿಸಿ ಹಿಟ್ಲರನ್ನೆದುರಿಸುವ ರಾಷ್ಟ್ರಗಳಿಗೊನಗಿಸಬೇಕೆಂಬ ಮಹೋದ್ದೇಶವು ಅಮೆರಿಕಾನರಲ್ಲುಂಟಾಗಿದೆ. ಬ್ರಿಟಿನಿನ ಅವಶ್ಯಕತೆಯನ್ನಾವರೂ ತ್ಯಾಗ ಮಾಡಿ ರಸ್ಯಕ್ಕೆ ಯುದ್ಧೋಪಕರಣ ಮತ್ತು ಇತರ ಸಾಮಾಗ್ರಿಗಳನ್ನೊದಗಿಸಬೇಕೆಂದು

(ನಾಳೆ ಪುಟ ನೋಡಿರಿ)

ಉಚ್ಚು ಕಪ್ಪಾದ ಕೂದಲನ್ನು ಸಿಬಿದಾಗಿ ಜೆಕಿಸುವು —ಆಮಲಕೀ ತೈಲ.
ಒನೆಂದ ಉತ್ಪಾಪ ವಿಜ್ರಂಭಕ್ಕೆ ಹೆಚ್ಚಿಸಲು—ಆಮಲಕೀ ತೈಲ.
ತಂವಾವ ನೇತ್ರೆಗಳನ್ನು ಹೊಂದಲು—ಆಮಲಕೀ ತೈಲ.
ಸಾರೀಮಣಿಗಳ ಸೌಂದರ್ಯಣಿ—ಆಮಲಕೀ ತೈಲ.
ಪುಷ್ಪಗಂಧಾಮೋದಿತ ಪುಷ್ಪಗಳ ಉತ್ಪನ್ನವೇ—ಆಮಲಕೀ ತೈಲ.
ಪ್ರತಿಯೊಬ್ಬ ಗಾರ್ಹಸ್ಥ್ಯರಿಗೆ ಜೇಕಾದುದೇ—ಆಮಲಕೀ ತೈಲ.
ಸ್ತ್ರೀಧ ಸ್ತ್ರೀ-ಪುರುಷರಿಗೆ ಜೇಕಾಮದೇ—ಆಮಲಕೀ ತೈಲ.
ಭಾರತದ ಮಹಿಳೆಯರು ಪ್ರೀತಿಸುವುದು—ಆಮಲಕೀ ತೈಲ.
ಬೆಳಗುವ ತಾರೆಯೇ-ನಿಮಿಳಿನ ಸ್ವಾಸ್ಥ್ಯಕ್ಕೆ—ಆಮಲಕೀ ತೈಲ.
ಲಲನೆಯರು ಮೆಚ್ಚುವರು—ಆಮಲಕೀ ತೈಲ.
ಜಾತಾದಿ ಪ್ರಿದೋಷನಾಶಕವೇ—ಆಮಲಕೀ ತೈಲ.
ವಿಮೋಧಿತ ತಿಲತೈಲದಿಂದಲೆ ತಯಾರಿಸಿದ—ಆಮಲಕೀ ತೈಲ.
ಸರ್ವತೋದ್ಭೋಷಪಿವಾರಕ ಅತ್ಯಂತ ಹಿತಾವಹ-ಆಮಲಕೀ ತೈಲ.
ವಿದ್ಯಾರ್ಥಿಗಳಿಗೂ, ತರುಣ ತರುಣಿಯರಿಗೂ ಜೇಕಾಮ —ಆಮಲಕೀ ತೈಲ.
2 ಔನ್ಸಿನ ಸೀಸೆ 1ರ ಕ್ರಯ 0-6-0. 4 ಔನ್ಸಿನ ಸೀಸೆ 1ರ ಕ್ರಯ 0-11-0.

ಆಮಲಕೀ ತೈಲ ವನ್ನೇ ಉಪಯೋಗಿಸಿರಿ.

ಸ್ವದೇಶೀ ಔಷಧಿ ಭಂಡಾರ (ರಜಿಸ್ಟರ್ಡ್) **ಕುಂಜಾಲು**
ಸ್ಟಾಕಿಸ್ಟರು-ಸನಾತನ ಬುಕ್ ಡಿಪೋ, ಮಾಲಿಗೆ ಸಾಮಾನ್ಯ ಕೈಕಾರಿಕೆ ಬ್ರದರ್ಸ್, ಕೋಟ.



1926

13 ಬಲ್ಮಠ ರಸ್ತೆ, ಮಂಗಳೂರು.

ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಿರುವ ಎಲ್ಲಾ ತರದ ರಬ್ಬರ್ ಮೊಹರುಗಳೂ ಸೈನ್ ಬೋರ್ಡ್ ಜವಾನರ ಬೇಜು, ಮೊನೊಗ್ರಾಮ್, ಸೀಲು ಇತ್ಯಾದಿಗಳು ತೃಪ್ತಿಕರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co. 18 Balmat Road, MANGALORE.

Approved firm by the Govt. Mysore.
Certified by the Agent of the Govt of India in Ceylon.

ನೋಟೀಸು

ಕರ್ನಾಟಕ ಡಿ. ಮು. ಕೋರ್ಟಿನಲ್ಲಿ
O. S. No. 78/1935
R. E. P. 401/1941
R. E. A. 530/1941

ಗೋಪಾಲಕೃಷ್ಣ ಮಲ್ಯ ಕೊನಾ – ವಾದಿಯ ಅರ್ಜಿದಾರನು

ಮತ್ತು

1, ಶಾರದಾಂಬ ಭಟ್, 2 Dr. ರಾಘವೇಂದ್ರ ಭಟ್, 3. ರಾಮರಾಯ ಭಟ್, 4. ಗೋಪಾಲ ಭಟ್—ಎದಿರು

ಇವರಿಗಳಿಗೆ—

ಸದ್ರಿ ಅರ್ಜಿದಾರರಲ್ಲಿ ಎದ್ದಾರ ಹಕ್ಕಿನ ಸ್ಥಿರಾಸ್ತಿ ಯೇಲಾಂಮಾಡಿಸುವ ಬಗ್ಗೆ ಅರ್ಜಿದಾರನು ಯೇಲಾಂಯ ಸ್ತಿಹಾರು ಪಾಳ್ಳುಮಾಡಿಸುತ್ತಾರೆ. ಸದ್ರಿ ಯೇಲಾಂ ಇಸ್ತಿಹಾರು ಮಂಜೂರುಮಾಡಬೇಕಾಗಿ ಮತ್ತು ಸದ್ರಿ ಇಸ್ತಿಹಾರಿನಂದ ತೋರುವ ಅತ್ತ ಯೇಲಾ ಸಮಯ ಅರ್ಜಿದಾರನಿಗೆ ಯಾ ಅರ್ಜಿದಾರನ ಬಗ್ಗೆ ಅರ್ಜಿದಾರ ವಕೀಲರಿಗೆ ಬಿಡ್ ವ set off ಪರ್ಮಿಷನ್ ಕೊಡಬೇಡಾಗಿ ಸಹಾ ಡಾಕ್ಟ್ ಮಾಡಿದ ಸದ್ರಿ R.E.A-530/1941ನೇ ಅರ್ಜಿ ವಿಚಾರಣೆ ಮೃತ ಪೈಸೆ ಪ್ರತಿವಾದಿ ಕೃಷ್ಣ ಭಟ್ಟರು ತಾರೀಕ್ 5ರಂದು section 50ನೇ ನೋಟಿಸಿಗೂ ಸಹಾ ಇದೇ ತಾ. 24-9-41ಕ್ಕೆ ಯಿಟ್ಟರೆ ಅದ್ರೀಜ್ ಎದ್ದಿರಾದ ನಾವು ಆ ದಿವಸ ಹಗಲು 10 ಘಂಟೆಗೆ ಮೇಲ್ಪಟ್ಟ ಕೋರ್ಟು ಮುಂದೆ ಹಾಜರಾಗಿ ಉಭಯರಿಸಿಕೊಳ್ಳತಕ್ಕದ್ದು. ತಪ್ಪಿದರೆ ನಮ್ಮ ಕೈರು ಕಾರಣಿಯಲ್ಲಿ ತೀರ್ಮಾನಮಾಡಿದ್ದು ಎಂತ ಕೋರ್ಟು ಹುಕುಂ ಪ್ರಕಾರ ಈ ಪ.ಪಟಿಕೆ ತಿಳಿಸಿಯದೆ.

ಕರ್ನಾಕ | **K. Vasudeva Kamath**
9-9-41 | Advocate for Petitioners

NOTICE

ಪುತ್ತೂರು ಡಿ. ಮು. ಕೋರ್ಟಿನಲ್ಲಿ

R. E. P. 42/41
I. E. O. S. 23/34

ಅರ್ಜಿದಾರ—ವಿ.ವೆಂಕಟ್ಟಾರು ತಿರು ಹೃದಯ ಇಗರ್ಜಿ ದೇವರ ಭಂಡಾರ

ಎದ್ರಿದಾ—ಅನ್ನುಣ್ಣೆ ಯಾನೆ ಕೇಶವ ಹಾರ್ಯ ಸಹಾ—

1ನೇ ಎದ್ರಿ ಅಮ್ಮಣ್ಣಿಯಾನೆ ಕೇಶವ ಹಾರ್ಯ—ಅನಂತಾಚಾರ್ಯರ ಮಗ—ಮಂಗಳೂರು ತಾಲ್ಲೂ ಕಾವಳ ಮೂಡಬೆದರು ಗ್ರಾಮ—ಇವರಿಗೆ—

ಈ ನೋಟೀಸು ಮುಖಲಕ್ಕೆ ತಿಳಿಯುವದೇನಂದ್ರೆ—

ಸದ್ರೀ ಅರ್ಜಿದಾರರು ಸ್ಥಿರಾಸ್ತಿ ವಿಶ್ರಯದ ಬಗ್ಗೆ ಆರ್ಜಮಾಡಿದ್ದಾರೆ. ಆದ್ರಿಂದ ವಿಶ್ರಯದ ಖ್ರಿತ್ತಾದ ತರತ್ತಿಗಳನ್ನು 1941ನೇ ಇಸವಿ ಅಕ್ಟೋಬರ್ 1ನೇ ತಾರೀಖು ಸರ್ಕಾರಿಯಲ್ಲಿ ಹಾಜರಿಗೆ ಕೋರ್ಟು ಹುಕುಂ ಪ್ರಕಾರ ಇದರಿಂದ ತಿಳಿಸಲಾಗುತ್ತದೆ.

Puttur S.K. | **B. Achyuth Baliga**
13—9—41 | Pleader for Petitioner

ಸಮಾಚಾರ ಸಂಗ್ರಹ

ಹಿಂದೂದೇಶದ



ಅಪ್ಪಟ

ಗಂಧದ ಸಾಬೂನು

ಮೈಸೂರು ಸ್ಯಾಂಡಲ್ ಸೋಪ್

ಗೌರ್ನಮೆಂಟ್ ಸೋಪ್ ಫಾಕ್ಟರಿ, ಬೆಂಗಳೂರು.

ಮದ್ರಾಸ್ ಯುನಿವರ್ಸಿಟಿಯನರಿಂದ

ರೂ. 750 ಬಹುಮಾನ

ಹೊಂದಿದ ನೂತನ ಕನ್ನಡ ಪುಸ್ತಕ.

ಎಕ್ಸ್‌ರೇ (X Ray)

ಬರೆದವರು: ಪ್ರೊಫೆಸರ್ ಯು. ರಾಘವೇಂದ್ರ ಆಚಾರ್ಯ, ಲೊಯೋಲಾ ಕಾಲೇಜ್, ಮದ್ರಾಸು.

ಮದ್ರಾಸು, ಬೊಂಬಾಯಿ, ಮೈಸೂರು ಮತ್ತು ಹೈದರಾಬಾದು ಟೆಕ್ಸ್‌ಬುಕ್ ಕಮಿಟಿಗಳಿಂದ ಎಲ್ಲಾ ಸಾರ್ವಜನಿಕ ಮತ್ತು ಶಾಲಾ ಲೈಬ್ರೆರಿಗಳಿಗಾಗಿ ಮಂಜೂರಾತಿ ಪಡೆದಿದೆ.

ಬೆಲೆ ರೂ 1—0—0 (ಅಂಚೆ ಸೆಟ್ಟ 0-2-0 ಪ್ರತ್ಯೇಕ)

ಪ್ರತಿಗಳಿಗೆ ಗ್ರಂಥಕರ್ತರಿಗಾಗಲೀ ಈ ಕೆಳಗಿನವರಿಗಾಗಲಿ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

ಬರ್ಮಾ ಅಕ್ಕಿಯ ರಫ್ತು

ಅತಿ ಪೂರ್ವದ ವಿಷಮ ಪರಿಸ್ಥಿತಿಯ ನಿಮಿತ್ತ ಒಮ್ಮಿಲವರ್ಷ ಬರ್ಮಾದಿಂದ ಅಕ್ಕಿ ರಫ್ತುಮಾಡುವ ವಿಷಯದಲ್ಲಿ ಸರಕಾರವು ಮುಂಜಾಗ್ರತೆ ತೆಗೆದುಕೊಂಡು ಅಕ್ಕಿರಫ್ತಿನ ಸಂಪೂರ್ಣ ಅಧಿಕಾರವನ್ನು ತಾನೆ ವಹಿಸಿಕೊಂಡಿದೆ ಇನ್ನು ಮುಂದೆ ಬರ್ಮಾ ಅಕ್ಕಿಯನ್ನು ಖಾಸಗಿ ವ್ಯಾಪಾರಿಗಳು ರಫ್ತುಮಾಡಕೂಡದು. ಇದರಿಂದ ಬರ್ಮಾದ ಹಿಂದೀ ಅಕ್ಕಿ ವ್ಯಾಪಾರಿಗಳಿಗೆ ದೊಡ್ಡ ಪೆಟ್ಟುಬಿದ್ದಿದೆಯೆಂದು ಆಕ್ಷೇಪಿಸಲಾಗಿದೆ.

ಜರ್ಮನಿಯಲ್ಲಿ ಆತ್ಮಹತ್ಯೆ

ಹಿಟ್ಲರರ ಯುದ್ಧದ ವಿಷಯದಲ್ಲಿ ಜರ್ಮನರಲ್ಲಿ ಅತೃಪ್ತಿಯು ತಲೆದೋರಿ ಹತ್ತಿದೆ. "ನಾವು ಯಾವುದಕ್ಕಾಗಿ ಹೋರಾಡುತ್ತಿರುವುದು? ರಷ್ಯದ ಯುದ್ಧವು ಇಷ್ಟರಲ್ಲೇ ಮುಗಿಸಲ್ಪಟ್ಟರುವುದಿಲ್ಲೇಕೆ?" ಎಂಬೀ ಪ್ರಶ್ನೆಗಳನ್ನು ಜನರು ಕೇಳಹತ್ತಿದ್ದಾರೆ. ರಷ್ಯದ ಯುದ್ಧದ ಸರಿಕಾಲಾವಾಗಿ ನಾಝಿ ಪಕ್ಷ ಮತ್ತು ಸೇನೆಗಳೊಳಗೆ ಮನಸ್ತಾಪವುಂಟಾಗಿದೆ. ಗೋರಿಂಗ್ ಮತ್ತು ಜನರಲ್ ಲಿಸ್ಟರು ಸೇನೆಗೆ ಹೆಚ್ಚಿನ ಅಧಿಕಾರವೀಯಬೇಕೆಂದು ಸಾಧಿಸುತ್ತಿದ್ದಾರೆ. ಆದರೆ ಹಿಮ್ಲರು ಅದಕ್ಕೆ ವಿರೋಧವಿದ್ದಾರೆ. ಹಿಟ್ಲರರು ಹಿಮ್ಲರ ಪಕ್ಷ ಹಿಡಿದಿದ್ದಾರೆ. ಹಿಮ್ಲರರು ಹೆಚ್ಚು ಚ್ಚಾಗಿ ಜರ್ಮನ್ ಸ್ಟೂರ್ಮ್ ಟ್ರೂಪ್ ದಳಗಳನ್ನು ರಣರಂಗಕ್ಕೆ ಕಳುಹಿಸುತ್ತಿದ್ದಾರೆ. ಇವರಿಗೂ ಸೈನಿಕರಿಗೂ ತಿಕ್ಕಾಟಿವುಂಟಾಗಿದೆ. ಜರ್ಮನಿಯ ಆರ್ಥಿಕ ಭದ್ರತೆಯ ಕುರಿತು ಜನತೆಗೆ ವಿಶ್ವಾಸ ತಪ್ಪಿದೆ. ಅವರು ಬೇಂಕುಗಳಲ್ಲಿ ಹಣ ಇಡಲೊಪ್ಪುವುದಿಲ್ಲ. ಈ ಚಳಿಗಾಲದ ನಂತರ ಯುದ್ಧ ನಡಿಸಲು ಜರ್ಮನಿಗೆ ಸಾಧ್ಯವಾಗಲಾರದೆಂದು ಗ್ರಿಮಿಸಿ ಇಂಗ್ಲೆಂಡ್‌ನ್ಸ್ ಪಟ್ಟಣದಲ್ಲಿರುವ ಜರ್ಮನ್ ಸೇನಾಧಿಕಾರಿಯೊಬ್ಬರೇ ಒಪ್ಪಿರುತ್ತಾರೆ.

ಯುನ್ಯಾಟೆಡ್ ಸ್ಟೇಟ್ಸ್ ಜಪಾನು ಮಾತುಕತೆ

ಯುನ್ಯಾಟೆಡ್ ಸ್ಟೇಟ್ಸ್ ಮತ್ತು ಜಪಾನುಗಳೊಳಗೆ ನಡೆಯುತ್ತಿರುವ ರಾಜಿ ಸ್ಪಷ್ಟಾಪದೆ ಪರಿಣಾಮವು ಈ ವರೆಗೆ ತಿಳಿದುಬಂದಿರುವುದಿಲ್ಲ. ಜಪಾನು ಆಕ್ಸಿಸ್ ರಾಷ್ಟ್ರಗಳ ಸಂಬಂಧ ಕಡಿದು ಶಾಂತಿಯಮಾರ್ಗಾಟಿ ತೋರಿಸಿದ್ದರೆ ಆಪತ್ತಿಂದೇನೂ ಪ್ರಯೋಜನವಾಗುವ ಹಾಗಿಲ್ಲೆಂದು ನಂಬಲಾಗಿದೆ. ಈ ನಡುವೆ ಜಪಾನು ಭರದಿಂದ ಯುದ್ಧ ಸಿದ್ಧತೆ ಮಾಡುತ್ತಿದೆ. ರಕ್ಷಣೆಗಾಗಿ ಜಪಾನನ್ನು ೪ ಭಾಗಗಳನ್ನಾಗಿ ಮಾಡಲಾಗಿದೆ ಯುನ್ಯಾಟೆಡ್ ಸ್ಟೇಟ್ಸಿನ ರಾಜಿ ಪ್ರಸ್ತಾಪವು ನಿಷ್ಪ್ರಯೋಜನವಾದರೆ ಜಪಾನು ಯುದ್ಧ ಹೂಡುವುದು ನಿಶ್ಚಯವೆಂದು ಕೆಲಮಂದಿ ಜಪಾನ ಮುಖಂಡರು ಹೇಳತೊಡಗಿರುತ್ತಾರೆ. ಜಪಾನು ಅನುಕೂಲ ಸಂದರ್ಭವನ್ನು ನಿರೀಕ್ಷಿಸುತ್ತಾ ದಿನ ಕಳೆಯುವಂತೆ ತೋರುತ್ತದೆ.

ರಷ್ಯದಲ್ಲಿ ಅತ್ಯುತ್ಕೃಷ್ಟವು ಬೆಳೆ

ಈ ವರ್ಷ ನೋವಿಯೆಟ್ ಯಜಬ್ಲಿಕಿನಲ್ಲಿ ಬೆಳೆಯು ಅತ್ಯುತ್ಕೃಷ್ಟವಾಗಿದ್ದು ಸೈನ್ಯದ ಮತ್ತು ಜನತೆಯ ಅವಶ್ಯಕತೆಗಳನ್ನು ಪೂರೈಸಲು ಬೇಕಾಗಿರುತ್ತದೆ ಹೊಲಕಲಸಗಾರರು ಉತ್ಸಾಹದಿಂದ ಬೆಲೆ ಕಟಾವಿನ ಕೆಲಸ ಮಾಡುತ್ತಿದ್ದಾರೆ. ಸರಕಾರವೂ ಅವರಿಗೆ ಬಹಳ ಪ್ರೋತ್ಸಾಹವೀಯುತ್ತಿದೆ. ಜರ್ಮನರು ಆಕ್ರಮಿಸುವಾಗ ಸೈರತ್ಯ ಉಕ್ರೈನಿನ ಬೆಳೆ ಕಟಾವಿನ ಕೆಲಸವು ಬಹುಮಟ್ಟಿಗೆ ನಡೆದಿದ್ದಿತು. ಕೈನಿಯ ವತ್ತು ಕೊಳಸಿನ ಕೆಲವು ಬೆಳೆ ಕಟಾವಿನ ಕೆಲಸವು ಇಷ್ಟರಲ್ಲೇ ನಡೆದಿದೆ. ಪೂರ್ವ ಉಕ್ರೈನಿನಲ್ಲಿಯೂ ಕಟಾವು ನಡೆದಿರುತ್ತದೆ. ಆದುದರಿಂದ ಜರ್ಮನರು ಗೆದ್ದಿರುವ ಯಾವ ಪ್ರದೇಶದಲ್ಲಿಯೂ ಅವರಿಗೆ ಕೆಚ್ಚಿನ ಬೆಳೆಗಳೇನೂ ದೊರೆತಿರುವುದಿಲ್ಲ.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧ

ಹಾ. ಜಪಾನಿಯನರ **"ಗೊನೊಕಿಲರ್"** ರಿಜಿಸ್ಟರ್ಡ್

ಪ್ರಮೇಹ ವ್ಯಾಧಿಗೆ ಸಿದ್ಧೌಷಧ.

ಜಗತ್ಪ್ರಸಿದ್ಧ

ಎಲ್ಲಾ ಪ್ರಕಾರದ ಹೊಸ ಹಾಗೂ ಹಳೆಯ ಪ್ರಮೇಹ, ಪರಮಾ, ಮೂತ್ರವ್ಯಾವರಿಂದ ಕೀವು ಹೋಗುವುದು, ವೀರ್ಯಸ್ರಾವ, ಮೂತ್ರ ಪನಿಪನಿಯಾಗಿ ಹೋಗುವುದು ಮತ್ತು ಉರುಪು ಬೀಳುವುದು, ಮೂತ್ರ ನೊಗೆದ ಒಳಗೆ ಆಗಿರುವ ಯಾವುದಧಮಗಾಯ, ಸ್ವಪ್ನಾವಸ್ಥೆಯಲ್ಲಿ ಆಗಿರುವ ವೀರ್ಯಸ್ರಾವ, 'ಗೊನೊ-ಕೊಕಸ' ಎಂಬ ವಿಷಾಣು, ಅವೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಸ್ರವದ ರೋಗ ಮತ್ತು ತತ್ಸಂಬಂಧವಾದ ಅನೇಕ ಮುಸಹವಾಸದ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ ೫೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ. ೩. ವಿ. ಪಿ. ಚಾರ್ಜು ೦—೮—೦ ಪ್ರತ್ಯೇಕ. ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ಏಕಮಾತ್ರರು **ಡಾಕ್ಟರ್ ಡಿ. ಎನ್. ಜಸಾನಿ,** ವಿಟ್ಠಲ್‌ಭಾಯಿ ಪಟೇಲ ರೋಡ್, ಮುಂಬಯಿ.

ಶೀಘ್ರ ವಿಳಾಸಕ್ಕಾಗಿ: DR. D. N. JASANI, Vittalbhai Patel Road, BOMBAY 4.

The Karnataka Farms Limited, Areor.

(In Liquidation)

(Under sec 203 H, Indian Companies Act, 1913.)

Notice is hereby given that a meeting of Creditors of the Compaey will be held on saturday the 18th October 1941 at 5 P. M. at the residence of the liquidator at Udipi. The following agenda will be placed before the meeting.

1. To receive and adopt the accounts of the liquidator after hearing an account of his acts and dealings and of the conduct of the winding up.

2. To pass a resolution for the final dissolution of the Company.

3 Any other item of business which may be brought before the meeting with the previous consent of the chairman.

Camp, Udipi, 8—9—1941. | NARAYANA NAG, K. Advocate—Liquidator.

Complete Safety of Investment
Prompt Attention
Efficient & Economic Management

are smong the many features that have won for the CORPORATION a host of customers both in the District and outside as well.

The Canara Banking Corporation Ltd.
(Incorporated in British India).
ESTD: 1906.

MEMBERS:
Reserve Bank of India
&
Bankers' Clearing House, Madras.

ಉಡುಪಿ, ಗುರುವಾರ, ೧೮-೯-೧೯೪೧

ಚರ್ಚಿಲ್ಲರಿಗೆ ಹಿಂದೀಯರು ಉತ್ತರವೀಯುವರೇ?

ಹಿಂದೀ ಸ್ವಪ್ನೆಯ ಕುರಿತು ಇಸ್ಮ್ಯೂಎಂಬ ದೀರ್ಘಕಾಲ ಚರ್ಚಿಲ್ಲರು ಮೌನಧಾರಣೆ ಮಾಡಿದುದು ಉದ್ದೇಶಪೂರ್ವಕವಾಗಿ. ಹಿಂದೀಯೇತರ ಸ್ವಾತಂತ್ರ್ಯವೀಯಲಿಪರು ಸಿದ್ಧರಿಲ್ಲ. ಯಾವ ತಂತ್ರದಿಂದಾದರೂ ಅದನ್ನು ಅಪಹ್ನವ ಹೆಚ್ಚು ಸಮಯ ಬ್ರಿಟಿಸಿನ ಅಧೀನವಿರಿಸಿಕೊಳ್ಳಬೇಕೆಂಬುದೇ ಅವರ ಉದ್ದೇಶ. ಮುಸಲ್ಮಾನರಲ್ಲ ಪ್ರಥಮವಾಗಿ ಪಾಕಿಸ್ತಾನದ ಅಭಿಪ್ರಾಯದ ವಿಷ ಬೀಜ ಬಿತ್ತಿದವರಲ್ಲಿ ಅವರೊಬ್ಬರೆಂದ ನೇಲೆ ಅವರ ಮನೋವೃತ್ತಿಯು ಎಂತಹದಿರುವುದೆಂಬುದು ಸ್ಪಷ್ಟವಾಗುವುದು. ಅತ್ಯಾಂತಿಕ ಸ್ಫೋಟಣೆಯು ಆಸ್ಯಾ ಆಫ್ರಿಕಾ ಖಂಡಗಳಿಗೂ ಅನ್ವಯಿಸುವುದೆಂದು ಬ್ರಿಟಿಷ್ ಲೇಬರ್ ಪಕ್ಷದ ನಾಯಕ ಆಟ್ಲಿಯವರಂದುದರಿಂದ ಚರ್ಚಿಲ್ಲರು ಅವರ ಸೃಷ್ಟೀಕರಣಮಾಡಬೇಕಾಯಿತು. ತನ್ನ ಸಾಮ್ರಾಜ್ಯದ ರತ್ನಪ್ರಾಯವಾಗಿರುವ ಹಿಂದುದೇಶವನ್ನು ಅದು ಕಳಕೊಂಡರೆ, ಈಗ ಬಲಿಷ್ಠವಾಗಿರುವ ತನ್ನ ಜೊತ್ತಸವನ್ನು ಮುಂದೆ ತುಂಬುವುದಾದರೂ ಹೇಗೆ? ಅದಕ್ಕಾಗಿಯೇ ಕಾದಿದ್ದವರುವ ವ್ಯಾಪಾರೀ ಮಾರ್ಕೆಟಾದರೂ ಇನ್ನೊಂದಾವುದಿದೆ? ಅದುದರಿಂದಲೇ ಚರ್ಚಿಲ್ಲರು ಪ್ರಕೃತದ ಮಹತ್ತಾದ ವಿಪ್ಲವ ಮತ್ತು ವಿಚಿತ್ರ ಮಾರ್ಪಾಟುಗಳ ಪರಿಸ್ಥಿತಿಯಲ್ಲಿಯೂ ಹಿಂದೂದೇಶದ ಕುರಿತು ತನ್ನ ಹಳೆಯ ಆಸ್ಥಾಗತಿಕ ಭಾವನೆಯನ್ನು ಬದಲಾಯಿಸಲು ಸಿದ್ಧರಿಲ್ಲ. ಲೋಕದ ಕಣ್ಣಿಗೆ ಮಣ್ಣುಹಾಕಲು, ಹಿಂದೂದೇಶಕ್ಕೆ ಬ್ರಿಟನು ಸ್ವಾತಂತ್ರ್ಯಕೊಟ್ಟಯಲು ಸಿದ ವಿದೆ. ಬ್ರಿಟಿಷ್ ಕೋಮನ್ ವೆಲ್ತಿನಲ್ಲಿ ಅದಕ್ಕೆ ಸಮಾನಸ್ಥಾನಮಾನವಿಯಲಾಗುತ್ತಿದೆಯೆಂಬ ಕಣ್ಣುಕಟ್ಟಿನ ಮಾತನ್ನಾಡಿರುತ್ತಾರೆ. ಹಿಂದೂದೇಶದ ಕುರಿತು ಅವರು ತನ್ನ ಹಳೆಯ ಸಾಮ್ರಾಜ್ಯ ರಾಜಮನೋವೃತ್ತಿಗನೇ ಬಲವಾಗಿ ಕಟ್ಟುಬಿದ್ದಿದ್ದಾರೆ. ಅದನ್ನು ಬದಲಾಯಿಸುವ ಅವ್ಯಕ್ತತೆಯೇ ಅವರಿಗಿಲ್ಲ. ಯಾಕಂದರೆ ಹಿಂದೂದೇಶದ ಪರಿಸ್ಥಿತಿಯು ಅವರಿಗನುಕೂಲವಾಗಿಯೇ ಇದೆ. ಕೈಮಾರಿದ ಪರಿಸ್ಥಿತಿಯ ಒತ್ತಾಟದಿಂದ ಅನಿವಾರ್ಯವಾದಾಗ ಮಾತ್ರ ಬ್ರಿಟಿಷ್ ಸರಕಾರವು ಅಧಿಕಾರ ಬಿಟ್ಟುಕೊಡುವುದಲ್ಲದೆ ಹಿಂದೀಯರು ಎನ್ನೂಂದು ಬೇಡಿ ಅವರ ನ್ಯಾಯಬುದ್ಧಿಗೆ ವಿನಂತಿಸಾದಿಕೊಂಡರೂ ಸ್ವಯೋಜನವಾಗಲಾರದು. ಆದುದರಿಂದ ಚರ್ಚಿಲ್ಲರ ಆಧುನಾ ಸ್ಪೆಸಿಮೆಂಟ್ ರಾಜನೈಲ್ಲರ ಕದೆಗೆ ಹಿಂದೀ ರಾಜಕೀಯ ಮುಖಂಡರು ಕತ್ತು ನೀಡಿಕೊಂಡಿರುವುದು ಮೂರ್ಖತನ. ಈ ಸಂದರ್ಭದಲ್ಲಿ ಚರ್ಚಿಲ್ಲರನ್ನು ದೂರಿ ಫಲವಿಲ್ಲ. ಅವರು ತನ್ನ ಹಳೆಯ ಆಗ್ರಹಗಳನ್ನು ಬಿಡಲಾಯಿಸಪವರೇನೂ ಅಲ್ಲ. ಮಿಂಚಿಸಬೇಗದಿಂದ ಒಪಲಾಯಿಸಿಬಿಡುತ್ತಾರೆ. ಅವರ ಅದಕ್ಕೆ ಮಾತ್ರ ಪರಿಸ್ಥಿತಿಯು ಒತ್ತಾಯಿಬೇಕು. ಚರ್ಚಿಲ್ಲರು ಕಮ್ಯೂನಿಸ್ಟ್‌ನ ಬದ್ಧವೈರಿ. ರಸ್ಸೊದಾಡನೆ ಯಾವ ರೀತಿಯು ಸಂಬಂಧವನ್ನೂ ಬೆಳೆಸಬಾರದೆಂದು ಕಂದ 20ವರ್ಷಗಳಿಂದ ಉದ್ಘೋಷಿಸುತ್ತ ಬಂದವರು. ಆದರೆ ಇಂದೀಗ ತನ್ನ ಹಿಂದಿನ ಮನೋಸಿರ್ಧಾರಗಳನ್ನೆಲ್ಲಾ ಮೂಲೆಗೊತ್ತಿ ಸೋವಿಯೆಟ್ ರಸ್ಯದೊಡನೆ ಒಸ್ಸಂದ ಮಾಡಿ ಒಂದುಗೂಡಿ ನಡೆಯಲು ಮುಂದಾಗಿದ್ದಾರೆ. ಹಿಂದೂದೇಶದ ಕುರಿತು ಅವರ ಹಳೆಯ ಆಜಾಗತಿಕ ಮನೋವೃತ್ತಿಯು ಮಾರ್ಪಡದಿರಲು ಹಿಂದೀಯರೇ ಮುಖ್ಯ ಕಾರಣ.

ರಾಷ್ಟ್ರೀಯ ನಾಯಕತ್ವದ ಅಭಾವ

ಈ ಸಂಧಿಕಾಲದಲ್ಲಿ ಹಿಂದುದೇಶದಲ್ಲೀಗ ಸಿಜವಾದ ರಾಷ್ಟ್ರೀಯ ನಾಯಕತ್ವವೇ ಇಲ್ಲದಂತಾಗಿರುವುದು ಮಹತ್ತಾದೊಂದು ದುರ್ದೈವ. ದೇಶದ ಏಕಮಾತ್ರ ರಾಷ್ಟ್ರೀಯ ಸಂಸ್ಥೆಯಾದ ಕಾಂಗ್ರೆಸನ್ನು, ಮಹಾತ್ಮ ಗಾಂಧಿಯವರು ಅದರ್ಶಪರ ಅಹಿಂಸಾ ಧರ್ಮಸ್ಥಾಪನೆಗಾಗಿ ತನ್ನ ಕೈಗೊಂಬೆಯಾಗಿ ಮಾಡಿಕೊಂಡಿರುವರು. ಗಾಂಧಿಜಿಯವರ ಮೇಲಿನ ಕುರುಡು ನಿಷ್ಠೆಯಿಂದ ಹಲವು ಮಂದಿ ಕಾಂಗ್ರೆಸ್ ಮುಖಂಡರು ಸ್ವತಂತ್ರ ವಿಚಾರವನ್ನೊತ್ತೆಯಿಟ್ಟು ಗೊಂಬೆಗಳಾಗಿ ನಡೆಯುತ್ತಿದ್ದಾರೆ. ದೇಶದ ಸ್ವಾತಂತ್ರ್ಯಕ್ಕೆಂತಲೂ ಮಿಗುತ್ತಾರ ನಾಯಕತ್ವವು ಅವರಿಗೆ ಪ ಹೆತ್ತವನ್ನಾಗಿದೆ. ಹೆಚ್ಚಿನ ಕಾಂಗ್ರೆಸ್ ನಾಡಿಗಳು ತಮ್ಮ ಮನಸ್ಸಾಕ್ಷಿಯ ನೇರೆಗೆ ನಡೆಯುವ ನೈತಿಕ ಬಲವಿಲ್ಲವೆ, ಸ್ವಪರ ವಂಚಕಧೋರಣವಹಿಸಿ ರಾಜಕೀಯ ಆತ್ಮ ಘಾತಮಾಡಿಕೊಳ್ಳುತ್ತಿದ್ದಾರೆ. ರಾಷ್ಟ್ರೀಯ ಸಂಸ್ಥೆಯಾದ ಕಾಂಗ್ರೆಸು ರಾಷ್ಟ್ರ ಸ್ವಾತಂತ್ರ್ಯ ಸಾಧನೆಯಗೊದವೆಯೇ ಇಲ್ಲದೆ ಮಹಾತ್ಮ ಗಾಂಧಿಯವರ ನಾಯಕತ್ವವೇ ತನ್ನ ಸರ್ವಸ್ವವೆಂಬಂತೆ ವರ್ತಿಸುತ್ತಿರುವುದೇ ಇಂದಿನ ಹಿಂದೀ ರಾಜಕಾರಣದ ವಿಚಿತ್ರವೇಧಕ ದುರಂತ. ಹೀಗೆ ರಾಜಕೀಯ ಸಂಸ್ಥೆಯಾದ ಕಾಂಗ್ರೆಸು ಧರ್ಮಸ್ಥಾಪಕ ಸಂಸ್ಥೆಯಾಗಿ ಸನ್ಯಾಸ ಸ್ವೀಕರಿಸಿರುವಾಗ, ಮುಸ್ಲಿಮು ಲೀಗು ಜಿನ್ನರ ನಾಯಕತ್ವದಲ್ಲಿ ಹಿಂದುದೇಶದ ರಾಷ್ಟ್ರೀಯ ಸಾತ್ಮ ಭೂಗೋಲಿಕ ಏಕತ್ವವನ್ನೇ ಒಡೆದು ಪಾಕಿ ತನ್ನ ಬೇಳೆಬೇಯಿಸಲು ಮುಂದಾಗಿದೆ. ಹಿಂದು ಮಹಾಸಭೆಯವರು ಸ್ವಾಭಾವಿಕವಾಗಿ ತಮ್ಮ ಹಕ್ಕು ಬಾಧ್ಯತೆಗಳನ್ನೇ ಸಾಧಿಸಲು ಸೊಂಟ ಕಟ್ಟಿರುತ್ತಾರೆ. ಇಂತಹ ಬಿಕ್ಕಟ್ಟನ್ನೇ ಆಶಿಸಿ ಘೋಷಿಸುತ್ತಿನ್ನ ಸರಕಾರವು ಹಿಂದೀಯರ ಅನೈಕ್ಯದ ನೆನಪನ್ನು ಮುಂದೊಡ್ಡಿ ಕೈಕಟ್ಟ ತಣ್ಣಗೆ ಕೂತು ಬಿಟ್ಟಿದೆ. ನಿಜವಾದ ರಾಷ್ಟ್ರದ ಹಿತವು, ರಾಷ್ಟ್ರೀಯ ಸಾತ್ಮಂತ್ರ್ಯ ಸಾಧನಾ ಧ್ಯೇಯನ್ನು ಇಂದು ಮೂಲೆ ಗುಂಪಾಗಿರುತ್ತದೆ ಹಿಂದೀಯರೂಳಗೆ ಎಂದೂ ಒಕ್ಕಟ್ಟುಂಟಾಗುವ ಸಂಭವವಿಲ್ಲೆಂಬ ಭರವಸೆಯಿಂದ ಸರಕಾರವು ಧೈರ್ಯದಿಂದ ತನ್ನಿಚ್ಛಾನುಸಾರ ನಡೆಯುತ್ತಿದೆ. ಚರ್ಚಿಲ್ಲರು ತನ್ನ ಹಳೆಯ ವಲ್ಲವಿಯನ್ನೇ ಹಾಡಲೆದೆಗೊಂಡಿದ್ದಾರೆ. ಹಿಂದೀ ಜನಮತವನ್ನು ತೃಣ ಸಮಾನವಾಗಿ ಪರಿಗಣಿಸಿ ಬಿಡಬಹುದೆಂದವರಿಗೆ ಚಿನ್ನಾಗಿಗೊತ್ತು.

ಇನ್ನಾದರೂ ಒಕ್ಕಟ್ಟಿನ ವಿಕೋಧ ಸಾಧ್ಯವಿಲ್ಲವೇ?

ಉದ್ಯಾವರ—ಕಳೆದ ನವೆಂಬರ ತಾರೀಖು 28-29 ಮತ್ತು 30ನೇ ದಿವಸಗಳಲ್ಲಿ ಉದಿಯಾವರ R. C. ಶಾಲೆಯಲ್ಲಿ ಶ್ರೀಯುತ ಕೆರಡ್ಕಲ್ ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ತಿಕುಣಾಸ್ತಾವ ಯರ್ಸ್ಯಾಯಿ ಜರಿಗಿ ತಿದು, ಮಕ್ಕಳ ಮಂಟಪಗಳಿಗೆ ಗ್ರಾಮದ ಸುಮಾರು 7ಶಾಲೆಗಳ ಮಕ್ಕಳ ಆಟಗಳ ಸ್ಪರ್ಧೆ ಮಕ್ಕಳಿಗೆ ವಿನೋದಾಯ ಹಂಚಿಕೊಡಲಾಯಿತು. ಮಕ್ಕಳಿಗೆ ತಿಂಡಿ ತಿನಿಸುಗಳ ಇನಾಮು, ವಿಶೇಷ ಆಟಗಳಿಗಾಗಿ ವಸ್ತ್ರ ಹಂಚೋಣ ಇತ್ಯಾದಿ ಕಾರ್ಯಕ್ರಮಗಳಿಂದ ಲಸಿ, ಅಧ್ಯಕ್ಷರ ಸಂದರ್ಭಾಷ್ಟ ಕೆವಿಲ ಅಸ್ಯಕ್ಷರಿಂ ಧನ್ಯವಾದಗಳಿಂದಲೂ ಸಭೆಯು ತಾ. 30ನೇ ಆದಿತ್ಯವಾರ ಘಂಟೆ 8ಕ್ಕೆ ಕೊನೆಗೊಂಡಿತು. ಮೀನಗಾರಿಕೆಯಲ್ಲಿ ಸುಮಾರು 1000 ಮಕ್ಕಳು ಪಾಲುಗೊಂಡಿದ್ದು ನೋಡುವವರಿಗೆ ಒಂದು ಆತ್ಯಾಶ್ಚರ್ಯವನ್ನು ಉಂಟುಮಾಡಿತು.

ಭಯಂಕರವಾದ ಮೂತ್ರವ್ಯಾಧಿಗಳ ಮೇಲೆ ಆಶ್ಚರ್ಯಕರವಾದ ಔಷಧ

ಡಾ. ಜಸಾನಿಯವರ "ಗೊನೊಕಿಲರ್" ರಿಜಿಸ್ಟರ್ಡ್

ಪುರುಷ ವ್ಯಾಧಿಗೆ ಸರ್ವೌಷಧ

ಎಲ್ಲಾ ಪ್ರಕಾರದ ಹೊಸ ಯಾ ಹಳೆಯ ಸ್ಪಸುಸ್ರವ, ಪದಮ್ಸಾ, ಮೂತ್ರದ್ವಾರದಿಂದ ಕೀವು ಹೋಗುವುದು, ವೀರ್ಯಸ್ರವ, ಮೂತ್ರ ಹನಿಹನಿಯಾಗಿ ಹೋಗುವುದು ಮತ್ತು ಉರಿಮೂತ್ರ ಬೀಳುವುದು, ಮೂತ್ರ ಮಾರ್ಗದ ಒಳಗೆ ಆಗಿರುವ ಬಾವು ಔಷಧಾ ಗಾಯ, ಸ್ಪಸ್ಮಾಸ್ಟಸ್ಮ್ ಯಲ್ಲಿ ಆಗಿರುವ ವೀರ್ಯಸ್ರವ, 'ಗೊನೊ-ಕೊಕಸ' ಎಂಬ ವಿಷಕಾರಿ, ಅದೇ ಮೇರೆಗೆ ಸ್ತ್ರೀಯರಿಗಾದ ಭಯಂಕರ ಸ್ಪವರ ರೋಗ ಮತ್ತು ತತ್ಸಂಬಂಧವಾದ ಅನೇಕ ಮಾರಕವಾಸವ ವಿಕಾರಗಳೆಲ್ಲ ಈ ಔಷಧದಿಂದ ತ್ವರಿತವಾಗಿ ಮತ್ತು ಸಮೂಲವಾಗಿ ನಾಶವಾಗುವುವು.

ಬೆಲೆ: ೫೦ ಮಾತ್ರೆಗಳ ಬುಡ್ಡಿಯೊಂದಕ್ಕೆ ರೂ ೩, ಸಿ. ಪಿ. ಚಾರ್ಜ ೦-೮-೦ ಪ್ರತ್ಯೇಕ. ಎಲ್ಲಾ ಪತ್ರವ್ಯವಹಾರ ಇಂಗ್ಲಿಷಿನಲ್ಲಿ ಮಾಡಬೇಕು.

ತಯಾರಿಸುವ ವೈದ್ಯಾಧಿಕಾರಿ ಡಾಕ್ಟರ್ ಡಿ. ಎನ್. ಜಸಾನಿ, ವಿಟ್ಠಲ್‌ಭಾಯ್ ಪಟೇಲ್ ರೋಡ್, ಮುಂಬಯಿ.

ಜಗತ್ಪ್ರಸಿದ್ಧ ಕೀಲು ಮತ್ತು ಗಳಿಗೆ ಮತ್ತು ಕಾಲುಬೇದಿ ಪದರ್ಶಕ್ಕೆ ಒಂದೇ ಔಷಧ ಗುರುತಿನ ಕರಿಯಾದ ಗುರುತನ್ನು ಗೊನೊಕಿಲರ್ ಔಷಧದಲ್ಲಿ ಗಮನಿಸಿರಿ

Sole Manufacturer ಡಿ. ಕೆ. ಜಸಾನಿ, Vittalbhai Patel Road, ಮುಂಬಯಿ ೪

ಆಗ-?

ತಾರುಣ್ಯವು ತೊರೆದಾಗ, ಶಕ್ತಿಯು ಕುಗ್ಗಿದಾಗ, ದುಡಿತವು ದುಸ್ಸಾಧ್ಯವಾದಾಗ, ಊರುಗೋಲಿಲ್ಲದೆ ನಡೆದರೆ ಮುಗ್ಗುರಿಸುವಾಗ,-ದಾರಿದ್ರ್ಯವನ್ನು ಹೊಡೆದೋಡಿಸಬಲ್ಲ, ಮುಖದಲ್ಲಿ ನಗೆಯನ್ನು ನಲಸಬಲ್ಲ, ಜೀವನದ ಬೆಂಗೋಲಿ ನಂತಿರುವ ವಿಮೆಯ ಸೌಭಾಗ್ಯವನ್ನು ವೃದ್ಧಾಪ್ಯದಲ್ಲಿ ಅನುಭವಿಸಲಾಶಿಸದವರು ಜಗತ್ತಿನಲ್ಲಿರುವರೆ?

ವೃದ್ಧಾಪ್ಯವು ಸುಖಮಯವಾಗಬೇಕಾದರೆ, ಮಕ್ಕಳ ವಿದ್ಯೆ-ವಿವಾಹಾದಿಗಳು ನಿರಾತಂಕವಾಗಿ ನಡೆಯಬೇಕಾದರೆ, ಮನೆಯಲ್ಲಿ ನಗೆಯು ನಾಟ್ಯವಾಡಬೇಕಾದರೆ, ವಿಮೆಯನ್ನು ಕೊಂಡೊಡನೆ ನಿಮ್ಮದೇ ಆಗುವ ನಿಮ್ಮ ನಾಡಿನ ಕಂಪೆನಿಯಲ್ಲಿಯೇ ವಿಮೆಯಿಳಿಸಿರಿ.

ಕೆನರಾ ಮ್ಯೂಚುವಲ್

ಎಶ್ಯೂರೆನ್ಸ್ ಕಂಪೆನಿ ಲಿಮಿಟೆಡ್.

ಉಡುಪಿ : : : ದ. ಭಾರತ.

The Canara Mutual Assurance Company, Limited.

UDIPI : : : S INDIA.

TOURISTS' ONLY IDEAL RESORT

CAFE' ROYAL

(REGISTERLD)

SHIVALLI BRAHMINS'

High Class Boarding & Lodging House

HOSPITAL ROAD. **UDIPI.**

ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ ವಿಶ್ರಾಂತಿ ಗೃಹ

'ಕೆಫೆ ರೋಯಲ್'

ಆಸ್ಪತ್ರೆ ರಸ್ತೆ, ಉಡುಪಿ.

ಸುಂದರ! ಸುಳ್ಳಲ್ಲ!

1942ನೇ ಇಸವಿಯ

ಡೈರಿಗಳು

(ಹಲವು ತರದ ಮಾಹಿತಿಯನ್ನೊಳಗೊಂಡಿನೆ)

ತುಳುನಾಡ ಡೈರಿ	0—5—0
ಕರ್ನಾಟಕ ಡೈರಿ (ಸಣ್ಣದು)	0—6—0
,, (ಮುಚ್ಚಳದ್ದು)	0—7—0
,, (ದೊಡ್ಡದು)	0—10—0
,, (ಮುಚ್ಚಳದ್ದು)	0—12—0

ಪೈಸೆಯೊಂದಕ್ಕೂ ಅಂಚೆ ವೆಚ್ಚ 0-2-6 ಪ್ರತ್ಯೇಕ.

ಕೈಯ ಮತ್ತು ಅಂಚೆ ವೆಚ್ಚ ಹಣವು ಮೊಲಕ ಕಳಿಸಿ ಬುಕ್ ಪೋಸ್ಟ್ ದ್ವಾರಾ ಡೈರಿಗಳಿಸಿಕೊಳ್ಳಬಹುದು.

ನವಭಾರತ ಪುಸ್ತಕ ಭಂಡಾರ, ಉಡುಪಿ.

ತುಳಸಿಯ ಅದ್ಭುತಕರ ಪ್ರಯೋಜನೆಗಳು

ಯೂರೋಪಿನ ವಿಜ್ಞಾನಿಗಳಿಗೆ ತುಳಸಿಯ ಪ್ರಯೋಜನವು ತಿಳಿದು ಒಂದು ಶತಮಾನಕ್ಕಿಂತ ಹೆಚ್ಚು ಕಾಲವಾಗಿರುವುದಿಲ್ಲ. ಹಿಂದುಗಳಾದರೋ ಸಣ್ಣ ಗಿಡದ ಮಹತ್ವವನ್ನು ಸಾವಿರಾರು ವರ್ಷಗಳ ಹಿಂದೆಯೇ ತಿಳಿದಿದ್ದರು. ಹಿಂದುಗಳ ಎಲ್ಲ ಗೃಹದಲ್ಲಿಯೂ ತುಳಸಿಗೆ ಗಿಡಮೂಲಿಕೆಗಳ ಪೈಕಿ ಅಗ್ರಸ್ಥಾನವು ದೊರೆತಿದೆ. ಆದುದರಿಂದಲೇ ಅದಕ್ಕೆ ಪೂಜೆಯು ಸಲ್ಲಿಸಲ್ಪಡುತ್ತಿರುವುದು. ಎಲ್ಲ ಮಂದಿರಗಳಲ್ಲಿಯೂ, ಸಾಧುಗಳ ಕುಟೀರಗಳಲ್ಲಿಯೂ, ಇದನ್ನು ಬೆಳೆಸುತ್ತಿರುವರು. ಹಿಂದುಗಳಾದ ನಾವು ಕೇವಲ ಇದರ ಪವಿತ್ರತೆಯನ್ನು ಮಾತ್ರ ಕಾಪಾಡಿಕೊಂಡು ಬಂದಿರುವೆವೇ ಹೊರತು ತುಳಸಿಯ ಮಹತ್ವರವಾದ ಪ್ರಯೋಜನವನ್ನು ಮಾತ್ರ ಎಂದಿಗೂ ಅರಿತಿರುವುದಿಲ್ಲ ಇಂದಿಗೂ ಸೇ. ೯೦ ಹಿಂದುಗಳು ಇದೊಂದು ಪೂಜಾರ್ಹವಾದ ಸಸ್ಯವೆಂದು ಮಾತ್ರ ತಿಳಿದಿರುವರು

ಯೂರೋಪಿನ ವಿಜ್ಞಾನಿಗಳು ತುಳಸಿಯ ಅದ್ಭುತಕರವಾದ ಪ್ರಯೋಜನವನ್ನು ರಿತಿಗಳೇ, ನಮ್ಮ ದೇಶದ ಪುಕ್ಷಿಪ್ತ ಜನರು, ಅದರ ಮಹತ್ವವನ್ನು ತಿಳಿದುದು. ಮೊದಲನೆಯದಾಗಿ, ಮುಂಬಯಿನ ವಿಕ್ಟೋರಿಯ ಗಾರ್ಡನ್ ಮತ್ತು ಆಲ್ಬರ್ಟ್ ಮ್ಯೂಜಿಯಂ ಸ್ಥಾಪಿಸಲ್ಪಟ್ಟಾಗಲೇ ಇದಕ್ಕೆ ಪ್ರಾಮುಖ್ಯತೆಯುಂಟಾದುದು. ಅವುಗಳ ಮೇಲ್ವಿಚಾರಣೆಗೆಂದು ಗ್ರ್ಯಾಂಡ್ ಮೆಡಿಕಲ್ ಕಾಲೇಜಿನ ಪ್ರೊಫೆಸರ್ ಆದ ಜಾರ್ಜ್ ಪೃಡ್ಡರ್ ಎಂಬುವನ್ನು ನಿಯಮಿಸಲಾಯಿತು. ಆದರೆ ಈ ಎರಡು ಕಟ್ಟಡಗಳ ನಿರ್ಮಾಣ ಸ್ಥಾನದಲ್ಲಿ ಮಲೇರಿಯ ಸೊಳ್ಳೆಗಳ ಹಾವಳಿ ಬಹಳವಾಗಿದ್ದಿತು. ಅಲ್ಲಿ ಕೆಲಸ ಮಾಡಲು ಹೋಗುತ್ತಿದ್ದ ಕೂಲಿಗಾರರು ಮಲೇರಿಯದಿಂದ ಜ್ವರಪೀಡಿತರಾಗುತ್ತಿದ್ದರು. ಇದರ ಹಾವಳಿಯು ಅತಿಯೆನೀಯವಾಗಿ, ಎಷ್ಟು ಕೂಲಿಯನ್ನು ಕೊಟ್ಟರೂ, ಕೆಲಸಗಾರರೇ ಸಿಗದಂತಾಯಿತು. ಅಧಿಕಾರಿಗಳಿಗೆ ಏನು ಮಾಡಬೇಕೆಂಬುದೇ ತಿಳಿಯಲಿಲ್ಲ. ಕೊನೆಗೆ ಒಬ್ಬ ಹಿಂದು ಅಧಿಕಾರಿಯ ಸಲಹೆಯಂತೆ, ಅಲ್ಲಿ ತುಳಸಿ ಗಿಡಗಳನ್ನು ಬೆಳೆಯಿಸಿದರು. ಇದರಿಂದ ಅತ್ಯಾಶ್ಚರ್ಯಕರವಾದ ಪರಿಣಾಮವುಂಟಾಯಿತು. ಸೊಳ್ಳೆಗಳು ಮಾಯವಾಗಿ ಹೋದವು, ಮಲೇರಿಯವೂ ದೂರವಾಯಿತು. ಈ ಸುದ್ದಿಯನ್ನು ಲಂಡನ್ನಿನ ಪತ್ರಿಕೆಗಳು ಪ್ರಕಟಿಸಲು, ಇಂಪೀರಿಯಲ್ ಮಲೇರಿಯ ಕಾನ್ಫರೆನ್ಸಿನವರು ಹಿಂದೂ ಶಾಸ್ತ್ರ ಗ್ರಂಥಗಳ ಸಂಶೋಧನೆಗಾರಂಭಿಸಿದರು. ಈ ಸಂಶೋಧನೆಯ ಫಲವಾಗಿಯೂರೋಪ್ ಮತ್ತು ಅಮೆರಿಕಗಳಲ್ಲಿ ನೂತ್ನ ಹೊಸ ಮನೆಗಳಲ್ಲಿ ಸಹ ತುಳಸಿಯ ಮಹತ್ವವು ಹೆಚ್ಚಾಯಿತು.

ಚರ್ಮ ರೋಗಗಳಿಗೆ—ತುಳಸಿ ನಿತ್ಯವೂ ಮನುಷ್ಯನ ಬಹಳ ಪ್ರಯೋಜನಕಾರಿಯಾಗಿರುವುದು. ತುಳಸಿ ಗಿಡದ ಪಾತಿಯಲ್ಲಿನ ಮಣ್ಣನ್ನು ರಂಗಕ್ಕೆ ಲೇಪಿಸಿ, ಕ್ಷಣ ಹೊತ್ತಿನ ಮಟಿಗೆ ನೆನೆಸಲ್ಲಿ ಕುಳಿತು, ಸ್ನಾನಮಾಡಿದಲ್ಲಿ, ಕೆಲವು ಸಾರಿ ಈ ರೀತಿ ಮಾಡುವುದರಿಂದ ಕಜ್ಜಿ, ತುರಿಗಳು ಗುಣವಾಗಿ, ದೇಹವು ಸ್ವಾಭಾವಿಕ ಕಾಂತಿಯುಕ್ತವಾಗುತ್ತದೆ.

ಅಜೀರ್ಣ— ತುಳಸಿಯ ಎಲೆಗಳಲ್ಲಿ ಒಂದು ವಿಧವಾದ ಆಸಿಡ್ ಇದೆ. ಇದು ಆಹಾರವನ್ನು ಜೀರ್ಣಿಸಲು ಸಹಾಯವನ್ನು ಮಾಡುತ್ತದೆ. ಈ ಕಾರಣದಿಂದಲೇ ಹಿಂದುಗಳು ಪೂಜಾನಂತರದಲ್ಲಿ, ಸಮಸ್ಕಾರ ಮಾಡಿದ ನಂತರ ಈ ಎಲೆಗಳನ್ನು ತಿನ್ನುವ ಪದ್ಧತಿ ಇದೆ. ಆದರೆ ಬೆಳಿಗ್ಗೆ, ಮಧ್ಯಾಹ್ನ ಮತ್ತು ಸಾಯಂಕಾಲ, ಈ ರೀತಿ 3 ಸಾರಿ ಇವನ್ನು ತಿಂದರೆ ಬಹಳ ಪ್ರಯೋಜನವುಂಟು. ಒಂದು ಸಾರಿಗೆ ಕನಿಷ್ಠಪಕ್ಷ 11 ದಳ ಎಲೆಗಳನ್ನು ತಿನ್ನಬೇಕು. ಇದರಿಂದ ದೇಹ, ಹೃದಯಬಲಗಳೆಂದೂ ಪುಷ್ಟಿಯಾಗುವುವು. ಊಟವಾದ ನಂತರ ತುಳಸಿಯ ಎಲೆಗಳನ್ನು ತಿನ್ನುವುದರಿಂದ ಆಹಾರವು ಜೀರ್ಣವಾಗುವುದು.

ಮಲೇರಿಯ— ರೋಗಿಗಳು ತುಳಸಿ ಎಲೆಯ ಒಂದು ತೊಲ ರಸದಲ್ಲಿ ಒಂದು ಚುಟ್ಟು ಮೆಣಸಿನ ಚೂರ್ಣವನ್ನು ಸೇರಿಸಿ, ಜೇನುತುಪ್ಪದಲ್ಲಿ ನೆಕ್ಕಬೇಕು.

ಜ್ವರಗು—ತುಳಸಿಎಲೆ, ಬಿಲ್ವಪತ್ರೆ,ಆರಳಿ ಎಲೆಗಳನ್ನು ಒಂದೊಂದು ಚುಟುಕೆಸಷ್ಟು ಕುಟ್ಟಿ ಒಂದು ಸೇರು ನೀರಿನಲ್ಲಿ ಕುದಿಸಿರಿ. ಒಂದು ಚುಟಕೆಸಷ್ಟು ನೀರು ಉಳಿದಾಗ, ಶೋಧಿಸಿಟ್ಟುಕೊಳ್ಳಿ. ಎರಡೆರಡು ಗಂಟೆ ನಂತರ 2½ ತೊಲದಷ್ಟು ಕುಡಿಸಿ.

ಪಾಪಸ್ಕಳ್ಳಿಕಜ್ಜಿ— ೫ ಗುಲಗಂಜಿ ತೂಕದಷ್ಟು ತುಳಸಿ ರಸವನ್ನು ದಿನಕ್ಕೆ ೫ ಸಾರಿ ಕುಡಿಸಿದರೆ ಸಾಕು.

ಪಾತರೊ ಗಳ್ಳಿ— ತುಳಸಿ ಮತ್ತು ಮೆಣಸಿನಕಾಳಿನ ಚೂರ್ಣವನ್ನು ಆಕಳ ತುಪ್ಪದಲ್ಲಿ ಬೆರೆಸಿ ತಿನ್ನಬೇಕು. ಕೆಲವೇ ದಿನಗಳಲ್ಲಿ ಉತ್ತಮವಾಗುವುದು.

ಕಿವಿರೋಗ—ತುಳಸಿ ರಸವನ್ನು ೨ ದಿನಗಳವರೆಗೆ ಕಿವಿಯಲ್ಲಿ ಹಾಕಿದರೆ ಗುಣವಾಗುವುದು.

ಬಡವರ ಸಸ್ಯಾಜ ತೈಲ

(ಇದೇ ಪುಟದ ಕೊನೆಯಲ್ಲಿ ಮುಂದುವರಿಯುವುದು.)

ನಿಂಬೆ ಹಣ್ಣಿನ ಸಿಪ್ಪೆಯ ಸುಮಾರಿಗೆ ಇಂದಿನ ಸುಲಿ ನಾಗರಿಕರ ತಾಯಿ ತಂದೆಗಳು, ತಾತ ಮುತ್ತಾತಂದಿರು ಒಳ್ಳೆ ಬಡತನದಲ್ಲಿದ್ದರೆಂಬುದನ್ನು ನಾವು ಒಪ್ಪಲೇ ಬೇಕಾಗುತ್ತದೆ.

ಒಂಗಾಳದ ವಿಷಯವನ್ನು ತೆಗೆದು ಕೊಳ್ಳೋಣ. ಇಂದಿನ ದಿನ ಬಂಗಾಳದಲ್ಲಿ ತಿಂಗಳುಬಾವ ವಕೀಲರು, ವೈದ್ಯರು, ವರ್ತಕರು ಎಲ್ಲರೂ ನೊದಲು ಬಡವರೇ ಆಗಿದ್ದರು. ಅನೇಕರ ತಂದೆತಾಯಿಗಳು ಅಡಿಗೆ ಕೆಲಸದಲ್ಲಿದ್ದರು. 1911ರ ಸುಮಾರಿಗೆ ಬಂಗಾಳಿಗಳ ವೃತ್ತಿ 190ರ ಮಧ್ಯಸ್ಥವೇರಿ ಅಂಬೋಲನವೆ ಸಮಯದಲ್ಲಿ ಸಹ ಧನಿಕರಾಗಿದ್ದವರು ಎಷ್ಟು ಮಂದಿ ಹೊರೆಯಬಲ್ಲರು?

ಅಮಾವಾಸ್ಯೆಯ ನಿರಾಶೆ, ಭಗ್ನ ಹೃದಯ, ಮತ್ತು ನಿರುದ್ಯೋಗ ಇವುಗಳಿಗೆ ಬಡತನವು ಸರಿಯಾದ ಕಾರಣವಲ್ಲ. ಹಿಂದಿನ ಕಾಲದಲ್ಲಿ ಬಡವರೇ ವಿಜಯಿಗಳಾಗಿದ್ದರು. ಈಗಲೂ ಅವರೇ ಆಗುವರು. ಬಡವರೇ ಒಂದಲ್ಲ ಒಂದು ದಿನ ಜಗತ್ತನ್ನು ಗೆಲ್ಲುವರೆಂದು ನನ್ನ ಭವಿಷ್ಯವಾಣಿಯು ಹೇಳುತ್ತಿದೆ.

ಸಮಾಜವಾದ ಕಾಂಗ್ರೆಸ

(೫ನೇ ಪುಟದಿಂದ ಮುಂದರಿದುದು)

ಹೋಳೆಯನ್ನಾದರೂ ಪ್ರತ್ಯೇಕ ಕೊಡಲು ಸಾಧ್ಯವಿಲ್ಲವೆಂದು ಅಜಾದರು ಸ್ಪಷ್ಟಪಡಿಸಿದರು. ಅವರು ಆಲ್ಲಿಂದ ವಾರ್ಧಕ್ಕೆ ತೆರಳಿ ಗಾಂಧಿಜಿ ಮತ್ತು ಇತರ ಕಾಂಗ್ರೆಸ್ ಧುರೀಣರೊಡನೆ ಚರ್ಚಿಸಿ ಮುಂದಿನ ಕಾರ್ಯಕ್ರಮಗಳನ್ನು ನಿಶ್ಚೈಸಲಿರುವರು. ಇತರ ರಾಜಕೀಯ ಕೈದಿಗಳೂ ದೇಶದ ಬೇರೆ ಬೇರೆ ಜೈಲುಗಳಿಂದ ಬಿಡುಗಡೆ ಹೊಂದಿದ್ದಾರೆ. ಸಂಯುಕ್ತ ಪ್ರಾಂತ್ಯದಲ್ಲಿ ಸುಮಾರು 3000 ಸತ್ಯಾಗ್ರಹಿಗಳು ಬಿಡಲ್ಪಡುವರು.

ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಸಭೆ.

"ವರ್ಕಿಂಗ್ ಕಮಿಟಿ ಮತ್ತು ಅಖಿಲ ಭಾರತ ರಾಷ್ಟ್ರ ಸಮಿತಿಯ ಸದಸ್ಯರು ಅಥವಾ ಬೊಂಬಾಯಿ ನಿರ್ಧಾರವನ್ನು ವ್ಯತ್ಯಾಸಗೊಳಿಸಬೇಕೆಂಬ ಆತುರವಿರುವವರು ಪುನಃ ಸತ್ಯಾಗ್ರಹ ಹೂಡಬಾರದು. ಹೀಗಿದ್ದರೂ ಕಾಯಿದೇ ಭಂಗವು ತಡೆಯಿಲ್ಲದೆ ಮುಂದುವರಿಯಬೇಕು"- ಎಂದು ಮಹಾತ್ಮಾ ಗಾಂಧಿಯವರು ತನ್ನ ಸುದೀರ್ಘ ತೀಳಿಕೆಯೊಂದರಲ್ಲಿ ವಿದಿತಪಡಿಸಿರುವರು. "ವಿಧಾಯಕ ಕಾರ್ಯಕ್ರಮವಿಲ್ಲದ ಕಾಯಿದೇ ಭಂಗವು ಭಾರತಕ್ಕೆ ಸ್ವಾತಂತ್ರ್ಯ ತರುವಂತಿಲ್ಲ. ಮೊದಲನೆಯದಿಲ್ಲದ ಕಾನೂನು ಉಲ್ಲಂಘನೆಯು ಹಿಂಸಾತ್ಮಕ ರೀತಿಯಾಗುವದಲ್ಲದೆ ಕೊನೆಗೆ ನಿಷ್ಫಲವಾಗುವದು" ಅಂದಿದ್ದಾರೆ. ಬಿಡಲ್ಪಟ್ಟ ಸತ್ಯಾಗ್ರಹಿಗಳ ಕುರಿತು "ಅವರು ಪುನಃ ಕೂಡಲೇ ಸತ್ಯಾಗ್ರಹ ಹೂಡಬೇಕೆಂದು ನಾನಿನ್ನುವದಿಲ್ಲ. ಅದು ಅನಗತ್ಯ. ಆವರೆ ನಿತ್ಯದ ಕಾಯಿದೇ ಭಂಗವು ಮುಂದುವರಿಯಬೇಕು. ವಿಶೇಷ ಪರಿಸ್ಥಿತಿಯಲ್ಲಿ ಕಾಯಿದೇ ಭಂಗವನ್ನು ಮನ್ನಾ ಮಾಡುವ ಅಧಿಕಾರವನ್ನು ನಾನಿಲ್ಲಿನೆಂಬುದು ತಿಳಿದಿರಲಿ. ಶಾಂತಿ ಸ್ಥಿತಿಜ್ಞಾಧಾರ ಮನುಷ್ಯನು ಇಂತಹ ಸಂಧಿಗ್ಧ ಕಾಲದಲ್ಲಿ ಹುಚ್ಚು ಸಿದ್ಧೋಧ ಚಟುವಟಿಕೆಗಳನ್ನು ತ್ಯಜಿಸುವದೆಂದರೆ ನನ್ನನ್ನು ನಾನೇ ಮರೆಯುವದೆಂದರ್ಥ"- ಎಂದು ಗಾಂಧಿಜಿಯಂದಿದ್ದಾರೆ. ನೂತನವಾಗಿ ಅಜಾದರು ವಾರ್ಧಾದಲ್ಲಿ ಬೇಗನೇ ಕಾಂಗ್ರೆಸ್ ವರ್ಕಿಂಗ್ ಸಮಿತಿಯನ್ನು ಕರೆಯುವ ಆಲೋಚನೆಯಲ್ಲಿರುವರು. ಈ ಕುರಿತು ಗಾಂಧಿಯವರೊಡನೆ ಪತ್ರವ್ಯವಹಾರ ನಡೆಸಿ,ಅವರು ನಿಶ್ಚಿತ ಬಾರ್ದೋಲಿ ಪ್ರಯೋಗವನ್ನು ರದ್ದುಪಡಿಸಿದರೆ ಸದ್ಯವಲ್ಲೇ ಸಭೆ ಜರಗುವದೆಂದೂ, ಇಲ್ಲವಾದರೆ ಬಾರ್ದೋಲಿಯಿಂದ ಮುಂದಿನ ಮೇಲೆ ಕೂಡುವದೆಂದೂ ತಿಳಿದುಬರುತ್ತದೆ.

ಬಂಗಾಳದಲ್ಲಿ ಮಂತ್ರಿಮಂಡಲ ರಚನಾ ಯತ್ನ.

ಬಂಗಾಳಾ ಮಂತ್ರಿಮಂಡಲವು ರಾಜೀನಾಮೆಯಿತ್ತನೇಲೆ ನೂತನ ಸಚಿವ ಮಂಡಲಿ ಸ್ಥಾಪನೆ ಹೊಂದಿಲ್ಲ. ಮಿ. ಫಜಲುಲ್ ಹಕ್ಕರು ಬೇರೆ ಪಕ್ಷಗಳ ಸದಸ್ಯರೂ ಕೂಡಿ, ತನ್ನ ಸಮರ್ಥಕರ ಬೆಂಬಲವಿರುವ ಪುರೋಗಾಮಿ ಸಕ್ಷ ಪ್ರಾಂಪಂಡನ್ನು ಸ್ಥಾಪಿಸಿಕೊಂಡಿರುವರು. ಗವರ್ನರೊಡನೆ ಮುಂದಿನ ವ್ಯವಸ್ಥೆಯ ಕುರಿತು ಪರ್ಯಾಲೋಚಿಸುತ್ತಿರುವರು. ಇವರೇ ಪುನಃ ಮುಖ್ಯ ಮಂತ್ರಿಯಾಗಿ ಬರುವ ಸಂಭವವಿದೆ. ಬಂಗಾಳಾ ಕಾಂಗ್ರೆಸ್ ಎಸೆಂಬ್ಲಿ ಪಕ್ಷದ ಸಭೆ ನೇರ ಪ್ರತಿಕೂಲ ಕಾರ್ಯಕೈಕೊಳ್ಳದ ಮಂತ್ರಿತ್ವ ಸ್ಥಾಪನೆಗೆ ತಾವು ಅನುಕೂಲವಿರಬೇಕೆಂದು ನಿರ್ಧಾರವಾಗಿದೆ.

ರಷ್ಯಾ ರಣರಂಗ

ರಷ್ಯಾ ರಣರಂಗಗಳಲ್ಲಿ ವಿಶೇಷ ಬದಲಾವಣೆಯೇನೂ ಆಗಿರುವದಿಲ್ಲ. ಜರ್ಮನರ ಮುನ್ನುಗ್ಗಾಟವು ಬಹುತೇಕವಾಗಿ ಎಲ್ಲಾ ಕ್ಷೇತ್ರಗಳಲ್ಲೂ ತಡೆಗಟ್ಟಲ್ಪಟ್ಟಿದೆ. ಮೋಸ್ಕೋವನ್ನು ಹಿಡಿದೇ ಬಿಡುವ ಆಚಲ ನಿರ್ಧಾರದಿಂದ ನೂರು ಮೂರು ಬಾರಿ ನಡಿಸಿದ ಹೊಸ ಧಾಳಿಯು ನಿಷ್ಫಲಯೋಜಕವಾಗಿದೆ. ಮಾತ್ರವಲ್ಲದೆ ಅತಿ ಹೆಚ್ಚಿನ ಹಾನಿಯನ್ನು ನಾಜೀ ಸೇನೆಯು ಅನುಭವಿಸಬೇಕಾಗಿ ಬಂತು. ಈಗ ಭಯಂಕರ ಚಳಿಯಾದ ದರಿಂದ ಇನ್ನು ಟೀಂಕು ಮೊದಲಾದುವುಗಳನ್ನು ನಡಿಸಲು ಹೆಚ್ಚಿನ ಪೆಟ್ರೋಲು ಬರ್ಚಿದೆ. ರಶ್ಯನರ ಪ್ರತಿಧಾಳಿಯನ್ನು ಕುಗ್ಗಿಸುವದು ಅಸಾಧ್ಯವೆಂಬುದರಿಂದ ಚಳಿಗಾಲ ಮುಗಿಯುವ ವರೆಗೆ ಮೋಸ್ಕೋ ಧಾಳಿಯನ್ನು ಕೈಬಿಟ್ಟು ಆ ಭಾಗದಲ್ಲಿ ತಾವು ಸ್ವಲ್ಪರಕ್ಷಣಾ ವ್ಯವಸ್ಥೆಯ ಸ್ಥಿತ್ಯೇ ಕೈಗೊಳ್ಳುವದಾಗಿ ಜರ್ಮನರ ಪ್ರಕಟನೆಯಿದೆ. ರೊಸ್ಟೋವಿನಿಂದ ಹಿಂದ ಕ್ಕಟ್ಟಲ್ಪಟ್ಟ ಜರ್ಮನರು ಈಗ ಆ ಕ್ಷೇತ್ರವಲ್ಲಿ ಪ್ರತಿಧಾಳಿಗಾರಂಭಿಸಿವ್ಯಾರೆ. ಬಲ್ಕಾನ್ ವಿಭಾಗದಲ್ಲಿ ತಮ್ಮ ಸ್ಥಾನವನ್ನು ರಶ್ಯನರು ಭದ್ರಪಡಿಸಿಕೊಂಡಿರುವದಲ್ಲದೆ ಕಲಿನಿನ್ ಕ್ಷೇತ್ರದಲ್ಲಿ ಮುಂದೊತ್ತಿ ಬಾರಂಭಿಸಿರುತ್ತಾರೆ.

ನಾಜೀ ಮಿತ್ರರಾಷ್ಟ್ರಗಳ ಮೇಲೆ ಯುದ್ಧ

ಜರ್ಮನಿಯೊಡನೆ ಯುದ್ಧವಲ್ಲಿ ಸಹಕರಿಸಿದ್ದ ಫಿನ್ಲೇಂಡ್, ರುಮೇನಿಯಾ, ಹಂಗೇರಿಗಳಿಗೆ ಬ್ರಿಟನ್ ಸರಕಾರವು ಎಚ್ಚರಿಕೆಯನ್ನು ಕಳುಹಿಸಿದಕ್ಕೆ ರುಮೇನಿಯಾ ಹಂಗೇರಿಗಳು ಉತ್ತರವನ್ನೇ ಕೊಟ್ಟಿಲ್ಲ. ಫಿನ್ಲೆಂಡು ಕೊಟ್ಟ ಉತ್ತರವು ತೀರಾ ಅಸಮರ್ಪಕವಾದುದರಿಂದ ಬ್ರಿಟನ್ ಮತ್ತು ಕೆನಡಾಗಳು ಇವೇ ತಾ. 7ರಲ್ಲಿ ಈ ರಾಷ್ಟ್ರಗಳ ಮೇಲೆ ಯುದ್ಧ ಸಾರಿವೆ. ಅಮೆರಿಕ ಸಮುದ್ರವಲ್ಲಿದ್ದ ಫಿನ್ನಿಶ್ ವ್ಯಾಪಾರೀ ಹಡಗುಗಳನ್ನು ಅಲ್ಲಿಯ ನೌಕಾ ದಳದವರು ಬಂದೋಬಸ್ತಿನಲ್ಲಿಟ್ಟಿದ್ದಾರೆ. ಇಂಗ್ಲಾಂಡಿನಲ್ಲಿದ್ದ ಫಿನ್ನಿಶ್ ರಾಯಭಾರಿಯು ಸ್ವದೇಶಕ್ಕೆ ಮರಳಿರುವರು.

ಲಿಬಿಯದ ಯುದ್ಧ

ಲಿಬಿಯದ ಯುದ್ಧವು ಯೋಜನಾಪ್ರಕಾರ ನಡೆಯುತ್ತಿದೆ. ಜರ್ಮನ್ ಸೇನೆಯು ಪುನರ್ಸಂಘಟಿತವಾಗಿ ತೀವ್ರ ಪ್ರತಿಘಟನೆ ನಡೆಸುತ್ತಿದೆ. ಬ್ರಿಟಿಷ್ ಸೈನ್ಯಗಳು ಎಲ್ಲೆಡೂಡಾ ಎಂಬ ಸ್ಥಳವನ್ನು ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಂಡವು. ಹಲವು ಜರ್ಮನರನ್ನು ಸೆರೆಹಿಡಿಯಲಾಯಿತಲ್ಲದೆ ವಿಮಾನ ಯುದ್ಧವಲ್ಲಿ 22 ವೈರಿ ವಿಮಾನಗಳು ನೆಲಕ್ಕುರುಳಿಸಲ್ಪಟ್ಟವು.

ಮಂಗಳೂರು.

ಅವಸರದ ಸಭೆ ದಕ್ಷಿಣಕನ್ನಡ ಜಿಲ್ಲಾ ಬೋರ್ಡಿನ ಅವಸರ ಸಭೆಯೊಂದು ಇವೇ ತಾ. 13 ನೇ ಶನಿವಾರ ಪೂರ್ವಾಹ್ನ 9-55ಕ್ಕಾಗಿ ಮಂಗಳೂರು ಆಫೀಸಿನಲ್ಲಿ ಜರಗಲಿದೆಯಂತೆ. ಕಂಟ್ರಾಯತ್ತು ಮಾಡಬೇಡಿಯೆಂಬ ಕಾನೂನಾಗಿ ಜ್ಯಾರಿಗೆ ಬಂದರೆ ಜಿಲ್ಲಾ ಬೋರ್ಡಿನ ಆಫೀಸು ಬಂದಿವರ್ಗಿ ತತ್ಕಾರ್ಯ ಯೋಗವಾಗಲಿಕೆ ರುವ ಕುರಿತು ಲೋಕಲ್ ಬೋರ್ಡ್ ಇನ್ಸ್‌ಪೆಕ್ಟರಿಂದ ಬಂದ ಪತ್ರವು ಸಭೆಯಲ್ಲಿ ಆಲೋಚಿಸಲಾಗುವದು.

ಉಡುಪಿ.

ತರ್ಕ ಸಭೆ— "ಬಾಲಕ ಬಳಗ"ದ ವಿಚಾರ ತರ್ಕಸಭೆಯು ಇದೇ ಸಭೆಯು ಇದೇ ತಾ. 6 ರಲ್ಲಿ ಶ್ರೀಮಠದಂಪತೀರ್ಥರ ಬಾಲಿಯಲ್ಲಿ ಶ್ರೀ ಗೋಪಾಲಕೃಷ್ಣ ಸಭೆಯ ಅಧ್ಯಕ್ಷತೆಯಲ್ಲಿ ಜರಗಿತು. 'ಬಾಸ್ಕೆಟ್ ಬಾಲ್ ಆಟವು ಸಾಮಾಜಿಕ ಸಂಸ್ಕೃತಿ ಮೇಲೆ ಆಗಬೇಕಾದ ಪರಿಣಾಮ' ಎಂಬ ವಿಷಯದ ಕುರಿತು ಹಲವರು ಬಾಲರು ಭಾಷಣ ಮಾಡಿದರು. ಶ್ರೀ ಬಿ. ವಿಶ್ವನಾಥ ಶೆಟ್ಟಿ, ಬಿ. ಎಲ್., ಇವರು ಶ್ರೀ ಅನಂತ ಶೆಣೈಯವರ ಹಿತೋಪದೇಶಗಳಿಗಾಗಿ ಅಧ್ಯಕ್ಷರ ಭಾಷಣ, ಧನ್ಯವಾದಗಳೊಡನೆ ಸಭಾಂತ್ಯವಾಯಿತು.

Notice.

ಉಡುಪಿ. ಡಿ. ಮು. ಕೋರ್ಟಿನಲ್ಲಿ.

O. P. 63/41.

1. ಸರಸ್ವತಿ ಅಮ್ಮ, 2. ಶ್ರೀನಿವಾಸ 3. ವೆಂಕಟ್ರಮಣ, ಕೆಮೆಯವರಿಬ್ಬರು ಮೈನರರು, ಪ್ರೇಮ ಚಿಂತಕ 1ನೇ ಆರ್ಜದಾರರು, ಆರ್ಜದಾರರು, ವಾಸ್ತು

1, ವಿಠ್ಠಲ ಭಟ್ಟ 2. ಲಕ್ಷ್ಮೀ ನಾರಾಯಣ ಭಟ್ಟ, ಯೆದ್ರಿರು,

ಯೆದ್ರಿರು ಉಪ್ಪಿ ತಾಲ್ಲೂ ಸಂಬ್ರ 76ನೇ ಬಡಗುಮಟ್ಟು ಗ್ರಾಮದ ವಿಳಾಲಕೆಯಲ್ಲಿರುವವರು.

1ನೇ ಆರ್ಜದಾರಳ ಗಂಡ, 2 ಮತ್ತು 3ನೇ ಆರ್ಜದಾರರ ತಂದೆ. 1ನೇ ಯೆದ್ರಿರು ಮಗ. ವ 2ನೇ ಎದ್ರಯ ಸಹೋದರ, ಈಗ ತಾ. 9-9-41 ರಲ್ಲಿ ಮೃತ ಪಟ್ಟ ಪಿ. ಶ್ರೀನಿವಾಸ ಭಟ್ಟ ಬಾಳ್ಕು The Oriantal Government Security life Assurance Co, Ltd., ನಲ್ಲಿ ತೆಗೆದ ನಂಬ್ರ 599888 ಪೊಲಿಸಿಯ ಹಣ ರೂ. 1030/- ಹಾಗೂ ಪಡಿಯುತರಿಕ್ಕುದಂರ್ದೇಂತಲೂ, ಆ ಕುರಿತು ತಮಿಗೆ ಏಂದು ವಾರಿಸ ಸರ್ಟಿಫಿಕೇಟು ಕೊಡಬೇಕಾಗಿಯೂ ಮಾಡಿಕೊಟ್ಟ ಮೇಲ್ಕಂಡ ಅರ್ಜಿಯು ತಾ. 7-1-1942 ಗೆ ಕೆಳಗೆ ಇಪ್ಪರುವುದರಿಂದ, ಆ ಕುರಿತು ಆಕ್ಷೇಪಣೆ ಏನಾದರೂ ಇದ್ದಲ್ಲಿ ಸದ್ರಿ ದಿನ ಹಗಲು 10ಘಂಟೆಗೆ ಹಾಜರಾಗಿ ಸದ್ರಿ ಕೋರ್ಟಿಗೆ ಜ್ಞಾಪಿಸಲು ಮಾಡಬೇಕಾಗಿ ಈ ಮೂಲಕ ಸರ್ವ ಜನರಿಗೆ ತಿಳಿಸಲಾಗುತ್ತದೆ.

Udipi, 10-12-1941 } k. Vittal Nayak
Valid for Pattadar

ನೋಟೀಸು.

ಈ ಮೂಲಕ ಯಾವತ್ತಿ ಜನರಿಗೆ ತಿಳಿಯಪಡಿಸುವೆನೆಂದರೆ ಉಡುಪಿ ತಾಲೂಕು ಕೆಂಡಲೂರು ಗ್ರಾಮದ ಕುಂಬಳ ಕಟ್ಟುವಲ್ಲಿ ವಾಸ್ತವಿಸಿ ಕೊಂಡಿರುವ ಎಸ್ತುತ್ತು ವರ್ಷದ ನನ್ನ ತಂದೆ ಶ್ರೀ. ಕೆ. ಸುಬ್ಬಣ್ಣ ಶೆಟ್ಟಿಯು ಇತರರ ಜೊತೆಗೆ ಗೇರುಬೆಟ್ಟು ಆವರ ಪಿತ್ರಾರ್ಜಿತ ಆಸ್ತಿಗಳನ್ನು ಕರಾರು ಮಾಡಿಕೊಟ್ಟಿದ್ದಲ್ಲದೆ ಪಿತ್ರಾರ್ಜಿತ ಆಸ್ತಿಗಳಾಗಲಿ ಬೇರೆ ಯಾವುದೇ ಸ್ವಯಾರ್ಜಿತ ಆಸ್ತಿಗಳಾಗಲಿ ನಾನಿಲ್ಲಿಸಲಿ ಹಕ್ಕುದಾರನಾಗಲಿ ನನ್ನ ಒಪ್ಪಿಗೆ ಏನಾದರೂ ಸಾಲ ಕೊಟ್ಟರೆ ಯಾ ಆಸ್ತಿಯನ್ನು ಅವರಿಂದ ಕ್ರಯಕ್ಕೆ ಪಡಕೊಂಡಾಲಿ ಅವ್ಯವಹಾರವಾಗಿದ್ದಲ್ಲಿ ಅವುಗಳಿಗೆ ನಾನಾಗಲಿ ನನ್ನ ಸಂಬಂಧಿಕರಾಗಲಿ ಜವಾಬ್ದಾರರಲ್ಲವೆಂಬುದನ್ನು ಈ ಮೂಲಕ ಜಾಹೀರು ಪಡಿಸುತ್ತೇನೆ.

ಕೆ. ನಂಕಟ್ಟಿ ಕೃಷ್ಣಾಚಾರ್ ರುಜು.

9-12-1941

ಪ್ರೇಂಕಿನ್ಸ್‌ಟೈನ್‌ನಲ್ಲಿ ನಿಮ್ಮ ನೆತ್ತರು ತಣಿಸಿ, ಭೀತಿಗೊಳಿಸಿದ

ಫೋರಿಸ್ ಕಾರ್ಲಫ್ ನಟಿಸಿದ **ಕೊಲಂಬಿಯಾದವರ**

ದಿ ಮೇನ್ ದೇ ಕುಡ್ ನೋಟ್ ಹೇಂಗ್

ಚಿತ್ರ ನೋಡಲು ಬಂದಾಗ, ಗೆಳೆಯರನ್ನು - ಮರೆಯದಿರಿ!

ಮನೆಗೆ ಹಿಂತಿರುಗುವಾಗ ಭೀತಿಯಾದೀತು! ತಾ. 9-12-41 ರಿಂದ

ಉಡುಪಿ ತ್ರಿವಿಕ್ರಮಕೃಷ್ಣ ಥಿಯೇಟರ್ ಲಿಮಿಟೆಡಿನಲ್ಲಿ

ಬರುವ ಚಿತ್ರ:- ಶಂಕರ್ ಲಾಲ್, ಕಾಂತಿ ಲಾಲ್, ನೋತಿ ಲಾಲ್, ವಾಸಂತಿ, ಪಾಷುರಿ, ಕುರೇಶ, ಕೆ. ದಾತೆ, ಇವರೆಲ್ಲರ ಅಭಿನಯ.

ರಂಜಿಸಿ ಸಿದ ಕಲಾ ನೈಪುಣ್ಯ. ಯಾವುದಕ್ಕೂ ಕೊರತೆಯಿಲ್ಲದ ಚಿತ್ರ

ದೀಪಾವಳಿ.

"ಎವರೆಸ್ಟ್ ಗೋಲ್ಡ್" ಫ್ಯಾಶನ್ ಚೈನುಗಳು.

ಕಾಲೇಜು ವಿದ್ಯಾರ್ಥಿಯರು ಮೋಹಿಸಿ ಧರಿಸುವ ಚೈನುಗಳು

ಈ ಚೈನುಗಳು 5 ವರುಷ ಗ್ಯಾರಂಟಿ ಕೊಡಲ್ಪಟ್ಟಿವು ಎವರೆಸ್ಟ್ ಚಿನ್ನದಿಂದ ತಯಾರಿಸಲ್ಪಟ್ಟು ಆಮ್ಯತ್ತಮ ವಿವಿಧ ಜಾತಿಯ ಕಲ್ಲುಗಳಿಂದ ಪೋಣಿಸಲ್ಪಟ್ಟು ಎಲ್ಲರಿಗೂ ಮನಸಂತೋಷವಿಂತಹಮ ಇವನ್ನು ಧರಿಸಿದ ವಾತ್ಸದಿಂದ ಕೊನೆಗೆ ಕೇಳಿ ಬರುವುದು. ಹೆಚ್ಚಿನ ಸವರ ದೃಷ್ಟಿಯಿಂದ ಈ ಕೆಂಪಸಕರ ಕರೆಗೆಸೇ ಆರ್ಜಿಸಲ್ಪಡುವುದು.

24 ಇಂಚು ಉದ್ದದ ಚೈನಿಗೆ ರೂಪಾ 4 - ಪೋಸ್ಟೇಜು ಪ್ರತ್ಯೇಕ. ಇಂದೇ ಆರ್ಡರ್ಸನ್ನು ಕಳಿಸಿರಿ.

The Everest Agencies,

P. O. BASAVANGUDI, BANGALORE CITY

FOR SALE.

1. Four buildings with an extensive yard & a well. Very spacious with arrangements for an office. Situated by the side of Meiklejohn Road near the Hill Road, Mercara.

2 A shop building in the business centre of the town Mercara occupied by Messrs. Gidda Sait & Co., with a spacious go-down consisting of four rooms.

Apply for further particulars to—

Dr. T. V. Manikkam Pillai,
30 Mettu Street, **Chingleput**
Or
Sri. S. Ram Singh, Pensioner,
School Road, **Mercara.**

ಹೊಲಿಯುವ ನೂಲಿನ ಉಂಡೆಗಳು

ಈಗ ಹೊಸತಾಗಿ ಯಂತ್ರಗಳ ಮತ್ತು ನುರಿತ ಕೆಲಸಗಾರರ ಸಹಕಾರದಿಂದ ತಯಾರಿಸಲ್ಪಡುತ್ತವೆ. ಎಲ್ಲಾ ಕಡೆಗಳಲ್ಲೂ ಏಜಂಟರುಗಳು ಕೂಡಲೇ ಬೇಕಾಗಿದ್ದಾರೆ.

ತಯಾರಿಸುವ ಕಾರ್ಖಾನೆ:

ಬಹವರಬಂಧು ಹೊಸಾಯರಿಸ್,

(ಪ್ರೊಪ್ರೈಟರರು ಬಹವರಬಂಧು)

ಪ್ರಿಂಟಿಂಗ್ ಪ್ರೆಸ್, ಲಿಮಿಟೆಡ್.

ಮಂಗಳೂರು.

ಗನೋರಿಯಾ ಪರಮಾರೋಗ ಉಷ್ಣ ರೋಗದ ಮೇಲೆ

ಔಷಧ —

೭ ದಿವಸಗಳಲ್ಲಿ ಈ ರೋಗ ಗುಣ ಹೊಂದುವದು ಗ್ಯಾರಂಟೀ

ಶರೀರದಿಂದ ಕೀವು ಬರುತ್ತಿದ್ದರೆ, ಮೂತ್ರಕ್ಕೆ ಹೋದೀ ಡಾಗು ಕತ್ತುತ್ತಿದ್ದರೆ, ಶರೀರದಿಂದ ಬಾವು, ಶರೀರದ ತೊಗಲು ಹಿಂದಕ್ಕೆ ಸರಿಯದಿದ್ದರೆ, ಶರೀರದ ಸುತ್ತು ಘಾಯವಾಗಿದ್ದರೆ, ; ಜಟ್ಟೆ ಬಿದ್ದಿದ್ದರೆ, ಉಷ್ಣದಿಂದ ಚೀರು ಇಳಿದಿದ್ದರೆ, ಉಡುಚು ಆಗಿದ್ದರೆ, ಮೂಲವ್ಯಾಧಿ, ಭಗೆಂದ್ರ, ಗಂಡುಮಾಲಿ, ಕೈಕಾಲು ರೂಲಿ, ಅರ್ಧಾಂಗ ವಾಯು ನಡುನೋಯುವದು ಸ್ತ್ರೀಯರು ಬಿಳಿ ಕೆಂಪು ಸೆರಗು ಹೋಗುತ್ತಿದ್ದರೆ, ಹೊಲಿಕುಟು ಗರ್ಭಯಿಂದ ಗರ್ಭಕೋಶ ನಾಶಹೊಂದಿದ್ದರೆ, ಸರಿಯಾಗಿ ಭೇದಿಯಾಗದಿದ್ದರೆ, ಮೂತ್ರ ಉರಿಯುತ್ತಿದ್ದರೆ, ಈ ಎಲ್ಲಾ ಜೀನಗಳಿಗೆ ಈ ನಮ್ಮ ಔಷಧವು ಇದುವದು ನೊದಲ ದಿವಸ ಬೆಳಿಗ್ಗೆ ೧ ಗುಂಜಿ ಪ್ರಮಾಣ ಔಷಧ ಅರ್ಧತೊಲಿ ತುಪ್ಪದಲ್ಲಿ ತಕ್ಕೊಳ್ಳಬೇಕು. ಮೊದಲ ದಿವಸ ಮಾತ್ರ ವ ಮುಂಜಾನೆ ಸಂಜೆ ಎರಡು ಸಾರೆ ತಕ್ಕೊಳ್ಳಬೇಕು. ಮುಂದೆದರ ದಿವಸ ಬೆಳಿಗ್ಗೆ ಒಂದೇ ಸಾರಿ ೭ ದಿವಸ ಸೇವಿಸಬೇಕು. ಈ ಔಷಧನನ್ನೆ ಬೇಸಿಗೆಯಲ್ಲಿ ತುಪ್ಪದಲ್ಲಿ, ಥಂಡಿ ಮಳೆಗಾಲದಲ್ಲಿ ಜೇನು ತುಪ್ಪದಲ್ಲಿ ತಕ್ಕೊಳ್ಳಬೇಕು.

ಪಥ್ಯ: ಹುಣಿಪಾರ, ಕುಂಬಳಕಾಯಿ, ಒಳ್ಳೆಣ್ಣೆ ಬಿಡಬೇಕು.

ಬಾಟ್ಲಿ ೧ಕ್ಕೆ ೫ರೂ. ಪೋಸ್ಟ ಚಾರ್ಜ ೪ ಆಣೆ.

ಏಜೆಂಟರು:—ಗದಗ:-ಗದಗ ಫಾರ್ಮಸಿ, ಹುಬ್ಬಳ್ಳಿ:-ಹುಬ್ಬಳ್ಳಿ ಫಾರ್ಮಸಿ,ಬಾಗಲಕೋಟೆ:— ಬಾಗಲಕೋಟೆ ಫಾರ್ಮಸಿ, ಧಾರವಾಡ:—ಧಾರವಾಡ ಫಾರ್ಮಸಿ, ಡಾವಣಗೇರಿ:—ಡಾವಣಗೇರಿ ಪೈ(ಸ್).

ಮಾಲಕರ ವಿಳಾಸಕ್ಕೆ ಪತ್ರವ್ಯವಹಾರ ಮಾಡಬೇಕೆಂದು ವಿನಂತಿ.

ಮಾಲಕರ ವಿಳಾಸ: **ರೇವಣಸಿದ್ದಪ್ಪ ಡಾಲಪ್ಪ ಡಾವಣಗೇರಿ,**
ಆಯುರ್ವೇದ ಔಷಧಾಲಯ ಗದಗ.

ವಿನು ಮಾಡಲಿಕ್ಕಾಗಲೀ, ಏಜೆನ್ಸಿ ಪಡೆಯಲಿಕ್ಕಾಗಲೀ

ಯೋಗ್ಯ ಭದ್ರತೆಯುಳ್ಳ ಜೀವವಿಮಾ ಸಂಸ್ಥೆ

ಯಾವುದೆಂದು ನೀವು ಯೋಚಿಸುತ್ತಿರುವ್ರವಾದರೆ ನಮ್ಮೊಡನೆ ವಿಚಾರಿಸಿರಿ—

ಇ. ಎ. ಫ್ಯಾಸ್, ಬ್ರಾಂಚ್ ಸೆಕ್ರೆಟರಿ, ಮಂಗಳೂರು, ಪ ಕ.

ಇ. ಕೆ. ನಾರಾಯಣ ರಾವ್, ಸೀನಿಯರ್ ಇನ್ಸ್‌ಪೆಕ್ಟರ್, ಕಾರ್ಕಳ, ದ. ಕ

ಇ. ಕೆ. ಗಣಪಯ್ಯ ಶೆಟ್ಟಿ, ಡಿವಿಜನಲ್ ಒರ್ಗನೈಜರ್, ಕಟೀಲಾಡಿ, ಪ. ಕ.

ದಿ ಸ್ಯೂಗಾರ್ಡಿಯನ್ ಆಫ್ ಇಂಡಿಯಾ

ಲೈಫ್ ಇನ್ಶೂರೆನ್ಸ್ ಕೊ., ಲಿಮಿಟೆಡ್, ಮದ್ರಾಸು.

ಮಂಗಳೂರು ಬ್ರಾಂಚ್.

ಸ್ವದೇಶಿ ಔಷಧ ಭಂಡಾರ ಕುಂಜಾಲು,

— ಇವರ —

ಖಾತ್ರಿಯಾದ ಕೆಲವು ಔಷಧಗಳು

ಬಾಲಾಮೃತ (ಮಕ್ಕಳ ರಕ್ತವರ್ಧಕ)	0 12 0
ಬಾಲಕೀ ತೈಲ (ಮಕ್ಕಳಿಗೆ) ಸಣ್ಣದು.	0 6 0
" " ದೊಡ್ಡದು.	0 11 0
ಬ್ರಹ್ಮೀ ಹೇರ್ ಆಯಿಲ್ (ಚಿತ್ತರಂಜನ)	0 6 0
ರಿಂಗೋಬುಮ್ (ರಿಂಗ್‌ವರ್ಮಿಗೆ)	0 1 0
ಶಂಕರ ವಟಿ (ಸರ್ವ ಜ್ವರಗಳಿಗೆ)	0 8 0
ಸಿಯೂರಾಂಜನ (ಸಕಲ ನೇತ್ರರೋಗಗಳಿಗೆ)	0 4 0
ಧನ್ವಂತರಿ ಪಿಲ್ಸ್ (ವಾಯು ರೋಗಕ್ಕೆ) ೨ಕ್ಕೆ	0 7 0
" " " " ೬ಕ್ಕೆ	0 2 0

ಎಲ್ಲಾ ತರದ ಔಷಧಗಳೂ ಸಿಗುತ್ತವೆ ಕೆಟಲಾಗಿಗೆ ಬರೆಯಿರಿ.

Swadeshi Oushadhi Bhandar

KUNJAL P. O. S. I.

ಉದುಸಿಯ ಏಜೆಂಟರು.—

ಸರ್ವಧಾರತ ಪುಸ್ತಕ ಭಂಡಾರ, ಉಡುಪಿ.

THE ASIAN ASSURANCE CO. LTD.

EST. 1910

Progress as on 31—12—1940.

Paid up Capital	Rs.	4,89,750
Life Fund Exceed	,,	86,00,000
Assets Exceed	,,	1,00,00,000
Business in Force Exceed ...	,,	4,17,00,000

War or No war "Asian" has maintained its study Progress. Join its Agency Force

J. A. Putran,
Branch Manager,
MANGALORE.

ಈ ವಾರದ ಭವಿಷ್ಯ

(ಸೂಚನೆ ಪುಟದಿಂದ ಮುಂದುರಿಯುವದು).

ಮಿಥುನ—ಯಂತ್ರಕ್ಕೆ ಕೊನೆಹೊಂದಲಾರವು. ಸೈನ್ಯಕ್ಕೆರಸು ಕ್ಷಣ ಕಾಲವೂ ಪುರುಸೊತ್ತು ಕಾಣಿರಲು. ಬಿಡಲಾರದು. ದೇಹಾರೋಗ್ಯದ ಸಲವಾಗಿ ಹೆಚ್ಚಿನ ದೃಷ್ಟಿಯು ನ್ನಿಡುವುದೊಳ್ಳಿತು ತಾ. 12. 13. 16. 17 ಶ್ರೀಯಸ್ಸುರವಲ್ಲವು.

ಕರ್ಕಾಟಕ—ಈ ವಾರದಲ್ಲಿ ನಿಮ್ಮ ಅದೃಷ್ಟವು ಬಹುಮಟ್ಟಿಗೆ ಉತ್ತಮವಿರುವುದು ಯಾವ ಕಾರ್ಯದಲ್ಲೇ ಆಗಲಿ ಮುಂಬಡ್ಡಿಹೆಜ್ಜೆಯನ್ನು ಹಿಂತೆಗೆವ ಪ್ರಸಂಗವೂ ಬರಲಾರದು. ಗುಪ್ತ ಶತ್ರುಗಳು ಬಹಳವಾಗಿ ಉಪದ್ರವಿಸುವರಾದರೂ ಜನಬೆಂಬಲವು ಚೆನ್ನಾಗಿರುವುದರಿಂದ ನಿಮಗೇನೂ ಬಾಧೆಯಾಗದು. ಬೆಂಗಡೆಯಿಂದ ನಿಮ್ಮನ್ನು ಹಲವರು ಟೀಕಿಸುವರು. ಕೆಲವರೊಡನೆ ಮಾತುಮಾತಿನಿಂದಾಗಿ ಕಲಹವಾಗುವ ಸಂಭವವಿದೆ. ಗೃಹಸುಖವೂ ಆರ್ಥಿಕ ಸಂಪತ್ತೂ ಉತ್ತಮ ರೀತಿಯಲ್ಲಿರುವುದು. ತಾ. 14. 15. 18ರಲ್ಲಿ ದೇಹಾಲಸ್ಯ,ಚಿತ್ತವ್ಯಗಳು ಕಂಡುಬರಲಿವೆ.

ಧನು—ನಿಮ್ಮ ದೇಹಸುಖಪತಿಯಾದ ಗುರುವು ಪ್ರತಿಕೂಲನಿರುವುದರಿಂದಲೂ ಸುಖಸ್ಥಾನದಲ್ಲಿ ಅಂಗಾರಕನಿರುವುದರಿಂದಲೂ ನಿಮಗೆ ಸುಖವು ಬಹಳ ದುರ್ಲಭವೇ ಸರಿ. ಶತ್ರುಜನರಿಂದ ಪರಾಜಯ ಹೊಂದಲಿರುವಿರಿ. ಹಣದ ತೊಡಕಣಿಯು ವಿಶೇಷವಾಗುವದು. ಕ್ಲೇಶಜ್ವರ, ಉದರ ರೋಗಗಳಿಂದ ಸದಾ ಪೀಡಿಸಲ್ಪಡುವಿರಿ. ವೈಷಂಕ ಮತ್ತು ನಾನಸಿಕ ಶ್ರಮಜೀವಿಗಳಿಗೆ ಕಾಲಯೋಪನೆಯು ದುಸ್ತರವೆನಿಸುವುದು. ವ್ಯಾಪಾರೀ ಜನರಿಗೆ ಅಸಲಿಗೆ ತೊಂದರೆಯಾಗದು ತಾ. 11. 16. 17 ಈ ದಿನಗಳಲ್ಲಿ ರಾಜಭಯ, ದೇಹಾಲಸ್ಯ, ವ್ಯರ್ಥ ಖರ್ಚುಗಳೂ ಸಂಭವಿಸುವವು.

ಮಕರ—ನಿರುದ್ಯೋಗದಿಂದ ಕ್ಷಣ ಕಾಲವನ್ನೂ ಕೂಡ ನೀವು ಕಳೆಯಬೇಡಿರಿ. ನಿಮ್ಮ ಪ್ರಯತ್ನಕ್ಕಿಂತಲೂ ಅಧಿಕ ಫಲಲಾಭವಾಗುವದರಿಂದ ದಿನದಿಂದ ದಿನಕ್ಕೆ ಉತ್ಸಾಹವು ಅಭಿವೃದ್ಧಿವಾಗುವುದು. ವಿದ್ಯಾರ್ಥಿಗಳು ನಿರಾಯಾಸದಿಂದ ಗುರಿಯನ್ನು ಹೊಂದುವರು. ಗೃಹೋಪಕರಣಗಳು ಪರಿಪೂರ್ಣವಿರುವುದರಿಂದ ಸಾಂಸಾರಿಕ ತಾಪತ್ರಯಗಳಿಗವಕಾಶವಿಲ್ಲವು ಆದರೂ ಸ್ವಾಭಾವಿಕವಾಗಿ ಚಂಚಲವಾಗಿರತಕ್ಕ ಮಪಸ್ಸನ್ನು ಈಗ ವಿಶೇಷ ಚಾಂಚಲ್ಯವಾಗಲಿದೆ. ತಾ. 14ರಿಂದ17ರ ವರೆಗಿನ ದಿನಗಳು ಸರ್ವಾಭೀಷ್ಟ ಪ್ರದಗಳಾಗಿವೆ.

ಕುಂಭ:—ನಿನೆದ ಕಾರ್ಯಗಳನ್ನು ಕಾರ್ಯರೂಪಕ್ಕೆ ತರಲು ಬೇಕಾದ ಸಾಧನ ಸಾಮಗ್ರಿಗಳು ಅನಾಯಾಸದಿಂದ ದೊರೆಯುವವು. ಆರ್ಥಿಕ ಗಾದೆಯಿಂದ ಪಾರಾಗುವಿರಿ.ಶತ್ರುಗಳ ಬೆದರಿಕೆಗೆ ಸೊಪ್ಪು ಹಾಕಲು ನೀವು ಸಮರ್ಥರಿದುವಿರಿ. ಸಂಪಾದಿಸಿದ ದ್ರವ್ಯವನ್ನು ಸಾಳೆಗಾಗಿ ಸಂಗ್ರಹಿಸಿಡಲು ನಿಮ್ಮಿಂದಾಗದು. ಬಂಧುಗಳ ಸಲುವಾಗಿ ನಪ್ಪವನ್ನು ಹೊಂದುವಿರಿ. ದೇಹಾರೋಗ್ಯದ ಮಟ್ಟಿಗೆ ಹೆಚ್ಚಿನ ನಿಗಾವಹಿಸಿರಿ. ತಾ. 11. 16. 17. 18. ಈ ದಿನಗಳು ಇಷ್ಟಪ್ರದಗಳಾಗಿವೆ.

ಮೀನ:—ನಿಮ್ಮ ತಾತ್ಕಾಲಿಕ ಉಷ್ಣತ್ತೆಯು ಏರಿಕೆಗೆ ಸಾಲದುದರಿಂದ ಹೆಚ್ಚಿನ ರೊಡನೆ ಸಾಲವಾಡಬೇಕಾದ ಪ್ರಸಂಗ ಬರುವುದು. ಲೇವಾ ದೇವಿಕಂಬಳ ಕಲಹವಾಗಿ ನ್ಯಾಯಸ್ಥಾನದ ವರೆಗೂ ಹೋಗುವ ಪ್ರಸಕ್ತಿ ಬರಲಿದೆ. ಶತ್ರು ಜನರ ಪೀಡೆಯಿಂದ ಸಾರಾಗಲು ಕಷ್ಟ ಸಾಧ್ಯವಾದೀತು. ಯಾನಾದಿಗಳಲ್ಲಿ ಅವಘಡಕ್ಕೀಡಾಗುವ ಸಂಭವವಿರುವುದರಿಂದ ಪ್ರಯಾಣಕ್ಕಿಳಿಯುವದು ಚಿತವಲ್ಲ. ತಾ. 11. 12. 13. 18. ಈದಿನಗಳಲ್ಲಿ ಕೆಂಚಿವಿಷ್ಯ ಪ್ರಾಪ್ತಿಯೂಗುವುದು.



ನ್ಯಾಮುಖ್ಯ ಪ್ರಕಟಣೆ

ಅಮೃತಾಂಜನ

— ಡಿಪೋವಿನ ರಿಂಗ್‌ವರ್ಮ ನುಲಾನು —

ಇಸ್ಪರೆವರಿಗೂ ನಮ್ಮ
ವಿಲಿಯಮ್ಸ್ ಎಂಡ್ ಕೋ–ರವರ

ಈಜ ಮತ್ತು ಲಾಯೆಯ ಡ್ರೈಡ್‌ಮಾರ್ಕ್ಯುಳ್ಳ ರಿಂಗ್‌ವರ್ಮ್
ಮುಲಾಮು ಈ ಕೆಳಗಿನಂತೆ ವ್ಯತ್ಯಾಸಮಾಡಲಾಗಿದೆ

ಅಮೃತಾಂಜನ ಡಿಪೋವಿನ ಕ್ರಿವರ್ಜಾದ "ರೈಸಿಂಗ್ ಸನ್"

ಈ ಮೇಲಿನ ಪ್ರಮುಖ ವ್ಯತ್ಯಾಸದ ಸಂಗತಿಯನ್ನು ನಮ್ಮ ಗಿರಾಕಿದಾರ ರೆಲ್ಲರೂ ಗಮನಿಸಿಕೊಳ್ಳಬೇಕೆಂದು.

ನಮ್ಮ ಟ್ರೇಡ್‌ಮಾರ್ಕಿನ ಮೋಸ್ಟಿದಿಂದ ನಮ್ಮ ಔಷಧಿ ರಯೋರಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲೆಂಬ ಖಂಡಿತ ನಾವು ಈ ಮಾಲಿಕೆ ಭರವಸೆ ಕೊಡುತ್ತೇವೆ.

ಅಮೃತಾಂಜನ ಡಿಪೋ, ಬೊಂಬಾಯಿ, ಮದ್ರಾಸು, ಕಲ್ಕತ್ತ.

ಉಡುಪಿಗೆ ಬಂದಾಗ
ನಿಮಗೆ ಬೇಕಾಗುವ ಯಾವತ್ತೂ ಔಷಧದ ಬೆಳ್ಳ, ರಾಮ್ಸು, ಹಿತ್ತಾಳೆ, ಕಂಚು ಮೊದಲಾದ ವಿವಿಧ ಪಾತ್ರೆಗಳೂ ಸಾಮಾಗ್ರಿಗಳೂ ಒಂದೇ ಕಡೆಯಲ್ಲಿ ಸಿಗಬೇಕಾದರೆ
ರಥಬೀದಿಯ
ಕಲ್ಕಂಜೆ. ನ್ಯಾಸಾಚಾರ್ಯ ಇವರಲ್ಲಿಗೆ ಒನ್ನರಿ.
ಅಲ್ಲಿ ನೋಡಲೂ ಕೊಳ್ಳಲೂ ಒಳ್ಳೆಯ ಸಾಮಾನುಗಳಿವೆ.

The Moolky Bank, Ltd.,

MOOLKY. S.K.

ದಿ ಮೂಲ್ಕಿ ಬ್ಯಾಂಕ್, ಲಿಮಿಟೆಡ್,

ಮೂಲ್ಕಿ, ದ. ಕ.

(ಗ್ರಾಮಸ್ಥರ ಪ್ರಯೋಜನಾರ್ಥ, ಅವರ ನಡುವೆ 1929ರಲ್ಲಿ ಸ್ಥಾಪಿತವಾದದ್ದು)

ಕಡಮೆ ದರದ ಬಡ್ಡಿಯಿಂದ ಹಣವನ್ನು ಸಾಧ್ಯವಾದಷ್ಟು ಬೇಗ ಸಾಲಗಾರರಲ್ಲಿ ಒದಗುವಂತ ಮಾಡುವುದೇ ಗ್ರಾಮಸ್ಥರಿಗೆ ಉಪಕಾರಿಯಾಗುವುದರಿಂದ ಈ ತನ್ನ ಯತ್ನದಲ್ಲಿ ಎಲ್ಲರ ಸಹಕಾರ ಅಪೇಕ್ಷಿಸುವುದು.

M. R. Punja, President & Manager.

ಯಂ. ಆರ್. ಪುಂಜ, ಪ್ರಸಿಡೆಂಟ್ ಮತ್ತು ಮೇನೇಜರ್

ಉಡುಪಿಗೆ ಬಂದಾಗ ನಿಮಗೆ ಸುಖವಾದ ನಿವಾಸ ಸೌಲಭ್ಯ ಬೇಕೆಂದೇ?

— ಹಾಗಾದರೆ —

ಸುಖನಿವಾಸಕ್ಕೆ ಬನ್ನಿ

ರುಚಿರುಚಿಯಾದ ಭೋಜನ, ಬಿಸಿಬಿಸಿ ತಿಂಡಿ, ಸ್ನಾನ,
ವಿದ್ಯುದ್ದೀಪಾಲಂಕೃತ ಕೋಣೆ.
ಇನ್ನೆಲ್ಲವೂ ಕಡಿಮೆ ದರದಲ್ಲಿ ದೊರೆಯುವಲ್ಲಿ?

ಸುಖನಿವಾಸದಲ್ಲಿ ಮಾತ್ರ.

ಪ್ರಯಾಣಿಕರಿಗೆ ಅತ್ಯನುಕೂಲವಿದೆ ವಿದ್ಯಾರ್ಥಿಗಳಿಗೆ ಸಕಲ ಸೌಕರ್ಯ ವಿದೆ.
ಸುಖನಿವಾಸ.
ಉಡುಪಿ. : : : ಮಂಗಳೂರು.

ಕಡಿಮೆ ರುಚಿಯಾದ ವಿಶೇಷವಾದ ಸ್ಪೆಷಲ್ ತಿಂಡಿಗಳು!
ಬೇಸಿಗೆ ಕಾಲದ ತಂಪಾದ ಪಾನೀಯಗಳು!!
ಕಿವಿಗೆ ಇಂಪಾದ ಗಾಯನ! ವಿಶಾಲವಾದ ಆವರಣ!!!

ಸ್ವಸ್ತಿನಾರಾಯಣ ರೆಸ್ಟೋರೆಂಟ್

(ನಂ. 233.)

ಹಳೇ ಕಾನಕಾನ ಹಳ್ಳಿ ರಸ್ತೆ. ಲಾಲಬಾಗ್
ಹಿಂದಿನ ಗೇಟಿನ ಎಮರು
ಫಿಶ್ಶೇಶ್ವರಪುರಂ. **ಬೆಂಗಳೂರು ಸಿಟಿ.**
ಪ್ರೊಪ್ರೈಟರ್— **ಎ ಪಿ. ಶ್ರೀನಿವಾಸ ಕಾರಂತ.**

ಶ್ರೀ ಶೇಷಾಚಲ ಗ್ರಂಥಮಾಲೆ

ಎಲ್ಲ ಬಗೆಯ ವಿಷಯಗಳನ್ನು ಸಾಮೀಸ್ಯವೆಯಿಂದೊಡಗೂಡಿ ಪ್ರಕಟಿಸುವ ಗ್ರಂಥಮಾಲೆ

ಐತಿಹಾಸಿಕ, ಸಾಮಾಜಿಕ, ಪತ್ತೇದಾರಿ, ಪೌರಾಣಿಕ ಕಾದಂಬರಿಗಳು, ನಾಟಕಗಳು, ಜೀವಿತ್ರಗಳು, ಸಂಸ್ಕಾರೋಪಯೋಗಿ ಮತ್ತು ಧಾರ್ಮಿಕ ಗ್ರಂಥಗಳು ಸೊಗಸಾದ ಬಗೆಯಲ್ಲಿ ಪ್ರಕಟವಾಗಿ ಕೆನ್ನೆಯಿಗರ ಮನಸಿನ ಲಂಕಲಿಸಿವೆ: ಖಾಸೆಪಡ್ಡು ಸಲಹಿವ

ನಮ್ಮ ಕೆಲ ಅತ್ಯುತ್ತಮ ಪುಸ್ತಕಗಳು

ಯೋಗಾಯೋಗ	ಜೆ೧೯೦	ಭಯಂಕರ ಸೇಡು	ಜೆಡೆ೧೯೦
ಛೇಷಣ ಸಾಹಸ	ಜೆಜ೦೧೯೦	ಮೋಹಿನಿ	ಜೆಟಿ೧೯೦
ಕರಿನೀರು	ಜೆರ ೨೦೦	ಅನಾತ್ಮನಂದಿನಿ	ಜೆಟಿ೧೯೦
ಭಗವಾನ್‌ದಾಸ	ಜೆಟ ೧೦೦	ಸ್ಕೂಲ ಮಿಸ್ಟ್ರೆಸ್	ಜೆಟಿ೧೪೦
ಅವಿವಾಹಿತರ ಸಮಸ್ಯೆ	೧೦೦	ನೀರರಾಜ ವಿಜಯು	೦೧೫೦
ನನ್ನ ಗತಿ	೦೪೦	ಪಾಣಿಗ್ರಹಣ	೦೭೦

ಕೆಟಲಾಗಿಗೆ ಬರೆಯಿರಿ —
ಶೇಷಾಚಲ ಪ್ರೆಸ್ ಮತ್ತು ಗ್ರಂಥಮಾಲೆ ಅನಂತನನ್ಸ, ಹಾಜೇರಿ
ಉಡುಪಿ ವಿಜಂಟರು– **ನವಭಾರತ ಪುಸ್ತಕ ಭಂಡಾರ, ಉಡುಪಿ.**

ಬಾಲಾರ್ಕ ಮಧು

ಚಿಕ್ಕ ಮಕ್ಕಳ ಕತ್ತೆನರ್ಧಕ ಔಷಧಿ.

ಅಜೀರ್ಣಾದಿ ಮಕ್ಕಳ ಬ್ರಾಣವುಳಿಸಿದ ಮಕ್ಕಳ ಜೀರ್ಣ ಶಕ್ತಿಯನ್ನು ಹೆಚ್ಚಿಸುತ್ತದೆ ಗಾಢು ಕಟ್ಟು ಕೊಂಡಿರುವ ಎದೆಯ ಎಲುಬುಗಳ ಮಧ್ಯ ಮಾಂಸ ಬೆಳೆದು ಪುಷ್ಟಿ, ಬಲ, ಆರೋಗ್ಯ ತೂಕ ಹೆಚ್ಚುಸ್ತದು. ಇದು ನುಮಾರಾಗಿನೆ ಆರೆ ಚಟ್ಟರಾದ ನಿಮ್ಮ ಮಕ್ಕಳು ತರುಗಿ ನಿಮ್ಮ ಕೈ ಸೇರುವುದು ಸೀಸೆಂಕ್ಕೆ ೧೫ ಆಣೆ; ಟ ಬಿ. ೯ ಆಣೆ.

ಎಮ್. ವಿ. ಪ್ರಸಾದಿಕ ಔಷಧಾಲಯ ಶಿವಮೊಗ್ಗ
ಉಡುಪಿ ಸ್ಟಾಕಿಸ್ಟರು— **ನವಭಾರತ ಬುಕ್ ಡಿಪೋ, ಉಡುಪಿ**

ಸ್ಥಾಪಕ **ಕ್ರೌನ ರಬ್ಬರ್** 1929

18 ಬಲ್ಮಠ ರಸ್ತೆ, ಮಂಗಳೂರು



ಯಾವತ್ತೂ ಆಫೀಸುಗಳಿಗೂ ವ್ಯಾಪಾರಸ್ಥರಿಗೂ ಅಗತ್ಯವಾದ ಎಲ್ಲಾ ತರದ ರಬ್ಬರ್ ಹೊಹರುಗಳೂ ಸೈನ್ ಬೋರ್ಡ್ ಜಾಹಿರಾತಿನ ಬೇಜು, ಮಾನೋಗ್ರಾಮ್ ಸೀಲು ಇತ್ಯಾದಿಗಳು ಶೀಘ್ರವಾಗಿ ಮಾಡಿಕೊಡಲ್ಪಡುವವು.

Crown Rubber Stamp Co 18 Balmat Road, MANGALORE
Approved for by the Govt Mysore
Certificate by the Agent of the Govt of India in Ceylon

ನವಜೀವಾಮೃತ ಎಂಬ ಸೂತಿಕಾ ಸೌಖ್ಯ ನಿಧಿ



(ಇದು ರಾಜಸ್ಥರು ಮಾಡಲ್ಪಟ್ಟ ಔಷಧಿ)

ಬಾಣಂತಿಯರ ಸಲುವಾಗಿಯೇ ದೇಶ ಮತ್ತು ಪ್ರಕೃತದ ದೀರ್ಘ ಸ್ಥಿತಿಯನ್ನು ಸಿಕ್ಕೆಸಿ ಉಯುರ್ವೇದದ ಆಧಾರದಿಂದ ತಯಾರಿಸಲ್ಪಟ್ಟ **ಆನೋಘವಾದ ಮಧುರ ದ್ರವ ರಸಾಯನ** ಅಲ್ಪ ಮೌಲ್ಯದಿಂದ ಬಡವರಿಗೂ, ಭಾಗ್ಯವಂತರಿಗೆಲ್ಲರಿಗೂ ಸುಲಭವಾಗಿರುವುದು.

೦ ದಿವಸದಿಂದ ಬಾಲ್ಯಗಳು ಹೆಚ್ಚು ಕಡಿಮೆಯಾದವರಿಗೆ ಬರುವುದು. ಆದರೆ ಕೇವಲ ಆರೋಗ್ಯಕ್ಕೇ ಒಂದು ಬಾರಿಯಾದರೂ ಸಾಕಾಗುವುದು ವಿಶೇಷ ಮಾಡಿದ ಬಳಿಕ ಈ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಎಂ ವಿ. ಕಾಶ್ಯಪ್, ಆಯುರ್ವೇದ ಭೂಷಣ, ಸಂಸ್ಥೆ ಕೊಡಿಯಾಲಬೈಲು, ಪದ

EDITED BY K. K. SHETTY, PRINTED & PUBLISHED BY K. H. SHETTY AT THE NAVAYUGA PRESS, UDIPI.

Regd. No. M. 3618

Estd. 1921 ಸ್ಥಾಪಿತ.

ಸಹಕಾರಿಗಳಿಗೂ ಪರ್ಸ
ದಾರರಿಗೂ ಬೇಕಾಗುವ
ತರ ತರದ ಪರ್ಸ್,
ಉಳಿಕೆ ಪುಸ್ತಕಗಳು
ಲೆಕ್ಕ ಪುಸ್ತಕಗಳೂ
ಸುಲಭ ದರದ್ಲಲಿ
ನಿರ್ಮಾಣಕಾಗಿ ಮಾಡಿ
ಕೊಡಲ್ಪಡುತ್ತವೆ
ನವಯುಗ ಪ್ರೆಸ್,
ಉಡುಪಿ

ಲೈಬ್ರೆರಿ ಪುಸ್ತಕಗಳು
ನಮೂನೆವಾರು
ಔಷಧಗಳು
ಜಾಲಾ ಸಾಮಗ್ರಿಗಳು
ದೊರೆಯುತ್ತವೆ.
ಶಂಕರಿಕ
ಪುಸ್ತಕ ಭಂಡಾರ,
ಉಡುಪಿ.

ಸಂಪುಟ ೨೧
Vol. 21

ಸಂಪಾದಕರು—ಶ್ರೀ ಎ. ಬಿ ಶೆಟ್ಟರು, ಎಂ ಎಲ್ ಎ

NAVAYUGA WEEKLY

18-12-1941

ಸಂಚಿಕೆ ೧೬
No. 16

FIGURES JUSTIFY YOUR CONFIDENCE
IN THE STABILITY AND SOUNDNESS OF

[illegible]

INSURANCE COMPANY, LTD.,
NEW DELHI.

[illegible]

FOR BETTER, BRIGHT & BRILLIANT FUTURE
JOIN AGENCY FORCE AND WRITE FOR FULL
PARTICULARS IN CONFIDENCE TO:-

[illegible]

BRANCH SECRETARY,
MANGALORE.

Money to Invest

Loans are granted on the Security of Gold, Produce, Insurance Policies, Immovable Properties, etc., On the easiest possible terms. Please apply to:-

The Vijaya Bank, Ltd,

Kadri-Mangalore, Hampankatta-Mangalore, Karkal, Udipi, Kaup and **Coondapoor,**

—ಮಕ್ಕಳನ್ನು ಹಡೆಯುವದು ಸಾಕು—

ಆಶಕ್ತ ಸ್ತ್ರೀಯರಿಗಿ **ಬರ್ಥ ಕಂಟ್ರೋಲ** ರೋಗಗ್ರಹಸ್ಥ ಪೆಣ್ಣು ಮಕ್ಕಳಿಗೆ

ಏಳು ದಿವಸದ ಈ ಮಾತ್ರೆಗಳನ್ನು ಸೇವನ ಮಾಡಿದರೆ ಮುಂದೆ ಖಂಡಿತವಾಗಿ ಮಕ್ಕಳಾಗುವದಿಲ್ಲ. ಸ್ತ್ರೀಯರು ಪ್ರತಿತಿಂಗಳ ಸರಿಯಾಗಿ ಮಟ್ಟುಗುತ್ತಾರೆ. ಅಲ್ಲದೆ ಸ್ತ್ರೀಯರಿ ವಿಶೇಷಗ, ಪ್ರದರರೋಗ, ಹೊಲಿಕುಟ್ಟು ಗುಣವಾಗಿ ಸ್ತ್ರೀಯು ಗರ್ಭಿಣಿ ಯಾಗುವದಿಲ್ಲ ಈ ಔಷಧವನ್ನು ಸೇವಿಸುವ ಕ್ರಮ: ಪ್ರತಿದಿವಸ ಮುಂಜಾನೆ ಗಂಗುಳಿಗೆ, ಮಧ್ಯಾಹ್ನಕ್ಕೆ ೧ಗುಳಿಗೆ, ಸಂಜೆಗೆ ೧ಗುಳಿಗೆಯಂತೆ ಊಟದ ಮೊದಲು ತಕ್ಕೊಳ್ಳ ಬೇಕು. ಏಳು ದಿವಸ ಈ ಔಷಧವನ್ನು ಬಿಸಿನೀರಿನಲ್ಲಿ ಸೇವಿಸಬೇಕು.

ಕಿಮ್ಮತ್ತು:—ಹರಪೀಸಲ್ಲೆ ಬಿಡಬೇಕು. ೭ ದಿವಸ ಸಂಪೂರ್ಣ ಔಷಧದ ಕಿಮ್ಮತ್ತು ರೂಪಾಯಿ. ೨—೦—೦ ಪೋಸ್ಟ ಚಾರ್ಜು ೪ ಆಣೆ.

ಮಾಲಕರು:—ಹಾಲಪ್ಪ ಭೀರಪ್ಪಾ ದಾವಣಗೇರಿ
ಆಯುರ್ವೇದ ಔಷಧಾಲಯ, ಗದಗ-ಬಿಟಿ.

ನಮ್ಮ ಏಜಂಟರಲ್ಲಿ ಔಷಧಗಳು ಸಿಕ್ಕುತ್ತವೆ.

ಹುಬ್ಬಳ್ಳಿ ಫಾರ್ಮಸಿ,—ಹುಬ್ಬಳ್ಳಿ, ಗದಗ, ಬಾಗಲಕೋಟೆ ಭಾರವಾಡ, ವಿಜಾಪುರ—ದಾನಪ್ಪ ಸಿದ್ದಲಿಂಗಪ್ಪ ಭಾರವಾಡದ, ವಿಜಾಪುರ. ಬಳ್ಳಾರಿಯಲ್ಲಿ:—ಶುಂಬಳಗಾಡಿ ಸ್ಟೋರ್ಸ. ದಾವಣಗೇರಿ:—ದಾವಣಗೇರಿ ಪ್ರೆಸ್ಸ. ಬಳ್ಳಾರಿ:—ಎಚ್. ನಿರುಪಾಕ್ಷಪ್ಪ ವಾರ್ಚಂಡ, ಬಳ್ಳಾರಿ. ಗೋಕಾಕ:—ಸಂಗಪ್ಪ ಶಿವಲಿಂಗಪ್ಪ ಆಂದಾಣಿ.

THE PANGAL NAYAK BANK LTD.

ದಿ ಪಾಂಗಾಳ ನಾಯಕ್ ಬೇಂಕ್ ಲಿಮಿಟೆಡ್.

(1920ನೇ ಇಸವಿಯಲ್ಲಿ ಸ್ಥಾಪಿಸಲ್ಪಟ್ಟಿತು.)

ಮುಖ್ಯಕಾರ್ಯಾಲಯ: **ಕೋಟ್ಯ ಬಳಿ.** ಉಡುಪಿ, ದ. ಕನ್ನಡ.

ಶಾಖೆಗಳು: ಉಡುಪಿ, ಮಂಗಳೂರು, ಕಟಪಾಡಿ, ಕಾರ್ಕಳ ಮತ್ತು ಕಿನ್ನಿಗೋಳಿ.

ತೆತ್ತ ಮೂಲಧನ: 1,82,100. ಕ್ಷೇಮ ನಿಧಿಗಳು: 1,92,000.

ಚಿನ್ನಾಭರಣಗಳ ಮೇಲಾಧಿಕ್ಕೆ ಅನುಕೂಲವಾಗಿ ಬಡ್ಡಿಯಲ್ಲಿ ಸಾಲ ಕೊಡಲಾಗುವದು. ಸರಕಾರ, ಸಮುದಾಯಕರವಾದ ವ್ಯಾಪಾರದ ಬೀಲ್ಲುಹುಂಡಿ ಇತ್ಯಾದಿಗಳ ಭದ್ರತೆಯ ಮೇಲೆ ಸೂಕ್ತವಾದಷ್ಟು ಚಿಕ್ಕ ಮತ್ತು ದೊಡ್ಡ ಸಾಲಗಳು ಮತ್ತು ಓವರ್ ಡ್ರಾಫ್ಟ್‌ಗಳು ಸಹ ಕೊಡಲ್ಪಡುತ್ತವೆ. ದೀರ್ಘ ಮತ್ತು ಅಲ್ಪ ಅವಧಿಯ ಸಾಮಿ ಠೇವಣಾತಿಗಳು ಪ್ರೀತಿಯಿಂದ ಇವರಿಗೂ ಏಳಿಗೆ ಕಂಡು ಕೆಲವಾಗಿ ಬ್ಯಾಂಕಿನಲ್ಲಿ ಆಂಗೀಕರಿಸಲ್ಪಡುತ್ತವೆ.

ಬೇಂಕಿನ ಅತ್ಯಾಧುನಿಕ ವಿಧಿವಿಧಾನಗಳ ಪಟ್ಟಿಯನ್ನು ಕೇಳಿದಲ್ಲಿ ಕಳುಹಿಸಲ್ಪಡುತ್ತವೆ.

ಹೆಚ್ಚಿನ ಮಾಹಿತಿಗೆ ದಯವಿಟ್ಟು ನೋಟ್ಸಾ ಪತ್ರದ್ವಾರಾ ವಿಚಾರಿಸಿರಿ.

ಈ ವಾರದ ಭವಿಷ್ಯ

ತಾರೀಕು ೧೪—೧೨—೪೧ರಿಂದ ತಾರೀಕು ೨೫—೧೨—೪೧ರ ವರೆಗೆ

ಮೇಷ—ನಿಮ್ಮ ಭಾಗ್ಯಪತಿಯಾದ ಬುಧನ ಸ್ಥಿತಿಯು ಧನಸ್ಥಾನವನ್ನಾಶ್ರೈಸಿರುವುದರಿಂದ ಇಂತಹ ಕಷ್ಟದ ಕಾಲದಲ್ಲೂ ನೀವು ಜೀವನಿಸಿಕೊಂಡಿರುವಿರಿ. ಸಿಕ್ಕೋಷ್ಣ ಸಂಬಂಧವಾದ ಕಾಹಿಲೆಯು ನಿಮ್ಮನ್ನು ಸದಾ ಕಾಡುತ್ತಿರುವುದರಿಂದ ನಿದ್ರಾಭಾವ, ದುಃಸ್ವಪ್ನಾದಿಗಳು ಯಾವಾಗಲೂ ಕಂಡುಬರುವವು. ಸ್ತ್ರೀಜನತೆಯಿಂದ ಹೆಚ್ಚಾಗಿ ಕಲಹವಾದೀತು. ಆಗಾಗ ಸಂಭವಿಸುವ ಪ್ರವಾಸ, ಶತ್ರುಗಳ ಕಾಟ, ಪ್ರಿಯಜನರ ವಿಯೋಗಗಳಿಂದ ವ್ಯಸನಗಳಾದ ನಿಮಗೆ ತಾ. 20ರಿಂದ 24ರ ವರೆಗೂ ಸನ್ಮಿತ್ರರ ಬೆಂಬಲದಿಂದ ಇಷ್ಟ ಪ್ರಾಪ್ತಿ, ಲಾಭ, ಸುಖಗಳಿವೆ.

ವೃಷಭ—ಈ ವಾರದಲ್ಲಿ ನಿಮ್ಮ ಇಷ್ಟ ಮನಸ್ಕಾನಕ್ಕೆ ರವಿಯು ಪ್ರಯೋಜನವುದರಿಂದ ನಿಮ್ಮ ಕಷ್ಟವು ಕೊಂಚ ಹೆಚ್ಚ ಬಹುದು. ಸ್ತ್ರೀ ಪುತ್ರರು ನಿಮ್ಮ ಆಜ್ಞಾಧಾರಿಗಳಾಗಿರದೆ ಸ್ವೇಚ್ಛೆಯಿಂದ ವರ್ತಿಸುವರು. ಅನಿರೀಕ್ಷಿತವಾಗಿ ಜನರ್ಥವೊದಗಲಿದೆ. ಬಹುವಿಧದಿಂದ ನೀವು ದುಡಿಯುವಿರಾದರೂ ದಿನಾರ್ಯದಲ್ಲಿ ಕಿಕ್ಕಿಸನ್ನವಾಗುವಿರಿ. ಕೈಗೊಂಡ ಕಾರ್ಯಗಳಲ್ಲಿ ಹೆಚ್ಚಿನವು ಇಷ್ಟದಂತೆ ಪೂರ್ತಿಸುವವು. ವಾರಾದಿಯ ೬ ದಿನಗಳು ಮಾತ್ರ ಸ್ಥಿತಿ ಕೂಲಕಾರಿಗಳಿವೆ.

ಮಿಥುನ—ಸಿಟ್ಟಿಂತವಾಗಿದ್ದ ನೀವು ಈ ವಾರದಲ್ಲಿ ತನುಪೀಡ, ಮನೋರೋಗಗಳಿಗೀಡಾಗಲಿರುವಿರಿ. ಧನಾಗಮನವು ಕಡಿಮೆಯಾಗುವದಲ್ಲದೆ ವೈದ್ಯ ಖರ್ಚುಗಳು ಹೆಚ್ಚಲಿವೆ. ದೇಶಾಂತರ ಪ್ರಯಾಣದ ಯೋಗವೂ ಕೂಡ ಇವೆ. ಈ ಮಧ್ಯ ಧನ ಸಂಪತ್ತನ್ನು ಸ್ತ್ರೀಯು ಸ್ನೇಹಲಾಭವಾಗುವುದರಿಂದ ಹೆಚ್ಚಿನ ಔಷಧ್ಯಗಳಿಗೀಡಾಗಲಾರಿರಿ. ಮಂಗಳೋತ್ಸವ ಪರಿಣಾಮವಾಗಿ ತೆಲವರೊಡನೆ ನಿಷ್ಕಾರಣ ಕಲಹಗಳು ಸಂಭವಿಸಲಿವೆಯಾನಕಾರಣ ತಾ. 21ರಿಂದ 27ರ ವರೆಗೂ ಬಹಿರ್ಯಾಣಗಳೂ ಕಷ್ಟಕರವಾಗಿರಿ.

ಕರ್ಕಾಟಕ—ಕಗ್ಗಂಟಿಯಲ್ಲಿ ಪಜ್ಜೆಯನ್ನು ಮುಂದಿಡಲಾರದೆ ಒಳಗುತ್ತಿದ್ದ ನಿಮಗೆ ಈ ವಾರದಲ್ಲಿ ಸ್ವೇಚ್ಛೀನಟಿಕೆಯೊಂದು ದೊರೆತಂತಾಗಿದೆ. ಆದ ಕಾರಣ ನಿಮ್ಮ ಗೃಹಕಾರ್ಯಗಳೆಲ್ಲವೂ ಪರಿಪೂರ್ಣವಾಗುವವು. ಮಾತೃವಲ್ಲ, ರೋಗ ಶೋಕಗಳಿಂದಲೂ ಮುಕ್ತರಾಗುವಿರಿ. ಉದ್ಯೋಗವಿಲ್ಲದೆ ಅಲೆಯುತ್ತಿದ್ದವರಿಗೂ ಒಂದು ಅಲಂಬನ ದೊರೆಯುವದು. ಆದರೆ ಸ್ತ್ರೀವರ್ಗವು ನಿಮ್ಮ ಮೇಲೆ ಮುನಿದಿರುವುದರಿಂದ ನಿಮ್ಮ ಮೇಲೆ ಎಂತಹ ಅಸಹ್ಯ ಕ್ರಿಯೆಯನ್ನು ಮಾಡಲೂ ಹೇಸಲಾರರು. ಆದಕಾರಣ ಅವರಿಂದ ದೂರಿರುವದು ಎಷ್ಟೋ ಲೇಸು. ತಾ. 23, 24, 25 ವಿಶೇಷತಃ ವ್ಯಾಪಾರಿಗಳಿಗೂ ಸೇವಕ ಜನರಿಗೂ ಹಾನಿಕರವಿವೆ.

ಸಿಂಹ—ದುರ್ದೈವವೆ ಮೂರ್ತಿಯನ್ನು ತ್ಯಾಗಿ ಸದ್ಯ ನಿಮ್ಮನ್ನು ಸೀಡಿಸುತ್ತಿರುವ ದೆಂದೂ ಹೇಳಲಿಕ್ಕಾಗದು. ವ್ಯಾಧಿ ಕೇಶ್ಚಂಶ್ಯ(ತಾ. 21ರಿಂದ 24ರ ವರೆಗಿನ ಜಂಪ್ರಸನ್ನು ಬಿಟ್ಟು) ಎಲ್ಲಾ ಗೃಹದಾ ನಿಮ್ಮ ಮೇಲೆ ಮುನಿದಿರುವರೆಂದರೆ ನಿಮ್ಮ ಪರಿಸ್ಥಿತಿಯು ಜಿದಿಸ್ಟು ಚಿಂತಾಪಾಯಿಯಾಗಿರಲಾರದು. ಶತ್ರು ಜನರ ಪೀಡಾ ನಪೇಕ್ಷನೆಗಳನ್ನು ನಿರ್ವೀರ್ಯನಂತೆ ಸಹಿಸಿಕೊಂಡೀರಬೇಕಾಗುವದು. ಹೊಸದ ಅಡಜಿಯಿಂದಾಗಿ ಹೆರವರಿಗೆ ಮುಖತೋರಲು ನಾಚುವ ಪ್ರಸಂಗವೊದಗೀತು. ಆದಕಾರಣ ಈ ದೋಷ ನಿವೃತ್ತಿಗಾಗಿ ನವಗ್ರಹ ಪ್ರಾರ್ಥನೆಯನ್ನು ಮಾಡುವದೆತ್ತಮ. ತಾ. 21ರಿಂದ 1 ದಿನಗಳು ಕಂಟಿವಿಜ್ಞಾಪ್ಯವಾಗಿವೆ.

ಕನ್ಯಾ—ದೈವ, ಧನ, ಸುಖ, ಭಾಗ್ಯ ಕರ್ಮಪತಿಗಳು ಈ ವಾರದಲ್ಲಿ ನಿಮ್ಮ ಮೇಲೆ ಪ್ರಸನ್ನರಾಗಿರುವುದರಿಂದ ಪೀಡಾರೋಗ್ಯ ಮತ್ತು ಐರ್ಥಿಕ ಸಂಪತ್ತಿಗೆ ಕೊರತೆಯಿರದು. ನೂಡಿದ ಕೆಲಸವು ಜಯಸ್ಥಿಯಾಗುವುದರಿಂದ ಪೂಜಾಮುಕ್ಕರಾಗುವಿರಿ. ಉದರ ಸಂಬಂಧಿ ರೋಗವು ಮಳ್ಳೆ ಪೀಡಿಸುವ ಸಂಭವವಿದೆ. ಮನೆಯಾಳೆಯೂ ಕೂಡ ಮನಸ್ತಿಯುವ ಸಂಭವ ಬಂದೊತ್ತು ತಾ. 1ರಿಂದ 2ರ ವರೆಗೂ ಸ್ವಲ್ಪ ಸಮಾಧಾನದಿಂದಿರಿ.

ತುಲಾ—ನಿರ್ದೋಷಜೀವಿಗಳಿಗೆ ದಿನ ಯಾಪನೆಯು ಕೊಂಚ ಕಷ್ಟವಾದೀತಾ ನೆರೂ ಸಾಹಸಸಾಧ್ಯ ಕಾರ್ಯಗಳಲ್ಲಿ ಫಲಪ್ರಸ್ಥಾಣ ಲಭಿಸಲಿವೆ. ಬಂಧರರ ಹಂಗಿಲ್ಲದೆ ಯಾವ ಕಾರ್ಯವನ್ನು ಕೂಡ ಧೈರ್ಯದಿಂದ ಕೈಗೊಳ್ಳಬಲ್ಲಿರಿ.

BHUVANENDRA PRODUCTS LTD.,

Head Office and Factory:
Katapadi, S. Kanara

Depots:
1. Maharatha Galli, Hubli.
2. 57 Big street, Triplicane Madras.

"BHUVANENDRA"

Danthadavan Choorna

Economical in use. Cheapest in value. Genuine in quality and choiced by all. Antiseptic, astringent, aromatic. Usfeul in Pyorrhoea, Alveolaris. Removes tartar. Prevents caries of the teeth.

ಉಡುಪಿ ಸ್ಟಾಕಿಸ್ಟರು:— 1) ಡಾಕ್ಟರ್ ನಾಯಕ್ಸ್ ಕಪ್ಲಿಂಗ್ ರೂಮ್ಸ್ ಎಂಡ್ ಫಾರ್ಮಸಿ, (2) ಶ್ರೀ. ಆರ್. ಎಸ್. ಶೆಣೈ ಗಳವರು (3) ಡಾಕ್ಟರ್ ಪಿ. ಬಿ. ಆಚಾರ್ಯ ಫಾರ್ಮಸಿ, ಡಾಕ್ಟರ್ ಕೆ. ಕೇಶವಗಿರಿ ಹೈ L. I. M.

ನಿಮ್ಮ ಸೌಂದರ್ಯಕ್ಕೂ ಆರೋಗ್ಯಕ್ಕೂ
ಹಲ್ಲುಗಳೇ ಮುಖ್ಯ ಕಾರಣ
"ಭುವನೇಂದ್ರ"

ದಂತದಾವನ ಚೂರ್ಣ

ಹಲ್ಲಿನ ಕ್ರಿಮಿ, ಹಲ್ಲು ನೋವು, ಹಲ್ಲುಗಳಿಂದ ರಕ್ತ ಬರುವುದು, ಹಲ್ಲು ಅಲ್ಲಾಡುವುದು ಮುಂತಾದ ದೋಷಗಳನ್ನು ನಿವಾರಿಸುವುದು.

ಭುವನೇಂದ್ರ ಪ್ರೊಡಕ್ಟ್ಸ್ ಲಿಮಿಟೆಡ್,

ಕಟಪಾಡಿ, ದ ಕನ್ನಡ

ಲೋಕದ ಎಲ್ಲಾ ಪ್ರಬಲ ರಾಷ್ಟ್ರಗಳೂ ಹೋರಾಟಕ್ಕಿಳಿದವು !

ಅಮೇರಿಕದ ಮೇಲೆ ಜರ್ಮನಿಯು ಯುದ್ಧ ಸಾರಿತು.

ಜಪಾನು ಆಂಗ್ಲೋ-ಅಮೇರಿಕಗಳ ಮೇಲೆ ಯುದ್ಧ ಹೂಡಿದುದನ್ನು ಅನುಸರಿಸಿ ಜರ್ಮನಿ, ಇಟಲಿಗಳೂ ಅಮೇರಿಕದ ಮೇಲೆ ಸಮರ ಸಾರಿವೆ ಎಂಬ ವಾರ್ತೆಯ ಧ್ವೇಯವು ಕೆಲವು ಕ್ಷಣಕಾಲ ಗೊಂದಲವನ್ನುಂಟು ಮಾಡಿತು. ಆದರೆ ಸಮ್ಮಿಗಿರುವುದಲ್ಲವೆಂದೂ ಆಕ್ಸಿಸ್ ರಾಷ್ಟ್ರಗಳು ಈ ಯುದ್ಧದಲ್ಲಿ ಗೆದ್ದುಬರುವಂತೆ ನೋಡುವದೇ ಅವೆಲ್ಲವುಗಳ ಗುರಿಯಾಗಿದೆ ಎಂದೂ ಸ್ಪಷ್ಟಪಡಿಸಲಾಗಿದೆ. ಈ ತನಕ ಹೋರಾಟವನ್ನು ನಡೆಸುತ್ತಿದ್ದ ಚೀನವು ಈಗ ಜಪಾನಿನ ಫ್ಯೇಲೂ ಜರ್ಮನಿಯ ಮೇಲೂ ಯುದ್ಧ ಸಾರಿದೆ. ಜರ್ಮನಿಯು ಅದನ್ನು ಧಿಕ್ಕರಿಸಿ ಬಿಟ್ಟಿದೆ ಇಂತೂ ಈಗ ಲೋಕದ ಎಲ್ಲಾ ರಾಷ್ಟ್ರಗಳೂ ಯುದ್ಧ ಪ್ರವೃತ್ತವಾದಂತಾಯಿತು. ಅಮೇರಿಕಾ, ಇಂಗ್ಲೆಂಡು, ಚೀನಾ, ರಶ್ಯಾ ಒಂದು ಕಡೆ; ಜರ್ಮನಿ, ಇಟಲಿ, ಜಪಾನು ಮತ್ತೊಂದು ಕಡೆ ನಿಂತು ಹೋರಾಡುತ್ತಿವೆ. ಸ್ವತಃ ತಟಸ್ಥವಾಗಿರುವಂತೆ ತೋರುವ ರಾಷ್ಟ್ರಗಳೆಂದರೆ ಟರ್ಕಿ ಮತ್ತು ಸ್ಪೈನು ಮಾತ್ರ. ಆದರೂ ಯುದ್ಧ ಕ್ಷೇತ್ರಕ್ಕೆಳೆಯಲ್ಪಡುವ ಸಂಭವವಿದೆ. ಟರ್ಕಿಯ ಪರಿಸ್ಥಿತಿಯಂತೆ ಸ್ಪೈನಿನಲ್ಲಿ ಜರ್ಮನಿಯ ಸಾಮಾನುಗಳು ತರ್ಮ ಕೈಸೇರಿದ ಮೇಲೆ ಮಾತ್ರವೇ ತಾವು ಸಮಾಗ್ರಿಗಳನ್ನು ಕಳುಹಬೇಕೆಂಬ ನಿಧ್ಯಾರವಾಗಿದೆ. ಈ ಘೋಷಣೆಯು ಮುಂದುನರಿದಲ್ಲಿ ಜರ್ಮನಿಯು ಆದರ ಮೇಲೆ ನೆಗೆಯುವ ಸಂಭವನಿದೆ. ಈಗ ರ್ಯಾದಲ್ಲಿ ಹಿಟ್ಲೆರ್ಯುತ್ತಿರುವ ನಾಜೀ ಸೇನೆಯು ಭಳಿಸಾಳುವ ಕೊರೈಯಾಗಿ ಟರ್ಕಿಯ ಕಡೆಗೆ ಕಣ್ಣಿಮವದು ಅನಂಭವನೀಯ ವಲ್ಲ. ಸ್ಪೈನು ಆದಿಯಿಂದಲೂ ಫೇಸಿಸ್ಟ್ ರಾಷ್ಟ್ರಗಳ ನರಣಿಯಲ್ಲಿ ಸೇರಿದ್ದೋಗಿರುವ ರಾಷ್ಟ್ರವಾಗಿರುವಂದ ಜಿಬ್ರಾಲ್ಟರನ್ನು ಅದ ಪಡಿಸಿಕೊಳ್ಳಲು ಅದೂ ಸಮಯ ನಿರೀಕ್ಷೆಯಲ್ಲಿದೆಯೆಂದೂ ಹೇಳಬಹುದು. ಅಂತೂ ಯುದ್ಧವೀಗ ಇಡೀ ಭೂಮಂಡಲವನ್ನು ನಲಿಸಿಂತಾಯಿತು. ರಶ್ಯಾ, ಚೀನಾಗಳು ಪ್ರಬಲ ನೆಲಬಲವಿರುವ ರಾಷ್ಟ್ರಗಳಾದ್ದು ಐರೋಪ್ಯಗಳನ್ನು ಪಣ್ಣುಮಾಡಲು ಶಕ್ತವಾಗಿವೆ. ಅವುಗಳಿಗೆ ನಿವಿರುವುದರಿಂದ ಅವುಗಳಿಗೆ ಎಲ್ಲ ವಿಧ ಸರಬರಾಯಿ ಮತ್ತು ನೌಕಾ ಬೆಂಬಲವನ್ನು ಅಮೇರಿಕಾ, ಇಂಗ್ಲೆಂಡುಗಳು ಕೊಟ್ಟು, ಈ ನಾಲ್ಕು ರಾಷ್ಟ್ರಗಳು ಒಮ್ಮತ ಗೆನಾಗಿ ವಿಕಸ್ಯೆಯಿಂದ ಹೋರಾ ಡುವಂತೆ ಯೋಜನೆ ತಯಾರಿಸಬೇಕೆಂದು ಮೋಸ್ಕೋ, ಚುಂಕಿಂಗ್, ಲಂಡನ್, ಸ್ಯೂಯೋರ್ಕುಗಳ ಅಭಿಪ್ರಾಯವಿದೆ.

ರುಸವೆಲ್ಟರ ಭಾಷಣ.

ಜಪಾನಿನ ಮೇಲೆ ಯುದ್ಧ ಸಾರುವ ಸಂದರ್ಭದಲ್ಲಿ ಅಧ್ಯಕ್ಷ ರುಸವೆಲ್ಟರು ಭಾಷಣ



ಮಾಡಿದ ಸಾರಂಶ ಏಗಿದೆ: "ಜಪಾನು ಅಮೇರಿಕದ ಮೇಲೆ ಬೇಳದಿದ್ದರೆ ಎದು ತಮ್ಮ ಕೊಳೆಯುಲ್ಲಿ ಬಾಲುಪಡೆಯುವಂತಿಲ್ಲವೆಂದು ಜರ್ಮನಿಯು ಜಪಾನಿಗೆ ಹೇಳುತ್ತಿದೆ ಎಂಬುದು ಹೆಲವು ಪಾರಿಗಳಿಂದ ಆ ಮೇರಿಕಾ ಸರಕಾರಕ್ಕೆ ತಿಳಿದಿತ್ತು. ಆದರಂತೆ ಅಮೇರಿಕವ ಏದಿಸ್ಪರ್ಧಿಗಳ ಸಮೇತ ಇಡೀ ರಾಂತಸಾಗರವನ್ನು ತನ್ನ ಪತೋಳಿಗೆ ತಂದುಕೊಳ್ಳುವೆನಾಗಿ ಜಪಾನು ಆಕ್ರಮಣವನ್ನು ಕೊಟ್ಟಿದ್ದಿತು. ಜರ್ಮನಿ ಮತ್ತು ಜಪಾನುಗಳು ಜತೆಯಾಗಿಯೇ ಸೌಕೆ ಮತ್ತು ಸ್ವೈನಿಕ ಧಾಳಿಯ ಯೋಜನೆ ತಯಾರಿಸಿಕೊಂಡಿರುವವು. ಜರ್ಮನಿ ಮತ್ತು ಇಟಲಿಗಳು ಮುಂದಾಗಿ ಯುದ್ಧ ಸಾರಿದ್ದೇ ಅಮೇರಿಕದೊಡನೆ ತಾವು ಯುದ್ಧವಲ್ಲಿರುವದಾಗಿ ಬಾವಿಸಿರುವಮೆಂಬುದು ನೆನಪಿಲಿ. ಅಮೇರಿಕವು ಜಪಾನಿನಿಂದಾಗುವ ಲೋಕಾಪಾಯ ನಿವಾರಣೆಯನ್ನು ನಿರೀಕ್ಷಿಸುತ್ತಿವೆ. ಆದರೆ ಲೋಕದ ಇತರ ಭಾಗವು ಹಿಟ್ಲರ್ ಮುಷಲನಿಗಳ ಆಕ್ರಮಣದೊಳಗಿರಲು ಬಿಟ್ಟಿದೆ ನಾವು ಅಪರಾಧ ಮಾಡಿದಂತಾಗುವದು ಎಲ್ಲಾ ಕ್ಷೇತ್ರಗಳು ಮತ್ತು ಸರ್ವ ಸಾಧ್ಯ ರೀತಿಗಳು ಆಕ್ಸಿಸ್ ರಾಷ್ಟ್ರಗಳವಿಂದ ಏಕ ರಂಗ್ಷೇತ್ರವಾಗಿ ಪರಿಗಣಿಸಲ್ಪಟ್ಟಿವೆ. ಇದು ದೀರ್ಘ ಯುದ್ಧವಾಗಿರಲ್ಪಟ್ಟಿದೆ; ತಕ್ಷ ಕಸ್ಯದಾಯಕ ಯುದ್ಧವೆನ್ನಿಸಬಹುದು. ಪ್ರಥಮದ ಕೆಲವು ದಿನಗಳಲ್ಲಿ ಜಪಾನು ಯುದ್ಧವಲ್ಲಿ ಮಡಿದವರ ಸಂಖ್ಯೆ ದೊಡ್ಡದಾಗಬಹುದು. ನಾವು ನಮ್ಮ ಗ್ಯಾಪ್, ಪೇಲ್ ಮತ್ತು ಮಿಡ್ವೇಗಳಲ್ಲಿ ಕೈತ ಪ್ರಾವ ವಾರ್ತೆ ಕೇಳಬೇಕಾಗಬಹುದು. ಅಮೇರಿಕವು ಕೊನೆಯ ಹಾಗೂ ಪೂರ್ಣ ವಿಜಯದ ಹೊರತು ಬೇರಾವುದನ್ನೂ ಸ್ವೀಕರಿಸುವಂತಿಲ್ಲ. ಜಪಾನರ ವಿದ್ರೋಹಕರ ವರ್ತನೆಯು ಮಾತ್ರ ನಿರ್ಮಾಮಾದರೆ ಸಾಲದು; ಅಂತರ್ರಾಷ್ಟ್ರೀಯ ಮಾರಿಕವೃತ್ತಿ ಎಲ್ಲೆಲ್ಲಿದೆಯೋ ಅದೆಲ್ಲಾ ಕೊನೆಯಾ ಡಾರಿ ನಿರ್ನಾಮಗೊಳ್ಳಬೇಕು. ಶಾಂತಸಾಗರದಲ್ಲಿ ಜಪಾನು ಗೆದ್ದರೆ ಲಿಬ್ಯದ ಜರ್ಮನರ ಯುದ್ಧಕ್ಕೆ ಸಹಾಯವಾಗುವದು; ಕಾಕಸಸ್ಸಲ್ಲಿ ಜರ್ಮನಿ ಜಯಿಸಿದರೆ ಜಪಾನಿಗೆ ಅನುಕೂಲವಾಗುವದು. ನಾವು ಈ ಯುದ್ಧ ವಿಜಯವನ್ನೂ ಅದನ್ನನುಸರಿಸಿಕ್ಷಾಂತಿ ಒಂದು ಖಾಶ್ವತ ಶಾಂತಿಯನ್ನೂ ಸಂಪಾದಿಸುವೆವು."

ಚರ್ಚಿಲ್ಲರ ಡಾಗರ್ಜನೆ

ಜಪಾನು ಯುದ್ಧ ಪ್ರಧಾನ ಹೊಡೆತಗಳ ಅನಂತರ ಲೋಕ ಸಾಮತ್ರ ಪ್ರ. ಚ



ಚರ್ಚಿಲ್ಲರು ಕಾಮನ್ಸ್ ಸಭೆಯಲ್ಲಿ ಭೀಗಂದರು: "ಹಾನವ ಜಗತ್ತಿನ ಇದರಲ್ಲಿ ನಾಲ್ಕಂಶ ಜನರು ನಿಮ್ಮ ಕದಿಯಲ್ಲಿರುವರೆಂದು ನಾನು ಹೆನ್ನೆ ಹೇಳಿದ್ದೆ. ಕೆಲವೇ ಮಂದಿ ದುಷ್ಟರು ಮತ್ತು ಅವರ ಸಂಕ್ಷೇಗಳು ಮಾತ್ರವೆ ಸರ್ವನಿವೇಶ ಮಾನವಂಧವನ್ನು ಹಾಡಲು ಶಕ್ತರಾಗಿವೆ ನಾನವರಿಗೆ ಸರಿಯಾದ ಪಾಠ ಕಲಿಸಿದ್ದವಲ್ಲಿ ಸಾವಿರಾರು ವರುಷಗಳ ವರೆಗೂ ಮರೆಯಲಾಗದಂತಹ ಲಜ್ಜೆಯು ತಲಾಂತರಗಳವರೆಗೂ ನಮ್ಮವಾಗಿಬಹುದು." ಎನ್ನುತ್ತಾ ಲಿಬ್ಯದ ಯುದ್ಧವು ನೀರೀಕ್ಷೆಯಂತೆ ಸಾಗಿಲ್ಲವಾದರೂ ಜನರಲ್ ಆಚಿನ್‌ಲೆಕ್ ಇವರು ಆಷ್ಟಿಯ ಜರ್ಮನಿ ಮತ್ತು ಇಟಲಿ ಸೇನೆಗಳ ಫ್ಲೆಂಬಕ್ಕಿಗಿ ಕೆಲಪಲ್ಲಟ್ಟಿದ್ದು ಅವರಾ ನಿಯನ್ನು ಪಾಡಿಸುವ ಲಕ್ಷಣ ಕಂಡು ಬರುತ್ತಿದೆ ಎಂದರು. ರಶ್ಯದ ಅಪ್ರತಿಮ ಧಾಸ್ಯವನ್ನು ವ್ಯಾಸಿಸಿ ತಮ್ಮ ಸ್ಥಿತಿಯಲ್ಲಿ ಹಲವು ಬದಲಾವಣೆಗಳಾಗಿವೆಯು. ಆದರೆ ರಶ್ಯದೊಡನೆ ನಾವು ಮಾಡಿರುವ ವ್ಯವಹಾ

(೧೦ನೇ ಪುಟ ನೋಡಿರಿ)

YOUR SHARE OF PROSPERITY.

Some people, you may have noticed, get more than their share of prosperity while others get less. In some cases it is no doubt all a matter of luck. But where the difference may be traced to a modern bank account. Are you enjoying your due share of prosperity? If not, we invite you to have an account with us and a share in our prosperity.

CANARA BANK, Ltd.

ESTD. 1906.

ಎಚ್ಚರಿಕೆ.

ಹರೆಯದಲ್ಲಿ ಮುಸ್ಸಿನ ಚಂತೆಯೆ ನಿಮಗೆ ಚಂತೆಯಿಂದ ಇರುವ ಸ್ವಲ್ಪ ಸೌರುಷವೂ ಯಾಕಾಗುವದು—ಜೋಕೆ!

"ಬಿಕ್ರಂ" ಪಂಡಿತ ತಾರಾನಾಥರ

ಮಾತ್ರೆಗಳನ್ನು ಕೆಲವು ದಿವಸ ಉಪಯೋಗಿಸಿ ನೋಡಿ ಎಷ್ಟು ಧಾತು ನಷ್ಟಗಳನ್ನು ಸರಿಪಡಿಸುತ್ತವೆ. ಸ್ವಪ್ನಸ್ಖಲನ, ನಪುಂಸಕತೆ, ಅಗ್ನಿಮಾಂದ್ಯ, ಮಲಬದ್ಧತೆ, ಪಾರ್ಶ್ವಪಾತ ಮುಂತಾದ ಮಿಸ್ಸಿನಾಗಾಗಳನ್ನೆಲ್ಲಾ ತೆಗೆದು ಹಾಕುತ್ತವೆ. ಬುದ್ಧಿಬಲ, ಸ್ಮರಣಶಕ್ತಿ, ಕಣಜನಲ್ಲಿ ಹುರುಪು ಇವುಗಳನ್ನು ಬೆಳೆಸುತ್ತವೆ. ಬೆಲೆ ರೂ ೩-೮-೦

ವಿಳಾಸ. 'ಬಿಕ್ರಂ ಡಿಸ್ಟ್ರಿಬ್ಯೂಟರ್ಸ್,
24-ಕಾನಕಾನಹಳ್ಳಿ ರೋಡ್, ಬಸವನಗುಡಿ, ಬೆಂಗಳೂರು

ನೋಟೀಸು.

ಕರ್ಕಳ ಡಿ. ಮುನ್ಸಿಫ್ ಕೋರ್ಟಿನಲ್ಲಿ.
O. P No 87/1941.
ರತಿವೀ—ಅರ್ಜಿದಾರರು.
ಅದಿರಾಜ ಹೆಗ್ಡೆ ಕೊಪಾ—ಎದ್ರಿರು.

ಪತ್ತಿರುವ ತಾಲ್ಲು ಮೇಲಂಕಬೆಟ್ಟು ಗ್ರಾಮದ ಲ್ಲಿರುವ ಕೋಣಂಜ ದರ್ಣಪ್ಪ ಹೆಗ್ಡೆ ವಿರುದ್ಧ ಅರ್ಜಿದಾರರು ನಾಜರಾಗಿ ಕಾರ್ಕಳ ತಾಲೂಕು ಇರ್ಜಿಕ್ಕಿರು ಗ್ರಾಮದ ಕೋಣಂಜ ಮೊಂಬಲ್ಲಿ ಯಿದ್ದು ನ್ಮಿಕವಾದ ದರ್ಣಪ್ಪತೆಗ್ಡೆಗೆ ಬರಬೇಕಾದ ಸಾಲ ವಗ್ಗೈರಗಳನ್ನು ತೀರಿಸಲು ಮಾಡುವರೆ ತಾನು ಬ್ಯಾಸ್ಥೆಯೆಂಕ ಸದ್ರಿ ಕೋರ್ಟಿನವರು ವಾರೀಸು ಸರ್ಟಿಫಿಕೇಟು ಕೊಡಿಸಬೇಕಾಗಿ ಸದ್ರಿ ಅರ್ಜಿ ಕೊಟ್ಟಿರುವುದರಿಂದ ಆ ಕಾರಿತು ಆಕ್ಷೇಪವುಳ್ಳವರು ತಾ. 19-12-1941ಕ್ಕೆ ಬೆಳ್ಗೆ 10ಘಂಟೆಗೆ ಸದ್ರಿ ಕೋರ್ಟಿನಲ್ಲಿ ಜಾಹೀರು ಮಾಡಿಕೊಳ್ಳತಕ್ಕದ್ದು. ತಪ್ಪಿದಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದೆಂದು ಕೋರ್ಟು ಹುಕುಂ ಮೇರೆಗೆ ಈ ಮಾಹಿತಿ ಸಕಲ ಜನರಿಗೂ ತಿಳಿಸಿದಾಗಿದೆ.

ಆರ್ಡರ್ಲಿ. } H. P. A. Jain.
ತಾ 6 12 '41. } ಅರ್ಜಿದಾರರ ಕಡೆ ವಕೀಲ

Notice.

ಮಂಗಳೂರು ಡಿ. ಮುನ್ಸಿಫ್ ಕೋರ್ಟಿನಲ್ಲಿ.
O. C. 847/1941.
ಡಿ ಆಕ್ಟ್ಸ್ ಪೈ, ವ್ಯಕ್ತಿಯ ಪೈ & ಪ್ರೊಪ್ರೈ ಇನ ಪೈಸ್ಸೈಟರ್ ಡಿ ಸಾಲಂಜ ಪೈ ಇವರ ಜನರಲ್ ಪವರ್ ಒಫ್ ಅಟರ್ನಿ ಹೋಲ್ಡರ್ B ಗೋಪಾಲಕೃಷ್ಣರಾವ್, ಮಂಗಳೂರು ರತರ—
— — ವಿರು
ವಿರುದ್ಧ
1. ಅಮ್ಮ ಯಾನೆ ಶ್ರೀದೇವಿಯಮ್ಮ, ತಂದಾ ಅನಂತ ವಿಟ್ಟಲ ನಾವಡ 2. ಕ ಗಣಪ ಪ್ರಭು, 3. ಕೆ. ಅಚ್ಯುತ ಪ್ರಭು, ಮುಳಿಂದ ಪ್ರಭು ಗಳ ಮಕ್ಕಳು, ವ ಗಳವರು ಬಿಕರ್ ತೀರುವೀಯ ದ್ದಿರುವವರು, — ಪ್ರತಿವಾದಿರು
ತಾ. 24-1-1941ರಲ್ಲು ಶ್ರೀಮತಿಯವ್ವು ತಾವಿ ನಿಂದ 77ನೆನ್ನಗ ವ್ಯಾವಿಯಂದ ರೂಪ್ಯಾ 250-0 0 ಕ್ಕೆ ಬರಕೆಟ್ಟು ಹುಂಡಿ ಯಾನೆ ಪೈಸೋಟಿನ ಹಣಗಳು ಬಂದಾಯಿಕೊಳ್ಳುವರೆ ಮಾಡಿಯು ದಾಳ್ಳು ವಾಡಿದೆ ವೆಳ್ಳಂಡ ವ್ಯಾಜ್ಯವನ್ನು ತಾ. 22-12-1941ನೇ ದಿವ್ಸ ಘರ್ಮಿಕ್ಕೆ 10½ ಘಂಟೆಗೆ ಮೇಲ್ಕಂಡ ಕೋರ್ಟಿನಲ್ಲಿ ಕ್ಕಾಗೆ ಇಟ್ಟಿರತ್ತೆ. ಎಂಬ ಸಂಗ್ತಿ ಸದ್ರಿ ವ್ಯಾಜ್ಯದ 1ನೇ ಪ್ರತಿವಾದಿಗೆ ಯೇ ತಿಳಿಕ ತಿಸೋಗಾಗಿದೆ.

Mangalore } M. Madhava Rao,
8 19-1941. } Vakil for Plaintiff.

★ ಅಮೆರಿಕದಲ್ಲಿ ಹೇಗೆ ಗಲ್ಲಿಗೇರಿಸುವರು? ★

ಕೈದಿಗಳ ಹೃದಯ ದ್ರಾವಕ ದೃಶ್ಯ! ಅಲ್ಲಿಯೂ ಹಾಸ್ಯ ಪ್ರಸಂಗಗಳು.

ರಾತ್ರಿ ೧೧ ಗಂಟೆಯಾಗುತ್ತಲೇ ಸರಣವನ್ನು ನಿರೀಕ್ಷಿಸುತ್ತಿರುವ ಕೈದಿಗಳ ಕೋಣೆಗಳನ್ನು ಸಶಸ್ತ್ರ ಪೋಲೀಸಿನವರು ತೆರೆದು, ಆ ಅಭಾಗಿ ಕೈದಿಯನ್ನು ಯಮ ಸದನಕ್ಕೆ ನಿಧಾನವಾಗಿ ಕರೆದೊಯ್ಯುವರು. ಹಿಂಭಾಗದಲ್ಲಿ ಒಬ್ಬ ಪಾದ್ರಿಯು ಬೈಬಲಿನ ಪವಿತ್ರ ವಾಕ್ಯಗಳನ್ನು ಉಚ್ಚರಿಸುತ್ತಾ ಗಂಭೀರ ಮುದ್ರೆಯನ್ನು ಧರಿಸಿ ಬರುತ್ತಿರುವನು.

ಈ ಶಾಂತವಾತಾವರಣದ ಶಾಂತಿಯನ್ನು ಸ್ವಿಚ್‌ಹಾಕುವ ಧ್ವನಿಯು ಭಂಗ ಗೊಳಿಸುತ್ತದೆ. ಮತ್ತು ಕೂಡಲೆ 'ಯಮ ಸದನ'ವೆಲ್ಲ ಪ್ರಕಾಶವಾಗುತ್ತದೆ. ೧೦ ಹೆಜ್ಜೆ ಹೋದ ಕೂಡಲೆ 'ವಿದ್ಯುತ್ ಕುರ್ಚಿ'ಯ ದರ್ಶನವಾಗುವುದು. ಈ ಕುರ್ಚಿಯ ಮೇಲೆ ಕುಳತೇ ಆ ಅಭಾಗಿಯು ಈ ಲೋಕದಿಂದ ಹೊರಡುವುದು. ಈ ಕುರ್ಚಿಯ ಮೇಲೆ ಕುಳತುಕೊಳ್ಳಲು ಕೆಲವರು ನಗುತ್ತ, ಕಲವರು ಅಳುತ್ತ, ಕೆಲವರು ಕಂಸಿಸುತ್ತ ಬರುವರು. ಕೂಡಲೆ ಆವನ ಎರಡು ಕೈಗಳು, ಎಡೆ, ಸೊಂಟ, ಕೆನ್ನೆಗಳು ಕಪ್ಪು ಚರ್ಮದಿಂದ ಬಿಗಿಯಲ್ಪಡುವವು. ತಲೆಯಿಂದ ಕಾಲಿನ ವರೆಗೆ ಕಪ್ಪು ಹೊದಿಕೆಯನ್ನು ಹೊದಿಸುವರು.

ಅಮೇರಿಕದ ಸಂಯುಕ್ತ ಸಂಸ್ಥಾನದ ಕಾನೂನಿಗನುಸಾರವಾಗಿ, ೧೩ನಿಂದ ಸಾಕ್ಷಿಗಳು ಕೈದಿಯ ಮರಣ ಕಾಲದಲ್ಲಿ ೧೫ ಹೆಜ್ಜೆ ದೂರದಲ್ಲಿ ವಿಗ್ರಹಗಳಂತೆ ನಿಂತಿದ್ದು, ಈ ಅಭಾಗಿಯ ಮರಣ ಕಾರ್ಯವನ್ನು ಸಾಂಗಗೊಳಿಸಬೇಕಾಗುವುದು.

ಕೆಲವೇ ನಿಮಿಷಗಳಲ್ಲಿ ಕೈದಿಯ ತಲೆ ಮತ್ತು ಕಾಲುಗಳ ಮೇಲೆ ವಿದ್ಯುತ್ ಯಂತ್ರವನ್ನು ಜೋಡಿಸಿ ತನ್ನ ಕೈಯನ್ನು ರಾಕ್ಷಸರೂಪೀ ಸ್ವಿಚ್‌ನ ಮೇಲಿಡುವರು. ಕಾವಲುಗಾರನು ಹಿಂದಕ್ಕೆ ಸರಿಯುವನು. ಪಾದ್ರಿಯು ಸಾಕಿದಗಿಣಿಯಂತೆ ಬೈಬಲಿನ ಪವಿತ್ರ ಸೂತ್ರಗಳನ್ನು ಜೋರುಜೋರಾಗಿ ಉಚ್ಚರಿಸಲಾರಂಭಿಸುವನು. ಜೈಲರನು ಕೂನೆಯ ಆಜ್ಞೆಯನ್ನೀಯುವನು. ವಿದ್ಯುತ್ಪ್ರವಾಹವು ಕೈದಿಯ ದೇಹವನ್ನೆಲ್ಲ ಆವರಿಸುವುದು. ದೇಹದ ಪ್ರತಿಯೊಂದು ನರವೂ ಸ್ನಾಯುವೂ ಎಳೆಯಲ್ಪಡುವುದು. ಮುಚ್ಚಲ್ಪಟ್ಟಿರುವ ಮುಖವು ಕಾದ ಕಬ್ಬಿಣದಂತೆ ಕೆಂಪಾಗುವುದು. ಮನುಷ್ಯ ನಾಂಸವು ಸುಟ್ಟು ಹೋಗುವ ದುರ್ಗಂಧವು ಹೊಡೆಯುವುದು. ನಂತರ ವಿದ್ಯುತ್ತನ್ನು ನಿಲ್ಲಿಸುವರು. ವೈದ್ಯರು ದೇಹ ಪರೀಕ್ಷೆ ಮಾಡಿ, ಮೃತ್ಯುವಿನ ಪ್ರಮಾಣಪತ್ರವನ್ನು ಬರೆಯುವರು. ಮನುಷ್ಯನಿಗೆ ಸುಖ, ಶಾಂತಿ ಮತ್ತು ವೈಭವಶಾಲಿ ಆನಂದವನ್ನುಂಟುಮಾಡುವ ವಿದ್ಯುತ್ತನ್ನೆಂದಲೇ ಅವನ ವಿನಾಶವೂ ಆಗುವುದೆಂದು ಅದನ್ನು ಕಂಡುಹಿಡಿದ ಗಿಲ್ಬರ್ಟ್‌ಗೆ ಎಂದಿಗೂ ಹೊಳೆದಿರಲಾರದು ಮನುಷ್ಯ ಶರೀರವು ಎಷ್ಟು ಆಶ್ಚರ್ಯಕಾದುದು!

ಭಾರತದಲ್ಲಿ ಯಾವ ರೀತಿ ಕೊಲೆಪಾತಕರಂಥವರ ನಶ್ಚಿಂತರೀರವು ನ್ಯಾಯಮೂರ್ತಿಗಳ ನಿರ್ಣಯಾನುಸಾರವಾಗಿ ಗಲ್ಲಿನ ಮೂಲಕ ಸಮಾಪ್ತಿಗೊಳ್ಳುವುದೋ, ಅದೇ ರೀತಿ ಸ್ವತಂತ್ರ ರಾಷ್ಟ್ರವಾದ ಅಮೆರಿಕದಲ್ಲಿ ಸಹ, ಅಪರಾಧಿಗಳನ್ನು ವಿದ್ಯುತ್ ಕುರ್ಚಿಯ ಮೇಲೆ ಕೂರಿಸಿ ಅವರ ಜೀವನ ಲೀಲೆಯನ್ನು ಸಮಾಪ್ತಗೊಳಿಸುವರು. ಈ ವೈತ್ಯದಂಡದ ವಿಧಿಗೆ ಇಂಗ್ಲೀಷಿನಲ್ಲಿ Electrocution ಎನ್ನುವರು.

ಸಭ್ಯತೆ ಮತ್ತು ಸಂಸ್ಕೃತಿಯ ಈಂಥಿನೆಯ ಶತಮಾನದಲ್ಲಿ ಈ ಗಲ್ಲಿಗೇರಿಸುವ ಅನಾಗರಿಕ ಪದ್ಧತಿಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದು ಜನರು ಹೇಳುತ್ತಲೇ ಬಂದಿದ್ದಾರೆ. ಕೆಲವು ದೇಶಗಳಲ್ಲಿ ಇದು ಸಫಲವಾಗಿಯೂ ಇದೆ. ಆದರೆ ಜಗತ್ತಿನ ದೊಡ್ಡ ಶಕ್ತಿಶಾಲಿ ರಾಷ್ಟ್ರಗಳು ಇನ್ನೂ ಮನುಷ್ಯನ ಜೀವನಲೀಲೆಯು ಸಂಪೂರ್ಣಾಹುತಿಮಾಡುವ ಈ ದಂಡನೀತಿಯು ಅತ್ಯಗತ್ಯವೂ, ಅನಿವಾರ್ಯವೂ ಆಗಿದೆಯೆಂದು ತಿಳಿದಿವೆ.

ಅಮೆರಿಕದಲ್ಲಿ ಮೊಟ್ಟಮೊದಲು ಗಲ್ಲಾಂನೇ ಆಗಸ್ಟ್ ೬ನೇ ತಾರೀಕಿನ ದಿನ ಬಫ್ಫಲೊ ನಿವಾಸಿಯಲ್ಲಿ ಈ ರೀತಿ ವಿದ್ಯುತ್ತನ್ನು ಪಯೋಗಿಸಿದರು. ಗಲ್ಲಾನೇ ಜುಲೈ ೩ರಿಂದ ಈ ಪದ್ಧತಿಯು ಪ್ರಾರಂಭವಾಯಿತು. ಗಲ್ಲಿಂದ ಮರಣ ದಂಡನೆಯ ಎಕ್ಷೆಯು ಕೇವಲ ಸೀಂಗ್ ಸೀಂಗ್ ಸೆರೆಮನೆಯಲ್ಲಿಯೇ ಕೊಡಲ್ಪಡಲಾರಂಭವಾಯಿತು.

ಅಲ್ಲಿನ ಹೊಸ 'ಯಮಸದನ'ವು ೨,೬೦,೦೦೦ ಡಾಲರುಗಳ ವೆಚ್ಚದಿಂದ ಹಡ್ಸನ್ ನದಿಯ ದಡದ ಮೇಲೆ ಕಟ್ಟಲ್ಪಟ್ಟಿದೆ. ಇದರಲ್ಲಿ ಭೋಜನಾಲಯ, ಪುಸ್ತಕಾಲಯ, ವಿಶ್ರಾಂತಿಗೃಹ ಮುಂತಾದ ಎಲ್ಲ ಅನುಕೂಲತೆಗಳೂ ಇವೆ. ಇದರಲ್ಲಿ ಒಟ್ಟು ೨೯ ಕೋಣೆಗಳಿವೆ. ಇವುಗಳಲ್ಲಿ ೩ ಸ್ತ್ರೀ ಕೈದಿಗಳಿಗಾಗಿವೆ. ೨೪ ಕೋಣೆಗಳಲ್ಲಿ ಜೀವನ ಪರ್ಯಂತ ಮೃತ್ಯುವಿನ ನಡುವೆ ನೇತಾಡುತ್ತಿರುವ (ಇವರು ಶ್ರೇಷ್ಠ ನ್ಯಾಯಾಲಯಕ್ಕೆ ಅಪೀಲ್ ಮಾಡಿರುವರು) ಕೈದಿಗಳೂ, ೭ ಕೋಣೆಗಳಲ್ಲಿ ಅಪೀಲ್ ತಿರಸ್ಕೃತಗಾಗಿರುವ ಕೈದಿಗಳೂ ಇರುವರು ಒಂದು ಕೋಣೆಯಲ್ಲಿ ೪ ಗಂಟೆ ಕಾಲಗಳೊಳಗೆ ಗಲ್ಲಿಗೇರಿಸಲ್ಪಡುವವರಿರುವರು.

ಈ 'ಯಮಸದನ'ದಲ್ಲಿ ಕೈದಿಯ ಅಂತಿಮ ಸಮಯವು ಪತ್ತೆರ ಬಂದಂತೆಲ್ಲ ಆವನ ಶಾರೀರಿಕ ಮತ್ತು ಮಾನಸಿಕ ಪರಿವರ್ತನೆಗಳಾಗುತ್ತ ಹೋಗುವುವು. ಸಾಯುವವರೆಗೆ ಪೈಕಿ ಎಷ್ಟೋ ಮಂದಿ ಅಂಜುಬುರುಕರಿರುವರು. ಎಷ್ಟೋ ಮಂದಿ ವೀರರೂ, ಸಾಹಸಿಗಳೂ ಇರುವರು. ಮತ್ತು ಕೆಲವರು ತಮ್ಮ ಜೀವನದ ವಿಷಯದಲ್ಲಿ ತೀರ ಉದಾಸೀನದಿಂದಿರುವರು.

ಒಂದು ಸಾರಿ ಒಬ್ಬ ತತ್ವಜ್ಞಾನಿಯನ್ನು ಸೀಂಗ್ ಸಿಂಗಿನ ಯಮಸದನಕ್ಕೆ ಕರೆತಂದಿಟ್ಟರು. ಆವನಿಗೆ ಸುಮಾರು ೫೦ ವರ್ಷವಾಗಿತ್ತು. ತಾನು ಹೇಗೆ ಆಸಂಧಿಯಾವೆಸೆಯುವನನ್ನು ನೈಪುಣ್ಯದಿಂದ ಈ ರೀತಿ ಹೇಳಲಾರಂಭಿಸಿದನು- "ಡಾಕ್ಟರೇ, ಜೀವನಕ್ಕಾಗಿ ಪ್ರಯತ್ನಪಡುವವನು ಮೂರ್ಖನೆಂದೇ ನನ್ನ ಭಾವನೆ ಇತ್ತು. ನಾನು ನನ್ನ ಆವಶ್ಯಕತೆಗಾಗುವಷ್ಟು ಕೆಲವು ಸಾವಿರ ಪೌಂಡುಗಳಷ್ಟು ಮಾತ್ರ ಕದಿಯುತ್ತಿದ್ದು ಎಲ್ಲವನ್ನೂ ವೆಚ್ಚಮಾಡುತ್ತಿದ್ದೆ. ಇವರಲ್ಲಿ ನನ್ನ ತಪ್ಪೇನು? ಈ ಜಗತ್ತೂ ಸರಿಯಿಲ್ಲವಾಗಿ ನಾಗಲು ಇಂತಹ ವಿಧಿನಿಯಮಗಳಾಗಿರಬೇಕು. ಇದಕ್ಕೆ ನೀನೇ ನೆನ್ನುವಿರಿ?" ಮುಂದುವರಿಸಿ ಹೀಗೆಂದನು- "ಆದುದರಿಂದಲೇ, ಜಗತ್ತಿಗೆ ನಾನಾ ಪ್ರಕಾರದ ಕೈದಿಗಳ ಆಗತ್ಯವಿದೆ. ಬಟ್ಟೆ ಹೊಲಿಯಲು ದರ್ಜಿ, ಮನೆ ಕಟ್ಟಲು ಇಂಜಿನಿಯರು, ಬಡಗಿ, ಕೂಲಿಯವರು ಮುಂತಾದವರು, ಒಡನೆಮಾಡಲು ಆಕ್ಕಸಾಲೆ ಮುಂತಾದವರ ಆಗತ್ಯವಿದೆ. ಆದೇ ರೀತಿಯಲ್ಲಿ ಈ ಸರೆಮನೆಯ ಕಾವಲಿಗೆ ಸೈನಿಕರೂ, ನಿಮ್ಮ ಹೊಟ್ಟೆ ಪಾಡಿಗೆ ಸೀಂಗ್ ಸೀಂಗಿನ ಕಾರವಾಸ ನುತ್ತ ಈ ಕಾರಾಗೃಹದ ತಪ್ಪಸ್ಥರಿಕ್ಕೆ ನನ್ನಂತಹ ಕೈದಿಗಳ ಆಗತ್ಯವೂ ಇದ್ದುದರಿಂದಲೇ ನ್ಯಾಯಾಲಯವು ನನ್ನನ್ನು ಇಲ್ಲಿಗೆ ಕಳುಹಿಸಿತು. ಇದಿಷ್ಟ ನಿಮಗೆ ತಿಳಿಯುನ್ನುದಿಲ್ಲ. ಆವನ್ನು ತಿಳಿಯಲು ತತ್ವಜ್ಞಾನಿಗಳೆ ಮೂರ್ಖ ನಾಧ್ಯ" ಎಂದ! ಡಾಕ್ಟರನು ಏನುತಾನೇ ಹೇಳ ಬಲ್ಲನು?

ಈ ತತ್ವಜ್ಞಾನಿಯು ಮೊನೆಯ ಭೋಜನಕ್ಕೆ ಏನು ಬಯಸುವನೆಂದು ಪ್ರಶ್ನಿಸಲು, ಆವನು "ನನ್ನಂತಹ ಬದ್ಮಾಷಿಗೆ ಕೊಟ್ಟು ನೀವು ನನಗೆ ಮತ್ತೇನು ಬೇಕು' ಎಂದನು ಒಬ್ಬ ನಿರ್ದಯಿ ಕೊಲೆಗಡುಕನ ಈ ಅಂತಿಮ ಇಚ್ಛೆಯನ್ನು ಕೇಳಿ ಎಲ್ಲರೂ ಆಶ್ಚರ್ಯಚಕಿತರಾದರು.

ಪ್ರತಿಯೊಂದು ಬಿಗಿದ ಕೈಗಳ ಗೊಂಚಲನ್ನು ಕೈಬಿಚ್ಚಿಲ್ಲಿ ಒಪ್ಪಿಸಿದ ಜೀವನು ಈ ತತ್ವಜ್ಞಾನಿಯ ಕೋಣೆಯ ಬಾಗಿಲನ್ನು ತೆರೆಯಲು, ಬಿಗಿದ ಕೈಯನ್ನು ಬಿಗಡಿಸಲು ಏನೇ ಒಂದು ಪೈಶಾಚಿಕವಾದ ಪಕ್ಕುವಿದ್ಯೆಯನ್ನು ಕಂಡು ಆಶ್ಚರ್ಯಾನ್ವಿತನಾಗಿ ಎಷ್ಟೋ ಹೊತ್ತು ಸೀಂಗಿನ ಸೆರೆಯಲ್ಲಿ ಅದೇ ಕೈದಿಯು ಬೀಗವಿಲ್ಲದೆ ಹಾಕಿದ್ದಂತೆ-ವಿನೋದಕ್ಕಾಗಿ! ಜೀವನು ಬೀಗ ತೆಗೆಯುತ್ತಿದ್ದಾಗ, ಈ ಕೈದಿಯು ಕೋಣೆಯೊಳಗೆ ಪ್ರತ್ಯಕ್ಷಹಾಸ ಮೇಲೆ ನಿಂತು ಉಪ್ಪಹಾಸ ಮಾಡುತ್ತ ಇದ್ದನು. ಅವನನ್ನು ಗಲ್ಲಿನ ಬಳಿ ಕರೆಮಕೊಂಡು ಹೋಗುವಾಗಲೂ ಅವನು ನಗುತ್ತಲೇ ಇದ್ದನು.

ನಂತರ ಕೈದಿಗೆ ಕ್ಷೌರವಾಗುವುದು. ಸ್ನಾನ ಮಾಡಿಸಿ ಕೋಣೆಯೊಳಗೆ ಬಿಡುವರು. ಆವನ ಕೊನೆಯ ಬಯಕೆಯನ್ನು ಕೇಳುವರು. ಮಧ್ಯಾಹ್ನದಲ್ಲಿ ಆವನ ಮಿತ್ರರು, ಸಂಬಂಧಿಕರು ನೋಡಲು ಬರುವರು. ಆವರು ಆವನನ್ನು ಬಿಟ್ಟು ಹೊರಡುವ ದೃಶ್ಯವನ್ನು ನೋಡಲಾಗುವುದಿಲ್ಲ. ಕರೋರಪ್ಯದಯವು ಸಹ ದ್ರವಿತವಾಗುವುದು. ಕೈದಿಯ ತಾಯಿ ತಂದೆಗಳು, ಪತ್ನಿ ಪುತ್ರರು ಮೂರ್ಛಿತರಾಗುವರು.

ಸಂಜೆ ೭ ಘಂಟೆಗೆ ಆ ಕೈದಿಗೆ ನಾನಾ ರೀತಿಯ ಆಡಿಗೆ ಮಾಡಿ ರುಚಿಯಿಂದ ಊಟ ಕೊಡುವರು. ವಜ್ರ ಹೃದಯವುಳ್ಳ ಕೈದಿಯು ಹೊಟ್ಟೆತುಂಬ ಊಟಮಾಡುವನು. ಬಹಳ ಮಂದಿ ಕೈದಿಗಳು ಮರಣ ಭಯದಿಂದ ಅರ್ಧ ಸತ್ತವರಂತಾಗಿ ಏನನ್ನೂ ಮುಟ್ಟುವದೇ ಇಲ್ಲ. ರಾತ್ರಿ ೧೧ಕ್ಕೆ ಗಲ್ಲಿಗೇರಿಸಲಾಗುವುದು

— S. S. ಕೊಪ್ಪಗನೂರು.

CONFIDENCE
is a great asset in building Business.
The Bombay Life Assurance Company Limited
has created Public Confidence
by its
Fair Dealings
Prompt Settlement of Claims
Liberal Terms
Long Experience &
Sound Investments.
To Insure or to represent, it pays you to consult us:
KOCHIKR BROTHERS, LTD.,
Chief Agents for South India,
Including Indian States.
Udipi, Mangalore, Calicut,
Madras, Trivandrum, Bangalore City,
and Bombay 4.

The Canara Industrial & Banking Syndicate Ltd.,

ನೋಟೀಸು.

ದಿ ಕೆನರಾ ಇಂಡಸ್ಟ್ರಿಯಲ್ ಎಂಡ್ ಬೇಂಕಿಂಗ್ ಸಿಂಡಿಕೇಟ್ ಲಿಮಿಟೆಡ್

ಕುಂದಾಪುರ.

ಈ ಕೆಳಗೆ ಕಾಣಿಸಿದ ಆಸಾಮಿಗಳಿಗೆ ಕೊಟ್ಟ ರಿಜಿಸ್ಟ್ರಿ ನೋಟೀಸುಗಳು, ಸದರಿ ಆಸಾಮಿಗಳ ಪೈಕಿ ಕೆಲವರು ಸಿಕ್ಕದೆ ಮತ್ತು ಕೆಲವರು ವ್ಯತರಾಗಿದ್ದಾರಾಗಿ ವಾಪ್ಸು ನಮಗೆ ಬಂದಿರುವುದರಿಂದ ಸದರಿ ಆಸಾಮಿಗಳು ಈಡಿಟ್ಟ ನಗಗಳನ್ನು ಇದೇ ತಾ. 30-12-1941ನೇ ಮಂಗಳವಾರ ಅಪರಾಹ್ನ ಘಂಟೆ ಎರಡಕ್ಕೆ ಅಥವಾ ಬೇಂಕಿಗೆ ಯುಕ್ತ ತೋರುವ ಇತರ ದಿನಗಳಲ್ಲಿ ಪುನಹ ನೋಟೀಸು ಕೊಡದೇನೇ ಬೇಂಕಿನ ಆಫೀಸಿನಲ್ಲಿ ಏಲಂ ಮಾಡಲ್ಪಡುವುವು, ತಿಳಿದಿರಲಿ.

ಲೋನ್ ನಂಬ್ರ.	ಸಾಲ ಪಡೆದವರ ಹೆಸರು ಮತ್ತು ವಿಳಾಸ	ಅಸಲು ರೂಪ್ಯ
2/39	ಬೆಟ್ಟಿ ಘಟೇಶ ಸಾಹೇಬ, ಮೈದಿನ ಸ್ಟಾಪರ ವರ್ಗ, ಕಾವರಾಪ (ಕೊಂಕಣಿ).	32.
442/39	ರಾಜಾರಿ ಬರೆಟ್ಟಿಪ್ಪ, ಜೂಜಿ ಬೆರೆಟ್ಟಿಪ್ಪನ ಮಗ, ಕಳ್ಳಿಗ.ಪ್ಪ, ಕುಂದಾಪುರ.	5.
608/39	ಪಿ. ರಾಮಚಂದ್ರ ಶೆಣೈ, ವೈಕುಂಟ ಶೆಣೈರ ಮಗ, ಗುಜರ ಮಕ್ಕಿ (ಕುಂದಾಪುರ).	40.
322/40	ಕೇಪ ಪೂಜಾರಿ, ಗೋವಿಂದ ಪೂಜಾರಿ ಆಳಿಯ, ಕೋಡಿ (ಕುಂದಾಪುರ).	6.

ಕುಂದಾಪುರ, 10-12-'41

T. G. M. Pai,
Agent.

TOURISTS' ONLY IDEAL RESORT

CAFE' ROYAL

(REGISTERED)

SHIVALLI BRAHMINS'

High Class Boarding & Lodging House

HOSPITAL ROAD, **UDIPI.**

ಶಿವಳ್ಳಿ ಬ್ರಾಹ್ಮಣರ ಅತ್ಯುತ್ತಮ ವಿಶ್ರಾಂತಿ ಗೃಹ

'ಕೆಫೆ ರೋಯಲ್'

ಆಸ್ಪತ್ರೆ ರಸ್ತೆ, ಉಡುಪಿ.

"ಎವರೆಸ್ಟ್ ಗೋಲ್ಡ್" ಫ್ಯಾನ್ಸಿ ಚೈನುಗಳು.

ರಾಲು ಕಾಲಾವಧಿ ನಿರ್ಬಾಧಿತವಾದುದು ಮೇಷಿನಿ ದರಿಸುವ ಚೈನುಗಳು ಈ ಚೈನುಗಳು 5ವರುಷ ಗ್ಯಾರಂಟಿ ಕೊಡಲಾಗುವ ಎನರೆಸ್ಟ್ ಚಿನ್ನದಿಂದ ತಯಾರಿಸಲ್ಪಟ್ಟವು ಆಕರ್ಷಕವಾದ ವಿವಿಧ ಜಾತಿಯ ಕಲ್ಲುಗಳಿಂದ ಹೊದಿಸಲ್ಪಟ್ಟವು ಎಲ್ಲರಿಗೂ ಮನಸಂತೋಷವಹುದೆಂದು ನಂಬಿರುವೆವು. ಇದನ್ನು ದರಿಸಿದ ಮಾತ್ರದಿಂದ ಕೆಂಪಳಗಿಗೆ ಕೋಭೆ ಬರುವುದು. ಹೆಚ್ಚಳಿಕೆ ಸರ್ವರಿಗೂ ದೃಷ್ಟಿಯಾಗಿ ಈ ಕಂಪನಿಯವರ ಕಡೆಗೇನೇ ಆಕರ್ಷಿಸಲ್ಪಡುವುದು.

24 ಇಂಚು ಉದ್ದದ ಚೈನಿಗೆ ರೂಪ್ಯಾ 4 - ಪೋಸ್ಟೇಜು ಪ್ರತ್ಯೇಕ ಇಂದೇ ಆರ್ಡರನ್ನು ಕೊಡಿರಿ.

The Everest Agencies,
P. O. BASAVANGUDI, BANGALORE CITY.

ಸಮಾಚಾರ ಸಂಗ್ರಹ

ಫಿಲಿಪ್ಪೈನ್ಸ್ ಆಕ್ರಮಣ.

ಜಪಾನಿನ ಸಬಲ ಸೇನೆಯು ಅಮೇರಿಕದ ಫಿಲಿಪ್ಪೈನ್ಸಿನ ಮೇಲೆ ಆಕ್ರಮಣ ನಡೆಸಿದೆ ಫಿಲಿಪ್ಪೈನ್ಸ್ ದ್ವೀಪದ ಲುಝೋನ್‌ನ ಉತ್ತರ ಕರಾವಳಿಯಲ್ಲಿ ಈ ಆಕ್ರಮಣವಾರಂಭವಾಯಿತೆಂದೂ ಜಪಾನೀ ಸೇನೆಯು ಅತಿ ಪ್ರಬಲವಾಗಿರುವದೆಂದೂ ತಿಳಿದುಬರುತ್ತದೆ. ವೈರಿ ಸೇನೆಗಳನ್ನು ತಂಡಿಳಿಸುತ್ತಿದ್ದ ಹಡಗಗಳ ಮೇಲೆ ಅಮೇರಿಕನ್ ವಿಮಾನಗಳು ಬಲವಾಗಿ ಧಾಳಿನಡಿಸಿ ಮುಳುಗಿಸಿರುವವು. ತಮ್ಮು ಎರಡು ಸೈನ್ಯವಾಹಕಗಳು ಮುಳುಗಿ ಬಾಕಿ ಎರಡು ಜಖಂಗೊಂಡಿರುವವೆಂದು ಜಪಾನರು ಒಪ್ಪಿರುವರು. ಪಶ್ಚಿಮ ಬದಿಯಲ್ಲಿ ನಡೆದ ಧಾಳಿಯನ್ನು ಅಮೇರಿಕನ್ ಸೇನೆ ಮತ್ತು ನೌಕೆಗಳು ಸೋಲಿಸಿರುವವು. ಮನಿಲಾದ ಬಳಿ ಬಂದಿಳಿದ ಜಪಾನೀಗಾಳಿ ಕೊಡಿಯವರು ಸೆಹಿಡಿಯಲ್ಪಟ್ಟಿರುವರು. ಮನಿಲಾದ ಮೇಲೆ ಬಾವುಟಾಗೂ ಜಪಾನೀ ನಿಮಾನಗಳು ಧಾಳಿಯಿಟ್ಟು ವಿಮಾನ ಮತ್ತು ನೌಕಾ ನಿಲ್ದಾಣಕ್ಕೆ ಜಖಂಗೊಳಿಸಿರುವವು. ಪರ್ಲ್ ಹಾರ್ಬರಿನ ಬಳಿ ನಡೆದ ಧಾಳಿಯಲ್ಲಿ ಅಮೇರಿಕನ್ ನೌಕಾಧಿಕಾರಿ ಇಸಾಕ್ ಕೇಂಪ್ ಬೆಲ್‌ಕೆಡ್ ಎಂಬವರು ಮೃತಪಟ್ಟಿರುವರು. ಫಿಲಿಪ್ಪೈನಿನ ವೈಮಾನಿಕ ಬಂದರದಲ್ಲಿ ಜಪಾನೀ ಪೆಶ್ಚೂಟಿಸ್ಟರು ಬಂದಿಳಿಯುತ್ತಿರುವರೆಂದೂ ಅಲ್ಲಿ ಹೊಸ ಹೊಸ ಸೇನೆಗಳನ್ನು ಬೇರೆ ಬೇರೆ ನೆಲೆಗಳಲ್ಲಿ ಇಳಿಸಿ ಜಪಾನರು ವ್ಯರ್ಥವಾಗಿ ಮುಂದೊತ್ತುತ್ತಿರುವರೆಂದೂ ತಿಳಿದು ಬರುತ್ತದೆ.

ಜಪಾನೀ ನೌಕೆಗಳಿಗೆ ಹೊಡೆತ

ಜಪಾನಿನ 29,000 ಟನ್ನುಗಳ 'ಹರುನಾ' ಎಂಬ ಯುದ್ಧಹಡಗವನ್ನು ಅಮೇರಿಕನ್ ವಿಮಾನಗಳು ಮುಳುಗಿಸಿರುವವು. ಆದರ ಜತೆಯಲ್ಲಿದ್ದ 29,000 ಟನ್ನಿನ ಇತರ ಮೂರು ಹಡಗಗಳನ್ನು ಜಲಸಮಾಧಿಗೊಳಿಸಲಾಗಿದೆ. ಈ ಹಡಗಗಳ ಬೇಟೆಗಾಗಿಯೇ ಮುಳುಗಿಸಲ್ಪಟ್ಟ ಪ್ರಿನ್ಸ್ ಓಫ್ ವೇಲ್ಸ್ ಮತ್ತು ರಿಪಲ್ಸ್‌ಗಳು ಹೊರಟಿದ್ದುವಂತೆ. ವೇಕ್ ದ್ವೀಪದ ಮೇಲೆ ಪ್ರಬಲಧಾಳಿ ಮತ್ತು ಆಕ್ರಮಣ ಯತ್ನ ನಡೆದಿದೆ. ಈ ನಡುವೆ ಜಲ್ಲಿ ಅಮೇರಿಕದ ವಿಮಾನಗಳು ಎರಡು ಜಪಾನಿ ಯುದ್ಧ ಹಡಗಗಳನ್ನು ಮುಳುಗಿಸಿರುವವು.

ಗ್ವಾಮ್ ದ್ವೀಪದ ಪತನ.

ಜಪಾನರು ಗ್ವಾಮ್ ದ್ವೀಪವನ್ನಾಕ್ರಮಿಸಿ ಅದರ ಎಲ್ಲಾ ವೈವಹಾರ ಸಂಬಂಧಗಳನ್ನು ಕಡಿದು ಹಾಕಿರುವದರಿಂದ ರೀತಿಯೋ ಮೂಲಕವಾಗಲೀ ಕೇಬ್ಲ್ ಮೂಲಕವಾಗಲೀ ವೈವಹಾರ ನಡಿಸಲು ಅಮೇರಿಕಾನರಿಗೆ ಅಸಾಧ್ಯವಾಗಿದೆ. ಅದು ಜಪಾನರ ವಶವಾದಂತೆಯೇ ಸರಿ. ಫಿಲಿಪ್ಪೈನಿನಲ್ಲಿ ನೂರಾರು ಜಪಾನೀ ಗಾಳಿಕೊಡಿಯವರನ್ನೂ ಸೈಫಿಕರನ್ನೂ ಅಮೇರಿಕಾನರು ಧ್ವಂಸಗೊಳಿಸಿರುವರು. ಅಲ್ಲಿ ಕೈಮೈ ಹೋರಾಟ ನಡೆಯುತ್ತಿದೆ. ಅಮೇರಿಕದ ಹವಾಯಿಯ ಮೇಲೆ ಪ್ರಬಲ ಜಪಾನಿ ಧಾಳಿ ನಡೆದು ಒಂದೇ ಬಾರಿ 20 ಜಪಾನೀ ವಿಮಾನಗಳು ಕೆಳಗುರುಳಲ್ಪಟ್ಟವು.

ಮಲಯಾದ ಯುದ್ಧ

ಮಲಯಾದ ಉತ್ತರ ಭಾಗದಲ್ಲಿ ಬ್ರಿಟಿಷ್-ಜಪಾನು ಹೋರಾಟವು ಅವ್ಯಾಹತವಾಗಿ ಸಾಗುತ್ತಿದೆ. ಕೋಟಬಾರು ಎಂಬ ಪ್ರಾಮುಖ್ಯ ನೆಲೆಯು ಜಪಾನರ ವಶವಾದುದರಿಂದ ಬ್ರಿಟಿಷ್ ಸೇನೆಯು ಆದರ ಸುತ್ತಲೂ ಸಜ್ಜಾಗುತ್ತಿದೆ. ಕೆನಾಂಗ್ ಪಟ್ಟಣದ ಮೇಲೆ ಬಲವಾದ ಧಾಳಿ ನಡೆದಿದೆ. ದರಂಬರ ತಾ. 9ರಿಂದ ತಾ. 11ರ ವರೆಗೆ ಮಲಯಾದಲ್ಲಿ 96 ವಿರೋಧಿ ವಿಮಾನಗಳನ್ನು ಕೆಳಗುರುಳಿಸಿರುವುದಾಗಿ ಜಪಾನರ ಪ್ರಕಾರವಿದೆ. ರಾಜಧಾನಿಯಾದ ಕರಾವಳಿಯಲ್ಲಿ ಅಮೇರಿಕ ಸರಕಾರವು ಬ್ರೇಕ್ ಬ್ಲಿಟನ್ನು ಜ್ಯಾರಿಗೆ ತಂದಿರುವೆಪಲ್ಲದೆ ಅಲ್ಲಿಯ ಸಮುದ್ರ ಬದಿಯನ್ನು ಖಾಲಿಮಾಡಿರುವದು. ಮನಿಲಾ, ಫಿಲಿಪ್ಪೈನ್ಸಿನ ಮೇಲೆ ಬಲವಾದ ವಿಮಾನ ಧಾಳಿ ನಡೆಯುತ್ತಿದೆ. ಒಂದು ಬಾರಿ 113ಜಪಾನು ವಿಮಾನಗಳು ಫಿಲಿಪ್ಪೈನಿನ ಮೇಲೆ ಧಾಳಿಯಿಟ್ಟವು. ಮನಿಲಾದಲ್ಲಿ ಪಂಚಮದಲದ ಚಟುವಟಿಕೆಗಳು ಕಂಡುಬಂದುವು. ಅವರು ಕೆಂಪು ಜ್ವಾಲೆಗಳ ಮೂಲಕ ವಿರೋಧಿಗೆ ಸಂಜ್ಞೆ ಮಾಡುತ್ತಿರುವುದನ್ನು ಕಂಡು ಹಿಡಿಯಲಾಯಿತು. ಮಲಯಾದ ರಣರಂಗವು ಅತಿ ಬಿರುಸಾಗಿ ಸಾಗುತ್ತಿದೆ. ಜಪಾನರು ಪ್ರಾಮುಖ್ಯ ವಿಮಾನ ನಿಲ್ದಾಣವೊಂದನ್ನು ಹಿಡಿದುಕೊಂಡರು.

ನೋಟೀಸು.

ಕುಕ್ಕೂರು ವಿ. ಮುನ್ಸಿಫ್ ಕೋರ್ಟಿನಲ್ಲಿ.

ಸಿ. ಸಿ. P. 589/191.
ಒ. O. S. 353/40.

ಅರ್ಜಿದಾರ್ತನಿ, ಪುಲಿಕ್ಕಾ of ಪುತ್ತೂರು ಎದ್ರಿರು—ದೇವಿ ನೆಂಪಲಿ ಕೊಡಾ

6ನೇ ಎದ್ರಿನಾ—ಶ ಕ್ಕಿಡಿ ಯಾನೆ ಶೆಲವಮ್ಮ, ಬಿನ್ನಪ್ಪು ಸೇಮಾತರ ಸೂಸೆ, ಪುತ್ತೂರು ತಾಲೂಕು, ಕೊಡಿಯಾಡಿ ಗ್ರಾಮಸ್ಥ.

ಸದ್ದಿ 6ನೇ ಎದ್ರಿಗೆ ಈ ನೋಟೀಸು ಮೂಲಕ ತಿಳಿಯಪಡಿಸುವದೇನಂದರೆ:-

ಮೇಲಂಡ ಅರ್ಜಿದಾರರು ಕೋರ್ಟಿಗೆ ಪ್ರಸ್ತುತ ಪಡಿಸಿರುವ ಅರ್ಜಿಯಲ್ಲಿ ಕೋರಿಕೆಯನ್ನು ಒಲಮಿನೆ ಇಲ್ಲವಾದಲ್ಲಿ ಸದ್ರಿ ಯೆತ್ತಿಹಾಕಿನ ಹಣ ಪತ್ರಗಳನ್ನು ಸರ್ಕಾರಿಸುವದೇ ಜಾ. 23-12-41 ಗೆ ಎಂಟ ನೆಲ್ಲಿ ಸೋಜಾಗಿಯಿದೆ. ಆಕೆರಿತು ಸಿನ್ನ ಆಕ್ಷೇಪ ಇದ್ದಲ್ಲಿ ಆರಿನ್ನ ಹಾಜ್ಯಾಗಿ ವೈಯಕ್ತಿಕ ಸಿ ತಿಳಿಸ್ಕಬಹುದು. ಎಂತ ತೋರ್ಪಡಿ ಹೊಯಿಂದ ಪ್ರಕಾರ ಈ ನೋಟೀಸು ತಿಳಿಸಿದೆ.

Puttur } B. Achyuth Baliga,
ತಾ. 9-12-41 } Pleader for Petitioner.

Degrees.	Books:	Medicines

Free H. L. M. S. M. B. H. M. D. etc Free Homeo-Ayur-Unani-Naturo degree by post also—Practitioners also get soon Homeo Materiamedica, Rs. 5. Homeo practice book Rs 4, Insanity Cure Pills Rs. 10 Enclose 2 annas stamps—

Principal, Indian Homeopath Institute & Society (Corr. Regd.)
P.O. Mahuva (Kathiawar Dt. India.)

Sidha-Kalpa Kavach (Regd.)

No. 3 Rs. 2. No. 2 Rs 5 No. 1. Rs 7 Special Rs. 10, Extra Special Rs. 17, for love marriage health, wealth. Ask any six questions with M. O Re 1/-and get correct answers by return post Life reading Rs 2 No. V. P. P. Send M. O. Tried pamphlets Prof. Dr. N. H. Chanabar, P. O. Mahuva (Kathiawar India.)

ಮುಂದಾಗುವುದನ್ನು ಇಂದೇ ತಿಳಿಯುವ ಕುತೂಹಲವಿಲ್ಲದವರಾರು?
ಇಡೀ ವರ್ಷದ ಭವಿಷ್ಯವನ್ನು ವರ್ಷಾರಂಭದಲ್ಲೇ ತಿಳಿಯಲಾಸೆಪಡುವವರಾರು?
ಹಾಗಿದ್ದರೆ **1942**ನೇ ಇಸವಿಯ

ವರ್ಷ ಭವಿಷ್ಯ!

ವನ್ನು ನೋಡಿ ನಿಮ್ಮ ಭವಿಷ್ಯವನ್ನು ತಿಳಿಯಿರಿ.

1942ನೇ ಇಸವಿಯಲ್ಲಿ ಗ್ರಹಗತಿ ಹೇಗಿದೆ? ಸಾಂಪತ್ತಿಕ ಸ್ಥಿತಿಯು ಹೇಗಾಗುವುದು? ವ್ಯಾಪಾರದ ಸ್ಥಿತಿಗತಿ ಹೇಗೆ ನಿಲ್ಲುವದು? ರಕ್ತಪ್ರಜನರ ಪೀಡೆಯಿದೆಯೆ? ಗೃಹಸುಖವಿದೆಯೆ? ಕಾಯಿಲೆ ಇದೆಯೇ? ಪ್ರವಾಸವಿದೆಯೆ? ಸ್ತ್ರೀಮುಖದಿಂದ ಧನಪ್ರಾಪ್ತಿಯಿದೆಯೆ? ವ್ಯಾಸಂಗದಲ್ಲಿ ಯಶಸ್ಸಿದೆಯೆ? ರಾಜಕೀಯ ಕಾರ್ಯದಲ್ಲಿ ಜಯವಿದೆಯೆ? ಮೊದಲಾದ ಹಲವು ವಿಷಯಗಳನ್ನು ತಿಳಿಯಕೊಳ್ಳಬೇಕಾದರೆ ವಿಶೇಷ ಪ್ರಯತ್ನದಿಂದ ತಯಾರಿಸಿದ ವರ್ಷ ಭವಿಷ್ಯವನ್ನು ನೋಡಿರಿ.

ಕಳೆದ ವರ್ಷ ಒಂದೇ ಒಂದು ತಿಂಗಳೊಳಗೆ 5000 ಪ್ರತಿಗಳು ಮಾರಾಟವಾಗಿದ್ದವು. ಇದೂ ನಾಲ್ಕಾನೆ ಕ್ರಯದಲ್ಲಿ! ಈ ವರ್ಷ ಇನ್ನೂ ಹೆಚ್ಚಿನ ಪ್ರಚಾರ ವೃದ್ಧಿಯಿಂದ ಒರೆ ಮೂರಾಣೆ ಕ್ರಯ ಇಡಲಾಗಿದೆ. 0-3-0ವ್ಯಾಂಪು ಕಳಿಸಿದ್ದರೆ ಒಂದು ಪ್ರತಿಯನ್ನು ಬುಕ್-ಪೋಸ್ಟಾಮಾಡಿ ಕಳಿಸಲಾಗುವುದು.

ವ್ಯಾಪಾರಿಗಳಿಗೆ ಧಾರಾಳ ಕಮಿಷನ್!
ಪುಸ್ತಕಗಳಿಗೆ ಬರೆಯಿರಿ.

ನವಭಾರತ ಪುಸ್ತಕ ಭಂಡಾರ, ಉಡುಪಿ.

The Canara Banking Corporation Ltd.

(Incorporated in British India with Limited Liability)

ESTD: 1906.

Head Office:- UDIPI

Announcement

A Branch of the Bank has been opened at

HASSAN

(Mysore State)

On Friday the 12th December 1941.

ಉಡುಪಿ, ಗುರುವಾರ, ೧೮-೧೨-೧೯೪೧

ಲೋಕ ಯುದ್ಧ.

ಜರ್ಮನಿ ಇಟಲಿಗಳು ಅಮೆರಿಕದ ಮೇಲೆ ಯುದ್ಧ ಸಾರಿದಾಗಲೇ ರಣದಾವಾಗ್ನಿಯು ಇಡೀ ಭೂಗೋಲವನ್ನಾವರಿಸಿದಂತಾಗಿದೆ. ಹಿಟ್ಲರು ತನ್ನ ಭಾಷಣದಲ್ಲಂದಿರುವಂತೆ ರುಸವೆಲ್ಟ್–ಹಿಟ್ಲರೊಳಗಿನ ಖಾನ್ಗಿಭಿಪ್ರಾಯಗಳು ಯಾವ ವಿಧದಿಂದಲೂ ಜತೆಗೂಡದಷ್ಟಿವೆ. ಸರ್ವಾಧಿಕಾರಿತ್ವದ ನಿಜಮೂರ್ತಿ ಹಿಟ್ಲರಾದರೆ ಪ್ರಜಾಸತ್ತೆಯ ಪರಮಭಕ್ತರು ರುಸವೆಲ್ಟರು. ಇಂಗ್ಲಾಂಡು ಅನಿವಾರ್ಯವಾಗಿ ಹಿಟ್ಲರರ ರಣವೀಳ್ಯವನ್ನು ಸ್ವೀಕರಿಸಬೇಕಾಗಿ ಬಂದಿತ್ತು; ಆದರೆ ರುಸವೆಲ್ಟರು ಅದನ್ನೆಂಗೀಕರಿಸಲು ಹಲವು ಎಲ್ಲೆಗಳನ್ನು ಮಾಟುತ್ತಾ ಬಂದಿದ್ದರೆಂಬುದನ್ನು ಯುದ್ಧಾರಂಭದಿಂದ ಈ ವರೆಗಿನ ಅಮೆರಿಕದ ಘೋರಣೆಯ ಆಪಲೋಕನದಿಂದ ತಿಳಿಯಬಹುದು. ಅಮೆರಿಕಾ-ಜರ್ಮನ್ನಗಳೊಳಗಿನ ಪ್ರತ್ಯಕ್ಷ ಘರ್ಷಣೆಯು ಅನಿವಾರ್ಯವೆಂಬುದು ಸ್ವತಃ ಸಿದ್ಧವಾಗಿದ್ದರೂ ಆದು ಇನ್ನು ಬೇಗನೆ ಸಂಭವಿಸುವದೆಂಬ ನಿರೀಕ್ಷೆಯಿರಲಿಲ್ಲ. ಆದರ ಕಾರಣವು ಹಿಟ್ಲರರ ಮಾತಿನಿಂದಲೇ ಗೋಚರಿಸುತ್ತದೆ "ನಾನು ಸ್ವತಃ ಕಾರ್ಯಕ್ಷಕೊಳ್ಳುವಷ್ಟು ನಮ್ಮನ್ನು ಆಕ್ರಮಿಕವು ಉದ್ರೇಕಿಸಿದ್ದಿತು. ಈಗ ಜಪಾನು ಯುದ್ಧಕ್ಕಿಳಿದಿದೆ. ತ್ರಿರಾಷ್ಟ್ರ ಒಪ್ಪಂದಕ್ಕೆ ವಿಧೇಯವಾಗಿ ನಾವು ಅಮೆರಿಕದ ಮೇರೆ ಯುದ್ಧ ಸಾರಲೇ ಬೇಕಾಗಿದೆ"! ಜೂರ್ಜ್ ಬೆಯಾಂಗ್ ಕೈಶೇಕರು ಇಂತಹ ಒಪ್ಪಂದಕ್ಕೆ ಕಟ್ಟುಬಿದ್ದೇ ಆಕ್ಸಿಸ್ ರಾಷ್ಟ್ರಗಳ ಮೇರೆ ಯುದ್ಧ ಸಾರಿದ್ದಾರ. ಹೀಗೆ, ಈಗ ಪ್ರಜಾಸತ್ತಾ ರಾಷ್ಟ್ರಗಳು ಮತ್ತು ಸರ್ವಾಧಿಕಾರೀ ರಾಷ್ಟ್ರಗಳು ಇತ್ಯಾದಿಯಾಗಿ ಏಕ ರಣರಂಗದಲ್ಲಿ ಸ್ಪರ್ಧಕ್ಕೆ ಹೋರಾಟಕ್ಕಿಳಿದಿವೆ. ಈ ಯುದ್ಧ ಕೇವಲಾನವನ್ನು ಹೊಂದಿಕೊಂಡು ಆಖಿಲ ಜಗತ್ತಿನ ತಲಾಂತರಗಳ ಭವಿಷ್ಯವಿದೆ ಎಂಬುದು ನಿಸ್ಸಂಶಯ.

ಈ ಮಹಾಯುದ್ಧದ ಭವಿಷ್ಯನನ್ನಾಡಿಸುವ ಮೊದಲು ನಾವು ಆಧಾರವಾಗಿಟ್ಟುಕೊಳ್ಳಬೇಕಾದ ಕೆಲವು ಭಾಷೀ ಸಂಭವನೀಯ ಘಟನೆಗಳಿವೆ. ಆಪೈಕಿ ಮುಖ್ಯ ಪ್ರಶ್ನೆಯೆಂದರೆ ರಷ್ಯಾ-ಜಪಾನುಗಳೊಳಗಿನ ಸಂಬಂಧ ಹೇಗೆ ಎಂಬುದು. ಇಪ್ಪರದು ರಾಷ್ಟ್ರಗಳೊಳಗಿನ ನೈಮನಸ್ಸು ಚಿರಪರಿಚಿತವಾದುದು. ಕೆಲವೇ ದಿನಗಳ ಪೂರ್ವದಲ್ಲಿ ಜಪಾನು ಆಂಗ್ಲೋ-ಅಮೆರಿಕಗಳನ್ನು ಕೆಣಕುವದಕ್ಕಿಂತಲೂ ರಷ್ಯದ ಮೇಲೆ ಬೀಳುವದೇ ಹೆಚ್ಚು ಸಂಭವನೀಯವಾಗಿ ಕಂಡು ಬಂದಿತ್ತು. ಮುಂದಾದರೂ ಆ ಹೋರಾಟವೇಳಲಾರದೆನ್ನಲು ಬರುವದಿಲ್ಲ. ಪ್ರಕೃತ ಈ ಸೆಣಸಾಟವು ರಷ್ಯದ ಧೋರಣೆಯನ್ನು ಅವಲಂಬಿಸಿಯೇ ಉಂಟಾಗಬೇಕಾಗಿದೆ. ಮೊಲೊಟೊವ್-ಮಟ್ಸುಪೋಕಾ ಅನಾಕ್ರಮಣ ಒಪ್ಪಂದವು ಇನ್ನೂ ಸಜೀವವಾಗಿದೆ, ರೋಮಿನಲ್ಲಿ ಮೊನ್ನೆ ತಾನೇ ನಡೆದ ಆಕ್ಸಿಸ್ ರಾಷ್ಟ್ರಗಳ ಮಿಲಿಟರಿ ಒಪ್ಪಂದದಲ್ಲಿ ಜಂಗ್ಲೋ-ಅಮೆರಿಕಗಳೊಡನೆ ಹೋರಾಡುವ ಗುರಿಯನ್ನು ಕಾಣಿಸಲಾಗಿದೆಯಲ್ಲದ ರಷ್ಯದ ಉಲ್ಲೇಖವಿಲ್ಲ. ರಷ್ಯದ ಪ್ರತಿನಿಧಿಗಳು ಜಪಾನ್ನು 'ನಮ್ಮೆಲ್ಲರ ಪೈರಿ' ಎಂದು ಸಂಬೋಧಿಸುತ್ತಿರುವಾದರೂ ರಷ್ಯವು ಜಪಾನಿನ ಮೇಲೆ ಯುದ್ಧ ಸಾರಿಲ್ಲ. ಹಿಟ್ಲರರು ರಕ್ಯಾದಲ್ಲಿಗೆ ಶಾಂತಿ ದೂತರನ್ನು ಕಳುಹಿಸಲೆಂಬ ಗಾಳಿ ಮಾತೇಯಿದೆ. ಆದರೆ ಸೋವಿಯೆಟ್ ಸರಕಾರವು ಮುಖಪತ್ರವಾಗಿರುವ 'ಪ್ರಾವ್ದಾ'ವು, "ಜಪಾನು ಯುದ್ಧದಿಂದ ಏನಾದರೂ ಪರಿಣಾಮವಾಗಿರುವುದಾದರೆ,ಅದು ನಮ್ಮನ್ನುತ್ತು ನಿತ್ರರಾಷ್ಟ್ರಗಳ ಮೈತ್ರಿಯನ್ನು ಇನ್ನಷ್ಟು ಬೆಳೆಸಿರುವುದು" ಎಂದು ಸ್ಪಷ್ಟವಾಗಿ ತಿಳಿಸಿದ. ಆದ್ದರಿಂದ ರಷ್ಯವನ್ನೊಲಿಸಿಕೊಳ್ಳುವ ಸರ್ವಾಧಿಕಾರೀ ರಾಷ್ಟ್ರಗಳ ಪ್ರಯತ್ನವು ಪೂರ್ಣ ನಿಷ್ಫಲವಾಗಿರುವುದಂಬುವರಲ್ಲಿ ಅನುಮಾನವಿಲ್ಲ. ಆದರೆ ಅವಕ್ಕೆಗ ಜಪಾನಿನ ಮೇಲೆ ಧಾಳಿಯಿಡುವದು ಸಾಧ್ಯವೆ? ಪ್ಲಾಡಿವೋಸ್ಟಕ್ ನಿಲ್ದಾಣದಿಂದ ರಷ್ಯವು ಜಪಾನಿನ ಮೇಲೆ ಹೊಡೆಯಪತ್ತಿದರೆ ಅದು ಸಹಜಲಾದಿಗ ವೇದನೆಯನ್ನು ವಿರೋಧಿಗೆ ಕೊಡಬಲ್ಲುದೆಂಬುವರಲ್ಲಿ ಅನುಮಾನವಿಲ್ಲ. ಆದರೆ ಮಂಚೂರಿಯದಲ್ಲಿ ಜಪಾನಿನ ಬಿಡಿ ಬಿಡಿ ಸೈನಿಕಗಳು ಸನ್ನದ್ಧವಾಗಿ ನಿಂತಿವೆ. ರಷ್ಯವು ಅವುಗಳನ್ನು ನಾಶನಮಾಡದೆ ವಿಜಯವನ್ನು ಹಾರೈಸಲು ಸಾಧ್ಯನಿಲ್ಲ. ಇಂತಹ ಕಷ್ಟದಾಯಕನಾದ ಹೊಣೆಯನ್ನು, ಜರ್ಮನ್ ಯುದ್ಧದಿಂದ ಜರ್ಝರಿತವಾಗಿರುವ ರಷ್ಯವು ಈ ಕಾಲದಲ್ಲಿ ಹೊರಬಲ್ಲುದೆ? ಮೇಲಾಗಿ ಎಲ್ಲವೂ ಹಂಚಿಕೆಯಂತೆ ಸುಗಮವಾಗಿ ಸಾಗಿದರೆ ರಶ್ಯಾವಿಳಿದುದರಿಂದ ಇಂಗ್ಲಾಂಡು ಅಮೆರಿಕಗಳಿಗೆ ಸಹಾಯವಾಗಬಹುದು; ನಿರ್ಸ್ಥಿತಿಯು ಹತೋಟಿ ತಪ್ಪಿದಲ್ಲಿ ರಶ್ಯವು ಹೊಸ ಆಪತ್ತನ್ನು ಮಂತ್ರಿಸಿದಂತಾಗಬಹುದು. ಜಪಾನಿನ ಸಂಬಂಧದಲ್ಲಿ ರಶ್ಯವನ್ನು ಕೆಣಕದಂತೆ ಆಕ್ಸಿಸ್ ರಾಷ್ಟ್ರಗಳು ಮುಂಜಾಗ್ರತೆ ವಹಿಸಿರುವಂತೆಯೇ, ರಶ್ಯವು ಜಪಾನಿನ ಮೇಲೆ ಬೀಳದಂತೆ ಜಾಗ್ರತೆ ವಹಿಸುವದರಲ್ಲಿ ಮಿತ್ರರಾಷ್ಟ್ರಗಳ ಹಿತಸಾಧನೆಯಿದೆ ಎನ್ನಬಹುದು. ವಸ್ತುಸ್ಥಿತಿಯನ್ನು ಮುಂದಟ್ಟು ಮಾಡಿಕೊಂಡ ರಶ್ಯಾದವರೂ, ತನಗೆ ಅನಿವಾರ್ಯವಾದ ಹೊರತು, ತಾನಾಗಿ ಜಪಾನನ್ನು ಕೆಣಕುವ ಉತ್ಸಾಹ ತೋರಿಸುವಂತಿಲ್ಲ.

